# ಶ್ರೀಗುರುಸಾರ್ವಭೌಮ

ಸಾಂಸ್ಕೃತಿಕ ಕನ್ನಡ ಮಾಸಪತ್ರಿಕೆ

**ಗುರುರಾದ್ಯಃ ಸ್ವಸಿದ್ಧಾಂತಪ್ರತಿಷ್ಠಾಪನಪಂಡಿತಮ್ । ಶ್ರುತ್ವಾಯಂ ವ್ಯಾಸನಿಕಟೇ ನಿಶ್ಚಿಂತ ಇವ ವರ್ತತೇ ॥**

**ಸಂಪುಟ : 34 ಮಾರ್ಗಶೀರ್ಷ – December-January 2007 ಸಂಚಿಕೆ : 10**



ಸಂಸ್ಥಾಪನಾ ಪೋಷಕರು : **ಪ್ರಾತಃಸ್ಮರಣೀಯ ಶ್ರೀಸುಜಯೀಂದ್ರತೀರ್ಥಶ್ರೀಪಾದಂಗಳವರು**

ಸಾಮ್ರಾಟ್ ಪೋಷಕರು : **ಶ್ರೀಸುಶಮೀಂದ್ರತೀರ್ಥಶ್ರೀಪಾದಂಗಳವರು**
ಪೀಠಾಧೀಶ್ವರರು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಹಾಗೂ

**ಶ್ರೀಸುಯತೀಂದ್ರತೀರ್ಥಶ್ರೀಪಾದಂಗಳವರು**
ಉತ್ತರಾಧಿಕಾರಿಗಳು, ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಪ್ರಧಾನ ಸಂಪಾದಕರು : **ರಾಜಾ. ಎಸ್. ರಾಜಗೋಪಾಲಾಚಾರ್ಯ**
ಶ್ರೀಪಾದಂಗಳವರ ಆಪ್ತ ಕಾರ್ಯದರ್ಶಿಗಳು
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಮಂತ್ರಾಲಯ

ಕಾರ್ಯನಿರ್ವಾಹಕ ಸಂಪಾದಕರು : **ರಾಜಾ. ಎಲ್. ಸೂರೀಂದ್ರಾಚಾರ್ಯ**

ಸಂಪಾದಕರು : **ಕಡಪ ರಾಘವೇಂದ್ರಾಚಾರ್ಯ**

ಉಪ-ಸಂಪಾದಕರು : **ಪಿ.ವಿ. ಹರಿನಾಥ್**

ಸಂಪಾದಕ ಮಂಡಳಿ : **ವಿದ್ವಾನ್ ಶ್ರೀ ಕುರುಡಿ. ಸುಶೀಲೇಂದ್ರಾಚಾರ್ಯ**
**ಡಾ. ಹೆಚ್.ಜಿ. ವೇಂಕಟರಾಘವೇಂದ್ರಾಚಾರ್ಯ**
**ವಿದ್ವಾನ್ ಶ್ರೀ ಪುರಾಣಿಕ. ಸುಬ್ರಹ್ಮಣ್ಯಾಚಾರ್ಯ**
**ಶ್ರೀ ಬಿ.ಎ. ಪಾಟೀಲ್**



ಪ್ರಧಾನ ಕಛೇರಿ :
**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಅಡ್ಮಿನಿಸ್ಟ್ರೇಟಿವ್ ಆಫೀಸ್, ಶ್ರೀರಾಘವೇಂದ್ರಸ್ವಾಮಿಗಳವರ ಮಠ
ಮಂತ್ರಾಲಯ – 518 345, ಜಿಲ್ಲಾ : ಕರ್ನೂಲ್
**ದೂರವಾಣಿ ಸಂಖ್ಯೆ – 08512-279887 — ಮೊಬೈಲ್ – 099857-03033**

ಬೆಂಗಳೂರು ಶಾಖಾ ಕಛೇರಿ :
**ಶ್ರೀಗುರುಸಾರ್ವಭೌಮ ಮಾಸಪತ್ರಿಕೆ**
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ನಂ. 4, ಸೀತಾಪತಿ ಅಗ್ರಹಾರ
ಹೊಸ ತರಗುಪೇಟೆ, ಬೆಂಗಳೂರು – 560 002
**ಬೆಂಗಳೂರು ಕಛೇರಿಯ ದೂರವಾಣಿ ಸಂಖ್ಯೆ :**
**080-41146081, 9341387714, 9342651516**


## ವಿಷಯಸೂಚೀ


ಮಂಗಳಾಚರಣೆ ೦೩

ಸಂಪಾದಕೀಯ ೦೪

**ಲೇಖನಮಾಲಾ**

ಗುರುವಿನಿಂದಲೇ ವಿದ್ಯೆ (ಬ್ರಹ್ಮಜ್ಞಾನ) — ವಿ. ರಮೇಶಾಚಾರ್ಯ ೦೫

ಜೀವನ ಸಂಗ್ರಾಮದಲ್ಲಿ ಶ್ರುತಿ-ಸ್ಮೃತಿ ಮಾರ್ಗದರ್ಶನ — ಕೋಟೇಶ್ವರ ಸೂರ್ಯನಾರಾಯಣರಾವ್ ೧೪

ಸರ್ವಕರ್ಮಸಮರ್ಪಣೆ — ವರದರಾಜ ಗುತ್ತಲ್ ೧೭

ಅಪೂರ್ವ ಯೋಗಸಿದ್ಧಿಗಳು ಮತ್ತು ಚತುಷ್ಷಷ್ಠಿಕಲಾವಿದ್ಯೆಗಳು — ಕೆ.ಎಲ್. ಪುಷ್ಕರಾಚಾರ್ಯ ೧೯

ದೇವರ ನಾಮ — ಶ್ರೀಮತಿ ಪದ್ಮಾ ಪಾಂಡುರಂಗೀ ೨೫

ವಿಧರ್ಮೀಯರ ಮೇಲೆ ಮಾಧ್ವಯತಿಗಳ ಪ್ರಭಾವ — ಬಿ.ಆರ್. ತಂತ್ರಿ ೩೧

ಶ್ರೀರಾಮಸೇತು ಅನೇಕರ ದೃಷ್ಟಿಯಲ್ಲಿ — ಪಿ.ವಿ. ಹರಿನಾಥ್ ೩೪

ಗೀತೆ ಮತ್ತು ಶ್ರೀಮಧ್ವಾಚಾರ್ಯರು — ಡಾ. ಪಾಂಡುರಂಗ ಜೋರಾಪುರ ೩೮

ಪವಮಾನ ಜಗದಾ ಪ್ರಾಣ — ಎನ್.ಆರ್. ದ್ವಾರಕಾನಾಥಾಚಾರ್ಯ ೪೨

ಶ್ರೀರಾಯರ ಗೀತಾವಿವೃತಿಯ ವೈಶಿಷ್ಟ್ಯ — ಶ್ರೀನಿವಾಸ ಸು. ಮಠದ ೪೬

ಪರ್ಯಟನೆ ೪೮



**[ ಪತ್ರಿಕೆಯಲ್ಲಿ ಪ್ರಕಟವಾದ ವಿಚಾರಗಳಿಗೆ ಆಯಾ ಲೇಖನದ ಲೇಖಕರೇ ಜವಾಬ್ದಾರರು ]**


## ಶ್ರೀಗುರುಸಾರ್ವಭೌಮಕ್ಕೆ SMS

ಪ್ರಿಯ ಓದುಗರೇ,

ಅಂಚೆವೆಚ್ಚ ಅಧಿಕವಾಗಿರುವ ಈ ದಿನಗಳಲ್ಲಿ ಓದುಗರ ಮತ್ತು ಪತ್ರಿಕೆಯ ನಡುವಿನ ಸಂಬಂಧವನ್ನು ಅಭಿವೃದ್ಧಿಪಡಿಸುವುದಕ್ಕೋಸ್ಕರ ಇನ್ನು ಮುಂದೆ ನಿಮ್ಮ ಶ್ರೀಗುರುಸಾರ್ವಭೌಮಕ್ಕೆ ನಿಮ್ಮ ಅಭಿಪ್ರಾಯಗಳನ್ನು ಎಸ್.ಎಂ.ಎಸ್. ಮೂಲಕವಾಗಿ ತಿಳಿಸಬಹುದಾಗಿದೆ. ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳು, ಸುದ್ದಿಗಳು ಹಾಗೂ ಇನ್ನಿತರೇ ವಿಷಯಗಳು ನಿಮಗೆ ಇಷ್ಟವಾದಲ್ಲಿ, ಇಷ್ಟವಾಗದಿದ್ದಲ್ಲಿ ನೀವು ನೇರ ಎಸ್.ಎಂ.ಎಸ್. ಮೂಲಕ ನಮ್ಮನ್ನು ಅಭಿನಂದಿಸಬಹುದು, ನಮಗೆ ಸಲಹೆಯನ್ನೂ ನೀಡಬಹುದು. ಆಯ್ದ ಎಸ್.ಎಂ.ಎಸ್.ಗಳನ್ನು ಪತ್ರಿಕೆಯಲ್ಲಿ ಪ್ರಕಟಿಸುವ ಯೋಜನೆಯನ್ನೂ ಕೂಡ ಸಂಪಾದಕಮಂಡಲಿ ಹೊಂದಿದೆ. ಎಸ್.ಎಂ.ಎಸ್.ಗಳನ್ನು ಕಳುಹಿಸುವಾಗ ಎಲ್.ಎಂ. ನಂಬರನ್ನು ತಪ್ಪದೇ ನಮೂದಿಸಿ.

**ಈ ಸಂಖ್ಯೆಗೆ ಎಸ್.ಎಂ.ಎಸ್. ಮಾಡಿ**

**9341387714**

# ಮಂಗಳಾಚರಣೆ

ಮಂಜುಸಿಂಜನ್ಮಣಿಶ್ರೇಣಿರಾಜನ್ನೂಪುರೋದಾರಪಾದಾರವಿಂದಮ್ ।
ಉಲ್ಲಸನ್ನೃತಲೀಲಾವಿಲಾಸಂ ನಂದಯಾಮೋ ವಯಂ ನಂದಸೂನುಮ್ ॥

ಚಾರುಚಾಮೀಕರೋದ್ಭಾಸಿಭಾಸೋದ್ಧಿಪ್ತಸೌದಾಮಿನೀದಾಮಕಾಂಚಿಮ್ ।
ವಲ್ಲವೀವಲ್ಲರೀಭೃಂಗರಾಜಂ ನಂದಯಾಮೋ ವಯಂ ನಂದಸೂನುಮ್ ॥

ಸಂತತಾನಂತವೇದಾಂತಮೂರ್ತಿಂ ವೈಜಯಂತೀಂ ಶ್ರಿಯಾ ವೈ ಜಯಂತೀಮ್ ।
ಬಿಭೃತಂ ವಕ್ಷಸಾದಭ್ರಮೇತಂ ನಂದಯಾಮೋ ವಯಂ ನಂದಸೂನುಮ್ ॥

ಝುಂ ಝುಂ ಝುಂ ಝುಂ ಝುಕಾರಂ ಝುಷ ಝುಷ ಝುಷಿತಂ ಜಾನುದೇಶಂ ಝುಕರಂ
ಹುಂ ಹುಂ ಹುಂ ಹುಂ ಹಕಾರಂ ಹರಿತಕಹಹಸಾ ಯಂದಿಶೇ ವಂ ವಕಾರಮ್ ।
ವಂ ವಂ ವಂ ವಂ ವಕಾರಂ ವದನದಲಿತತಂ ವಾಮಪಕ್ಷಂ ಸುಪಕ್ಷಂ
ಲಂ ಲಂ ಲಂ ಲಂ ಲಕಾರಂ ಲಘುವಣ ವಿಜಯಃ ಪಾತು ಮಾಂ ನಾರಸಿಂಹಃ ॥

ಆಕೇರಲಂ ತಥಾಸೇತುಮಾಗಂಗಂ ಚಾಹಿಮಾಲಯಮ್ ।
ನಿರಾಕೃತಾದ್ವೈತಶೈವಂ ವಿಬುಧೇಂದ್ರಗುರುಂ ಭಜೇ ॥

## ಶ್ರೀಸುಶಮೀಂದ್ರವಾಣಿ

ಸ್ವರ್ಣಂ ಯಥಾ ಗ್ರಾವಸು ಹೇಮಕಾರಃ
ಕ್ಷೇತ್ರೇಷು ಯೋಗೈಸ್ತದಭಿಜ್ಞ ಆಪ್ನುಯಾತ್ ।
ಕ್ಷೇತ್ರೇಷು ದೇಹೇಷು ತಥಾತ್ಮಯೋಗೈಃ
ಅಧ್ಯಾತ್ಮವಿದ್ಬ್ರಹ್ಮಗತಿಂ ಲಭೇತ್ ॥

- ಭಾಗವತ

**ಸುವರ್ಣವನ್ನು ಸಂಪಾದಿಸುವ ಸಮರ್ಥನಾದ ಅಕ್ಕಸಾಲಿಗನು ಕಲ್ಲಿನ ನೆಲದಲ್ಲಿ ತನ್ನ ವಿಶೇಷ ಪ್ರಜ್ಞೆಯಿಂದ ಹೇಗೆ ಚಿನ್ನವನ್ನು ಪಡೆಯುವನೋ, ಹಾಗೆ ಆತ್ಮನಿಷ್ಠನು ಈ ದೇಹದಲ್ಲಿ ಆಧ್ಯಾತ್ಮಮಾರ್ಗಗಳಿಂದ ಬ್ರಹ್ಮಜ್ಞಾನವನ್ನು ಪಡೆಯುತ್ತಾನೆ.**

**ಇಂತಹಾ ಆಧ್ಯಾತ್ಮಪ್ರಬೋಧಕ ಪ್ರಾಚೀನ ಗ್ರಂಥಗಳು ಅನೇಕರ ಮನೆಯಲ್ಲಿ ಓದುವವರಿಲ್ಲದೆ ಹಾಳಾಗುತ್ತಲಿವೆ. ಅಂತಹಾ ಗ್ರಂಥಗಳು ಸರ್ವರಿಗೂ ಸಿಗುವಂತೆ ಮಾಡಲು ಅವುಗಳನ್ನು ಪ್ರಾಚೀನ ವಿದ್ಯಾಸಂಸ್ಥೆಗಳಿಗೆ ದಾನಮಾಡುವುದು ಧರ್ಮಕಾರ್ಯ.**



# ಸಂಪಾದಕೀಯ

ಇತ್ತೀಚೆಗೆ ಉಪಾಧ್ಯಾಯರು ವಿದ್ಯಾರ್ಥಿಗಳನ್ನು ಹೊಡೆದು ಗಾಯಗೊಳಿಸಿದ ಸುದ್ದಿಗಳು ಪತ್ರಿಕೆಗಳಲ್ಲಿ ಉಗ್ರಗಾಮಿಗಳನ್ನು ಹಿಡಿದ ಸುದ್ದಿಯಂತೆ ಚಿತ್ರಸಮೇತ ಪ್ರಕಟವಾಗುತ್ತಿದೆ.

ಗುರು-ಶಿಷ್ಯರ ಸಂಬಂಧ ತಂದೆ-ಮಕ್ಕಳ ಸಂಬಂಧದಷ್ಟೇ ಪವಿತ್ರವಾದುದು. ಆದ್ದರಿಂದಲೇ ಈ ಕ್ಷೇತ್ರದಲ್ಲಿ ಹೆಚ್ಚಿನ ಗೌರವವಿದೆ. ಕೆಲವೊಮ್ಮೆ ಈ ಕ್ಷೇತ್ರದಲ್ಲೂ ಉಪಾಧ್ಯಾಯರಿಂದ ತಪ್ಪುಗಳಾಗುತ್ತವೆ. ಆದರೆ ಅದನ್ನು ಜಗಜ್ಜಾಹೀರಾಗುವಂತೆ ಮಾಡಿ, ''ಶಿಕ್ಷಕರು ತಪ್ಪಿತಸ್ಥರು'' ಎಂಬ ಹಣೆಪಟ್ಟಿಯ ಸುದ್ದಿಗಳು ಬಂದರೆ ಸಹಜವಾಗಿ ಹೆದರುವ, ಹೊಡೆಯದ ಶಿಕ್ಷಕ ವರ್ಗವೂ ಸಹ ತಪ್ಪು ಮಾಡಿದವನನ್ನು ತಿಳಿಯಾಗಿ ಶಿಕ್ಷಿಸುವುದಿರಲಿ, ಬಯ್ಯಲೂ ಹೋಗದೇ ''ನಮ್ಮ ಸಂಬಳ ನಮಗೆ ಬರುವಾಗ ಇಲ್ಲದ ಉಸಾಬರಿ ನಮಗೇಕೆ?'' ಎಂದು ಕೈಬಿಡುವ ಸಂಭವವಿಲ್ಲವೇ? (ಹೀಗೆ ಈಗಾಗಲೇ ನಡೆದಿದೆ). ಇತ್ತ ಕಡೆ ಶಿಕ್ಷಕರೇನಾದರೂ ಶಿಕ್ಷಿಸಿದಲ್ಲಿ ಪೋಲೀಸರಿಗೆ ದೂರು ನೀಡಬಹುದೆಂಬ ಧೈರ್ಯ ವಿದ್ಯಾರ್ಥಿಗಳಲ್ಲಿ ಬಂದಾಗ ಲಗಾಮಿಲ್ಲದವರಾಗಿ ಹೆದರುವುದೇ ಇಲ್ಲ. ಇದರಿಂದ ಯಾರಿಗೆ ನಷ್ಟ?

ಶಿಕ್ಷನೋರ್ವ ಹೊಡೆದದ್ದನ್ನು ದೊಡ್ಡದು ಮಾಡಿ ಟಿ.ವಿ. ಚಾನೆಲ್ ನವರನ್ನು ಕರೆಸಿ ತಮ್ಮ ವಠಾರದವರೆಲ್ಲರೊಡನೆ ಮಂದಹಾಸದಿಂದಲೇ ಕಂಪ್ಲೇಂಟ್ ನೀಡಿ, ಗ್ರೂಪ್ ಫೋಟೋ ತೆಗೆಸಿಕೊಳ್ಳುವ ತಂದೆ-ತಾಯಂದಿರು ಎಂದಾದರೂ ಉಪಾಧ್ಯಾಯರ ಬಳಿ ಹೋಗಿ ''ನಮ್ಮ ಮಗ ಹೇಗೆ ಓದುತ್ತಾನೆ? ತರಗತಿಯ ಹಾಜರಾತಿ ಸರಿಯಿದೆಯೇ? ತಪ್ಪು ಮಾಡಿದರೆ ಬೈದು ಬುದ್ಧಿ ಹೇಳಿ, ಮಾತು ಕೇಳದಿದ್ದಲ್ಲಿ ಎರಡೇಟು ಹಾಕಿ ದಾರಿಗೆ ತನ್ನಿ'' ಎಂದು ಹೇಳಿದ್ದಾರೆಯೇ? ನಮ್ಮ ದೇಶದ ಘಟಾನುಘಟಿ ವಿದ್ಯಾವಂತ-ರೆಲ್ಲರೂ ಗುರುಗಳ ಬೆತ್ತದ ರುಚಿ ಕಂಡವರೇ. ಇದು ಭಾರತೀಯ ಶೈಲಿ. ಅಮೆರಿಕದ ಶೈಲಿಯಲ್ಲ. ಇಂದು ಶಾಲಾಮಕ್ಕಳು ತಂದೆ-ತಾಯಂದಿರ ಮಾತುಗಳಿಗಿಂತ 'ಮಿಸ್', 'ಸಾರ್' ರವರ ಮಾತು-ಗಳನ್ನೇ ಗಮನವಿಟ್ಟು ಕೇಳಿ ಅದರಂತೆ ಚಾಚೂ ತಪ್ಪದೇ ನಡೆಯುತ್ತಾರೆ. ಹೆದರಿಕೆಗೋ, ಗೌರವಕ್ಕೋ ಅದು ಬೇರೆ. **ಒಳ್ಳೆಯದಂತೂ ಆಗುತ್ತಿದೆ.** ಒಬ್ಬನನ್ನು ಹೊಡೆಯುವ ಹಕ್ಕು ರಾಷ್ಟ್ರಪತಿಗೂ ಇಲ್ಲ. ಆದರೆ ಒಬ್ಬ ಪೋಲೀಸ್ ಕಾನ್ಸ್‌ಟೇಬಲ್‌ಗೆ ಹೊಡೆಯುವ ಹಕ್ಕು ಸಂವಿಧಾನಬದ್ಧವಾಗಿದೆ. ಅಂತಹಾ ಪೋಲೀಸರಿಗೆ ಹೆದರದೆ ಎದುರು ತಿರುಗುವ ಜನರಿರುವ ಈ ದೇಶದಲ್ಲಿ ಸಹಜವಾಗಿ ಹೊಡೆಯುವ ಅಧಿಕಾರವೇ ಇಲ್ಲದ ಯಕಶ್ಚಿತ್ ಒಬ್ಬ ಟೀಚರ್‌ನನ್ನು ನಪುಂಸಕನಂತೆ (ಶಿಕ್ಷಿಸುವ, ಬೈಯ್ಯುವ ಅಧಿಕಾರವಿಲ್ಲ, ಇತ್ಯಾದಿ) ಚಿತ್ರಿಸಿ ವರದಿ ಮಾಡಿದರೆ ಹುಡುಗರು ಅಧ್ಯಾಪಕರಿಗೇಕೆ ಹೆದರುತ್ತಾರೆ? ಅಷ್ಟೇ ಅಲ್ಲ, ಕೆಲ ಮೊಂಡು ಹುಡುಗರನ್ನು ಅಲ್ಪ ಶಿಕ್ಷೆಯ ಮೂಲಕವೇ ದಾರಿಗೆ ತರಬೇಕಾಗುತ್ತದೆ. ಅದನ್ನೂ ನಿಷೇಧಿಸಿದರೆ ಇದರ ದುಷ್ಪರಿಣಾಮ ಕೆಲವರ್ಷಗಳಲ್ಲಿ ಕಾಣಬಹುದು. ಹಾಗಾದರೆ **ಹೊಡೆಯುವುದೇ ಮೂಲಧರ್ಮವೆಂದೂ ಪ್ರತಿಪಾದಿಸುವುದು ನಮ್ಮ ಉದ್ದೇಶವಲ್ಲ. ಅಧ್ಯಾಪಕರ ತಪ್ಪುಗಳನ್ನು ನಾಲ್ಕು ಗೋಡೆಗಳ ಮಧ್ಯದಲ್ಲಿ ತಿದ್ದಬೇಕು.** ಅವರಿಗೆ ಅಲ್ಲಿ ತೀವ್ರವಾದ ಎಚ್ಚರಿಕೆಯನ್ನು, ತಿಳುವಳಿಕೆಯನ್ನು ಕೊಟ್ಟು ಅದರ ದುಷ್ಪರಿಣಾಮಗಳನ್ನು (ಕಾನೂನು ಸಮರ, ಇತ್ಯಾದಿ) ವಿವರಿಸಬೇಕು. **ಆದರೆ ಇದು ಗುಪ್ತವಾಗಿರಲೇಬೇಕು.** ಅದು ಬಿಟ್ಟು ಮಕ್ಕಳೆದುರೇ ಈ ಘನಕಾರ್ಯವನ್ನು ಮಾಡಿ ಮಾಧ್ಯಮದಲ್ಲಿ ವರದಿ ಮಾಡಿದರೆ ಮರುದಿನ ಶಾಲೆಗೆ ಬಂದ ಸಮಸ್ತ ಅಧ್ಯಾಪಕರನ್ನು ವಿದ್ಯಾರ್ಥಿಗಳು ನೋಡುವ ಬಗೆ ಹೇಗಿರುತ್ತದೆ? ಊಹಿಸಿಕೊಳ್ಳಿ. ಏಟು ತಿಂದು ಯಮನ ಪಾದ ಸೇರಿದರೆ? ಎಂದು ಯೋಚಿಸುವವರಿಗೆ ಯಮನೇ ಹೀಗೆ ಹೇಳುತ್ತಾನೆ - ''ತಪ್ಪುಮಾಡಿದ ಮಗನನ್ನು, ಶಿಷ್ಯನನ್ನು ಹೊಡೆಯು-ವುದಿದ್ದರೆ ಸೊಂಟದ ತಳಭಾಗದಲ್ಲಿಯೇ ಹೊಡೆಯಬೇಕು'' ಎಂದು. ಆದ್ದರಿಂದ ಮೃದುವಾದ ಶಿಕ್ಷೆಗೆ ಅವಕಾಶವಿರಲಿ. ಪತ್ರಿಕೆಗಳಲ್ಲಿ ವರದಿಯಾಗುವುದರಿಂದ ಶಿಕ್ಷಕರ ಮನೋಬಲವು ಕಡಿಮೆಯಾಗುವ ಸಾಧ್ಯತೆಯಿದೆ. **ಬೀಜಗಳಿಲ್ಲವೆಂದು ತಿಳಿದ ಮೆಣಸಿನ ಕಾಯಿಯನ್ನು ಮಗುವೂ ಸಹ ನುಂಗಲು ನೋಡುವುದು. ಆದ್ದರಿಂದ ಒಂದೆರಡು ಖಾರದ ಬೀಜಗಳು ಅಧ್ಯಾಪಕನಲ್ಲಿರಲು ಬಿಡಿ.**

ಲೇಖನಾಂಕ

# ಗುರುವಿನಿಂದಲೇ ವಿದ್ಯೆ (ಬ್ರಹ್ಮಜ್ಞಾನ)

■ ವಿದ್ವಾನ್ ಶ್ರೀ ವಿ. ರಮೇಶಾಚಾರ್ಯ

'ಗೌತಮ ಕೃಪ', ಆಚಾರ್ಯ ಸ್ಟ್ರೀಟ್, ತುಮಕೂರು - ೫೭೨ ೧೦೧

೮೪ ಲಕ್ಷ ಯೋನಿಗಳಲ್ಲಿ ಮನುಷ್ಯಜನ್ಮವೇ ಅತ್ಯಂತ ಶ್ರೇಷ್ಠವಾದದ್ದು. ಭಗವಂತನ ಜ್ಞಾನಸಂಪಾದಿಸಲು ಅವಶ್ಯಕವಾದ ಬುದ್ಧಿಶಕ್ತಿ ಇರುವುದರಿಂದಲೇ ಈ ಮನುಷ್ಯ ಜನ್ಮಕ್ಕೆ ಅತಿ ಮಾನ್ಯತೆ. ಅದಿಲ್ಲದೇ ಹೋದಲ್ಲಿ ಪಶು ಸಮಾನನೆಂದು ಸಕಲಶಾಸ್ತ್ರಗಳೂ ಸಾರುತ್ತಿವೆ. ಸಾಮಾನ್ಯವಾಗಿ ಜ್ಞಾನ ಅಥವಾ ತಿಳುವಳಿಕೆ ಹೆಚ್ಚು ಹೆಚ್ಚು ವಿದ್ಯೆ ಸಂಪಾದನೆ ಮಾಡಿದಂತೆ ವರ್ಧಿಸುತ್ತಾ ಹೋಗುತ್ತದೆ. ಇಂತಹ ನಾವು ಸಂಪಾದಿಸುವ ವಿದ್ಯೆ ಗುರುಮೂಲಕವೂ ಆಗಬಹುದು, ಸ್ವಯಂ ಅಧ್ಯಯನದಿಂದಲೂ ಆಗಬಹುದು. ಆದರೆ ಕೇವಲ ಸ್ವಪ್ರತಿಭೆಯಿಂದ ಹೊಂದುವ ವಿದ್ಯೆ ಅಥವಾ ವಿದ್ಯೆಯ ಪರಾಕಾಷ್ಠತೆ ಜಗತ್ತಿನಲ್ಲಿ ನಮಗೆ ಕೀರ್ತಿಯನ್ನು ತಂದುಕೊಡಬಹುದು, ಹಣವನ್ನು ಗಳಿಸಲೂಬಹುದು, ಲೌಕಿಕ ಸ್ಥಾನ-ಮಾನವನ್ನು ಗಳಿಸಲೂಬಹುದು. ಆದರೆ ವಿದ್ಯೆಯ ಮೂಲ ಗುರಿ, ಪ್ರತಿಪಾದ್ಯ ವಸ್ತು, ಭಗವಂತನ ಜ್ಞಾನವನ್ನು, ಭಗವಂತನ ಅನುಗ್ರಹವನ್ನು ಎಂದೂ ತಂದುಕೊಡಲಾರದು. ಆದರೆ ಗುರು ಶುಶ್ರೂಷೆಯಿಂದ ಗುರುಗಳಲ್ಲಿ ಅಭ್ಯಸಿಸಿದ, ಗುರುಗಳಿಂದ ಅನುಗ್ರಹೀತ ವಿದ್ಯೆಯು, ವಿದ್ಯೆಯ ಜೊತೆಗೆ ಬದುಕುವ ರೀತಿಯನ್ನು, ಭಗವಂತನನ್ನೂ ಹೊಂದಿಸಿಕೊಡುತ್ತದೆ. ಆದ್ದರಿಂದ ಸ್ವಯಂ ಕಲಿತ ವಿದ್ಯೆಗೂ, ಗುರು ಅನುಗ್ರಹೀತ ವಿದ್ಯೆಗೂ ಅಜಗಜಾಂತರ ವ್ಯತ್ಯಾಸವಿದೆ (ದೇವತಾದಿ-ಗಳನ್ನು ಬಿಟ್ಟು). ಇಂತಹ ಒಂದು ಉದಾಹರಣೆಯನ್ನು ಮಹಾಭಾರತದಲ್ಲಿ ಹೀಗೆ ಹೇಳಲಾಗಿದೆ.

ಪಾಂಡವಾದಿಗಳು ವನವಾಸದಲ್ಲಿದ್ದಾಗ ತೀರ್ಥಯಾತ್ರೆಗೆ ಹೊರಟಿದ್ದಾರೆ. ಅನೇಕ ಪುಣ್ಯಕ್ಷೇತ್ರಗಳ ದರ್ಶನ, ಪುಣ್ಯನದಿಗಳ ಸ್ನಾನಾದಿಗಳನ್ನು ಮಾಡಿಕೊಂಡು ಕುರುಕ್ಷೇತ್ರ, ಸರಸ್ವತೀನದಿ ಇತ್ಯಾದಿಗಳನ್ನು ಸೇವಿಸಿ ರಮಣೀಯವಾದ ಸ್ಥೂಲಶಿರಸ್ ಋಷಿಗಳು, ರೈಭ್ಯರು ವಾಸಮಾಡುತ್ತಿದ್ದ ಆಶ್ರಮಕ್ಕೆ ಬಂದಿದ್ದಾರೆ. ಆಗ ಲೋಮಶಮುನಿಗಳು ಹಿಂದೆ ಇಲ್ಲಿ ಭರದ್ವಾಜ ಹಾಗೂ ರೈಭ್ಯರು ಅಣ್ಣ-ತಮ್ಮಂದಿರಂತೆ ಅಕ್ಕ-ಪಕ್ಕದ ಆಶ್ರಮಗಳಲ್ಲಿ ವಾಸಿಸುತ್ತಿದ್ದರು. ರೈಭ್ಯರಿಗೆ ಅರ್ವಾವಸು, ಪರಾವಸು ಎಂಬುದಾಗಿ ಇಬ್ಬರು ಮಕ್ಕಳು. ತಂದೆಯಂತೆಯೇ ಇಬ್ಬರು ಮಕ್ಕಳೂ ಸತತ ಗುರುಗಳ ಸನ್ನಿಧಾನದಲ್ಲಿ ವೇದಾಭ್ಯಾಸ-ದಿಂದ ಸಿದ್ಧಿಹೊಂದಿದ ಸತ್ಪುರುಷರು, ಲೋಕವಿಖ್ಯಾತರು. ಭರದ್ವಾಜರ ಮಗ



ಯವಕ್ರೀತ ಎಂಬುದಾಗಿ. ರೈಭ್ಯರು ಹಾಗೂ ಮಕ್ಕಳ ಕೀರ್ತಿ ನೋಡಿ ಸಹಿಸದಾದ. ತಾನೂ ಕೂಡ ತಪಸ್ಸಿನಿಂದ ವೇದಾಧ್ಯಯನವನ್ನು ಹೊಂದಬೇಕೆಂದು (ಗುರುಮುಖೇನ ಅಭ್ಯಾಸ ಮಾಡದೇ) ಘೋರವಾದ ತಪಸ್ಸನ್ನು ಅಗ್ನಿಮಧ್ಯದಲ್ಲಿ ಶರೀರ ಸಂತಾಪವನ್ನೂ ಲೆಕ್ಕಿಸದೆ ಪ್ರಾರಂಭಿಸದ. ಅವನ ತಪಸ್ಸನ್ನು ನೋಡಿದ ಇಂದ್ರದೇವರು ಪ್ರತ್ಯಕ್ಷರಾದರು. ಅವರನ್ನು ನೋಡಿ ಭಕ್ತಿಯಿಂದ ''ಸ್ವಾಮಿ, ನಾನು ಅಧ್ಯಯನಮಾಡದ ಸಕಲವೇದವೂ ಪ್ರತಿಭಾತವಾಗಲಿ, ತಪಸ್ಸಿನಿಂದಲೇ ಸಕಲ ಜ್ಞಾನ ಬರುವಂತೆ ವರ ಕೊಡಿ. ಅಧ್ಯಯನಕ್ಕೆ ಸಾಕಷ್ಟು ಕಾಲಾವಕಾಶ ಬೇಕು. ಆದ್ದರಿಂದ ಶೀಘ್ರ ಸಾಧ್ಯವಾಗಲೆಂದು ಈ ತಪಸ್ಸಿನ ಪ್ರಯತ್ನ'' ಎಂದು ಯವಕ್ರೀತ ಇಂದ್ರದೇವರಿಗೆ ತಿಳಿಸಿದ.

**"ದ್ವಿಜಾನಾಂ ಅನಧೀತಾ ವೈ ವೇದಾಃ ಸುರಗಣಾರ್ಚಿತ ।**
**ಪ್ರತಿಭಾನ್ತ್ವಿತಿ ತಪೋಽಹಮಿದಂ ಪರಮಕಂ ತಪಃ ॥**

**ಸ್ವಾಧ್ಯಾಯಾರ್ಥಂ ಸಮಾರಂಭೋ ಮಮಾಯಂ ಪಾಕಶಾಸನ ।**
**ತಪಸಾ ಜ್ಞಾತುಮಿಚ್ಛಾಮಿ ಸರ್ವಜ್ಞಾನಾನಿ ಕೌಶಿಕ ॥**

**ಕಾಲೇನ ಮಹತಾ ವೇದಃ ಶಕ್ಯಾ ಗುರುಮುಖಾತ್ ವಿಭೋ ।**
**ಪ್ರಾಪ್ತುಂ ತಸ್ಮಾದಯಂ ಯತ್ನಃ ಪರಮೋ ಮೇ ಸಮಾಸ್ಥಿತಃ ॥"**

**ಇಂದ್ರ ಉವಾಚ –**

**"ಅಮಾರ್ಗ ಏಷ ವಿಪ್ರರ್ಷೇ ಯೇನ ತ್ವಂ ಯಾತುಮಿಚ್ಛಸಿ ।**
**ಕಿಂ ವಿಘಾತೇನ ತೇ ವಿಪ್ರ ಗಚ್ಛಾಧೀಹಿ ಗುರೋರ್ಮುಖಾತ್ ॥"**

ಯವಕ್ರೀತ ಕೇಳಿದ ವರವನ್ನು ನೋಡಿ ಇಂದ್ರದೇವರು ''ಹೇ ಯವಕ್ರೀತ, ಗುರುಮುಖದಿಂದ ಮಾಡದ (ಹೊಂದದ) ಅಧ್ಯಯನ ಮಾರ್ಗ ಕುಮಾರ್ಗವು. ಅದರಿಂದ ಪ್ರಯೋಜನವಿಲ್ಲ. ಹೋಗು ಸುಮಾರ್ಗವಾದ ಗುರುಮುಖದಿಂದ ಅಧ್ಯಯನಮಾಡು'' ಎಂದು ತಿಳಿಸಿ ಅದೃಶ್ಯರಾದರು.

ಆದರೆ ಯವಕ್ರೀತನಾದರೂ ಹಠ ಬಿಡಲಿಲ್ಲ. ಮತ್ತೆ ಘೋರವಾದ ತಪಸ್ಸನ್ನು ಮಾಡಿದ. ಆಗ ಮತ್ತೆ ಇಂದ್ರದೇವರು ಬಂದು ''ಇದು ಬುದ್ಧಿವಂತರು ಮಾಡುವ ಕೆಲಸವಲ್ಲ. ನಿನ್ನ ಪ್ರಯತ್ನ ವ್ಯರ್ಥ'' ಎಂದು ತಿಳಿಸಿದರು. ಆಗ ಯವಕ್ರೀತ ''ನೀವು ನನ್ನ ಅಭೀಷ್ಟವನ್ನು ಕೊಡದಿದ್ದಲ್ಲಿ ಇನ್ನೂ ಘೋರ ತಪಸ್ಸನ್ನು ಮಾಡುವುದಾಗಿ, ತನ್ನ ಶರೀರವನ್ನೇ ಅಗ್ನಿಯಲ್ಲಿ ಹೋಮಿಸುವುದಾಗಿ'' ತಿಳಿಸಿದ. ಇವನು ಏನು ಹೇಳಿದರೂ ಕೇಳುವವನಲ್ಲ ಎಂದು ತಿಳಿದು ಇಂದ್ರದೇವರು ಒಂದು ಉಪಾಯ ಹೂಡಿದರು.

ಯವಕ್ರೀತ ತಪಸ್ಸು ಮಾಡುತ್ತಿರುವ ಸಮೀಪದಲ್ಲಿ ಗಂಗೆಯ ಪ್ರವಾಹ ಭೋರ್ಗರೆಯುತ್ತಿತ್ತು. ಇಂದ್ರದೇವರು ವೃದ್ಧ ಬ್ರಾಹ್ಮಣನ ವೇಷದಿಂದ ಗಂಗಾದಡದಲ್ಲಿ ಕುಳಿತು ಹಿಡಿಯಷ್ಟು ಮರಳನ್ನು ಕೈಯಲ್ಲಿ ಹಿಡಿದು ಗಂಗಾಪ್ರವಾಹಕ್ಕೆ ಒಂದೇ ಸಮನೆ ಹಾಕತೊಡಗಿದರು. ಸ್ನಾನಕ್ಕಾಗಿ ಬಂದ ಯವಕ್ರೀತ ಬ್ರಾಹ್ಮಣನನ್ನು ನೋಡಿ ''ಏತಕ್ಕಾಗಿ ಮರಳನ್ನು ಗಂಗೆಯ ಪ್ರವಾಹದಲ್ಲಿ ಹಾಕುತ್ತಿದ್ದೀಯ ?'' ಎಂದು ಕೇಳಿದ. ಅದಕ್ಕೆ ಆ ಬ್ರಾಹ್ಮಣ ವೇಷಧಾರಿಯಾದ ಇಂದ್ರದೇವರು ''ಸೇತುವೆಗಾಗಿ ಪ್ರಯತ್ನ, ಅದರಿಂದ ಓಡಾಡುವ ಜನರಿಗೆ ಉಪಕಾರವಾಗಿ ಕಷ್ಟ ತಪ್ಪುತ್ತದೆ'' ಎಂದರು. ಆಗ ಯವಕ್ರೀತನು ''ಗಂಗಾನದಿಗೆ ಈ ಮರಳಿನಿಂದ ಸೇತುವೆ ಕಟ್ಟಲಿಕ್ಕೆ ಸಾಧ್ಯವಾ ? ಅಶಕ್ಯವಾದ ಕಾರ್ಯಕ್ಕೆ ಪ್ರಯತ್ನ ಏಕೆ ಮಾಡುತ್ತೀಯಾ ?'' ಎಂದು ಕೇಳಿದ. ಆಗ ಆ ವೃದ್ಧ ಬ್ರಾಹ್ಮಣನು ''ಅಧ್ಯಯನವಿಲ್ಲದೇ ನಿನಗೆ ವೇದಜ್ಞಾನ ಬರುವುದಾದರೆ ನನ್ನ ಈ ಕಾರ್ಯ ಏಕೆ ಆಗುವುದಿಲ್ಲ ?'' ಎಂದು ಪ್ರತ್ಯುತ್ತರವನ್ನು ನೀಡಿದರು.

"ಕಿಮಿದಂ ವರ್ತತೇ ಬ್ರಹ್ಮನ್ ಕಿಂ ಚ ತೇ ಹ ಚಿಕೀರ್ಷಿತಮ್ ।
ಅತೀವ ಹಿ ಮಹಾನ್ ಯತ್ನಃ ಕ್ರಿಯತೇಽಯಂ ನಿರರ್ಥಕಃ ॥"

ಆಗ ಯವಕ್ರೀತ ಋಷಿ ''ಹೇ ಇಂದ್ರ, ನಿಮ್ಮ ಸೇತುವೆ ಪ್ರಯತ್ನದಂತೆ ನನ್ನ ಪ್ರಯತ್ನವೂ ವ್ಯರ್ಥವಾಗುವುದಾದರೆ, ಬೇರೆ ಉತ್ತಮ ವರವನ್ನಾದರೂ ಕೊಡಿರಿ. ಅದರಿಂದ ಕೀರ್ತಿಯನ್ನು ಹೊಂದುತ್ತೇನೆ'' ಎಂದು ಕೇಳಿದ. ಆಗ ಇಂದ್ರದೇವರು ''ನಿನಗೆ ಹಾಗೂ ನಿನ್ನ ತಂದೆಗೆ ಎಲ್ಲ ವೇದಗಳೂ ಪ್ರತಿಭಾಸವಾಗಲಿ, ನೀನು ಬಯಸಿದ್ದೆಲ್ಲಾ ಸಿದ್ಧಿಸಲಿ'' ಎಂದು ವರವನ್ನು ಕೊಟ್ಟರು. ತೃಪ್ತನಾದ ಯವಕ್ರೀತ ಆಶ್ರಮಕ್ಕೆ ಬಂದು ತಂದೆಗೆ ತಾನು ಪಡೆದ ವರವನ್ನು ತಿಳಿಸಿದ. ಆಗ ಭಾರದ್ವಾಜರು ''ವರದಿಂದ ನಿನಗೆ ದರ್ಪ ಬಂದಿದೆ. ಈ ದರ್ಪ ಶೀಘ್ರದಲ್ಲೇ ನಾಶಕ್ಕೆ ಕಾರಣವಾಗಲಿದೆ. ಈ ಬಗ್ಗೆ ಒಂದು ಚರಿತ್ರೆ ಹೇಳುತ್ತೇನೆ ಕೇಳು'' ಎಂದು ಒಂದುಕಥಾನಕವನ್ನು ಹೇಳಲು ಉಪಕ್ರಮಿಸಿದರು.

''ಹಿಂದೆ 'ಬಾಲಧಿ' ಎಂಬ ಋಷಿ ಇದ್ದನು. ಅವನು ಒಮ್ಮೆ ಪುತ್ರಶೋಕದಿಂದ ಘೋರ ತಪಸ್ಸನ್ನು ಮಾಡಿದ. ತನ್ನ ಮಗ ಅಮರ್ತ್ಯನಾಗಲೆಂದು ದೇವತೆಗಳನ್ನು ಪ್ರಾರ್ಥಿಸಿದ. ಆಗ ದೇವತೆಗಳು ಏನಾದರೂ ನಿಮಿತ್ತದಿಂದ ದೀರ್ಘಾಯಸ್ಸನ್ನು ಕೇಳು ಎಂದರು. ಆಗ 'ಬಾಲಧಿ'ಯು ಎದುರುಗಡೆ ಕಾಣುವ ಪರ್ವತ ಇರುವವರೆಗೂ ನನ್ನ ಮಗನ ಆಯುಸ್ಸು ಇರಲೆಂದನು. ''ತಥಾಸ್ತು'' ಎಂದು ದೇವತೆಗಳು ಅದೃಶ್ಯರಾದರು. 'ಬಾಲಧಿ'ಯ ಮಗ 'ಮೇಧಾವಿ'ಯು ವರಬಲದಿಂದ ದರ್ಪವುಳ್ಳವನಾಗಿ ಋಷಿಗಳಿಗೆಲ್ಲ ಹಿಂಸೆ ಕೊಡುತ್ತಿದ್ದನು. ಒಮ್ಮೆ 'ಧನುಶಾಕ್ಷ'ನೆಂಬ ಋಷಿ ಬಾಲಧಿಯ ಆಶ್ರಮಕ್ಕೆ



ಬಂದನು. ಮೇಧಾವಿಯು ಎಂದಿನಂತೆ ಅವರನ್ನು ಪೂಜಿಸದೆ ತಿರಸ್ಕರಿಸಿದನು. ಕೋಪಗೊಂಡ 'ಧನುಶಾಕ್ಷ'ನು ಭಸ್ಮೀಭೂತನಾಗೆಂದು ಶಾಪ ಕೊಟ್ಟನು. ಮೇಧಾವಿ ಭಸ್ಮೀಭೂತ- ನಾಗಲಿಲ್ಲ. ಅದನ್ನು ನೋಡಿದ ಋಷಿ ಧ್ಯಾನಾಸಕ್ತನಾಗಿ ಕಾರಣವನ್ನು ತಿಳಿದು ತನ್ನ ತಪಃಶಕ್ತಿಯಿಂದ ಲಕ್ಷಾಂತರ ಕೋಣಗಳನ್ನು (ಪ್ರಾಣಿ) ಸೃಷ್ಟಿಸಿದನು. ಅವುಗಳೆಲ್ಲವೂ ಒಮ್ಮೆಗೇ ಪರ್ವತವನ್ನು ತಮ್ಮ ಕೊಂಬುಗಳಿಂದ ತಿವಿದು ತಿವಿದು ನೆಲಸಮ ಮಾಡಿದವು. ಯಾವಾಗ ಪರ್ವತ ನಾಶವಾಯಿತೋ, ಮೇಧಾವಿಯೂ ನಾಶವಾದನು. ಆದ್ದರಿಂದ ಹೇ ಯವಕ್ರೀತ, ನೀನೂ ವರದಿಂದ ದರ್ಪಿತನಾಗಿ ನಾಶವಾಗಬೇಡ. ರೈಭ್ಯ ಹಾಗೂ ಅವನ ಮಕ್ಕಳು ಮಹಾತಪಸ್ವಿಗಳು. ನೀನು ಎಂದೂ ಅವರ ತಂಟೆಗೆ ಹೋಗಬೇಡ. ರೈಭ್ಯರು ಕುಪಿತರಾದರೆ ನಿನ್ನನ್ನು ನಾಶಮಾಡಲು ಸಮರ್ಥರು'' ಎಂದು ಎಚ್ಚರಿಸಿದರು. ಹಾಗೆಯೇ ಆಗಲೆಂದು ಯವಕ್ರೀತ ಕೆಲವು ದಿನಗಳನ್ನು ಕಳೆದ.

ಅದೊಂದು ವಸಂತಮಾಸ. ಮನೋಹರವಾದ ಅರಣ್ಯದ ತಾಣ. ಎಲ್ಲೆಲ್ಲೂ ಮರಗಿಡ- ಗಳಲ್ಲಿ ಹೂ, ಹಣ್ಣುಗಳು. ಯವಕ್ರೀತನಾದರೂ ಸಂಚಾರ ಮಾಡುತ್ತಾ ರೈಭ್ಯರ ಆಶ್ರಮಕ್ಕೆ ಬಂದನು. ಆಶ್ರಮದಲ್ಲಿ ರೈಭ್ಯರು ಇಲ್ಲ. ಮಕ್ಕಳೂ ಇಲ್ಲ. ರೈಭ್ಯನ ಸೊಸೆ ಅತ್ಯಂತ ಸುಂದರಿ. ಅಪ್ಸರೆಯಂತೆ ರೂಪ-ಲಾವಣ್ಯಗಳಿಂದ ಕೂಡಿದವಳು. ಆಶ್ರಮದಲ್ಲಿ ತನ್ನ ಕೆಲಸದಲ್ಲಿ ಮಗ್ನಳಾಗಿದ್ದಳು. ಅವಳನ್ನು ನೋಡಿದ 'ಯವಕ್ರೀತ'ನ ಮನಸ್ಸು ಅಲ್ಲೋಲ-ಕಲ್ಲೋಲವಾಯಿತು. ಅವನು ಕಾಮಾತುರನಾದ. ನಿರ್ಲಜ್ಜೆಯಿಂದ ತನ್ನ ಜೊತೆ ಮೈಥುನಕ್ಕಾಗಿ ಆಹ್ವಾನಿಸಿದ. ಅವಳಾದರೋ ಇವನ ವರವನ್ನೂ, ನಿರ್ಭಯ ಸ್ವಭಾವವನ್ನೂ ತಿಳಿದವಳಾಗಿ, ಶಾಪದ ಅಂಜಿಕೆಯಿಂದ ಮೌನದಿಂದಿದ್ದಾಗ ಬಲಾತ್ಕಾರ- ವಾಗಿ ಯವಕ್ರೀತ ಭೋಗಿಸಿದ. ನಂತರ ತನ್ನ ಪಾಡಿಗೆ ತಾನು ಹೊರಟೂ ಹೋದ. ಆದರೆ ಆ ಕನ್ಯೆ ದುಃಖಿತಳಾಗಿ ಆಶ್ರಮದಲ್ಲಿ ಇರುವಾಗ್ಗೆ ರೈಭ್ಯರು ಬಂದು ದುಃಖಕ್ಕೆ ಕಾರಣವನ್ನು ಕೇಳಿ ತಿಳಿದುಕೊಂಡರು.

ಯವಕ್ರೀತನ ದುಸ್ಸಾಹಸದಿಂದ ಕ್ರೋಧಾವಿಷ್ಟನಾದ ತಪಸ್ವಿ ರೈಭ್ಯ ತನ್ನ ಜಟೆಯಿಂದ ಇಬ್ಬರು ರಾಕ್ಷಸರನ್ನು ಸೃಷ್ಟಿಸಿದ. ಒಂದು ಪುರುಷ, ಇನ್ನೊಂದು ಸ್ತ್ರೀರೂಪ. ಆ ಸ್ತ್ರೀ ರಾಕ್ಷಸಿಯು ಮಾಯೆಯಿಂದ ರೈಭ್ಯನ ಸೊಸೆಯ ರೂಪ ಧರಿಸಿದವಳಾಗಿ ಯವಕ್ರೀತನನ್ನು ಸೇರಿದಳು. ಆಗ ಅಪವಿತ್ರನಾದ ಯವಕ್ರೀತನನ್ನು ಸಂಹರಿಸಲು ರಾಕ್ಷಸ ಶೂಲವನ್ನು ಎತ್ತಲು, ತಕ್ಷಣ ಶುದ್ಧಿಗಾಗಿ ಸ್ನಾನಮಾಡಲು ಓಡಿದ. ಎಲ್ಲೂ ನೀರು ಸಿಗಲಿಲ್ಲ. ತನ್ನ ತಂದೆಯ ಅಗ್ನ್ಯಾಗಾರಕ್ಕೆ ಹೋಗಿ ತಪ್ಪಿಸಿಕೊಳ್ಳಲು ಓಡಿದನು. ಆದರೆ

ಅಗ್ನ್ಯಾಗಾರದ ಕಾವಲಿಗೋಸ್ಕರ ಒಬ್ಬ ಅಂಧ-ಶೂದ್ರನನ್ನು ಭರದ್ವಾಜರು ನಿಲ್ಲಿಸಿದ್ದರು. ಅವನು ಓಡಿಬಂದ ಯವಕ್ರೀತನನ್ನು ಯಾರೋ ಅನ್ಯಪುರುಷರೆಂದು ತಡೆಯಲು, ಆ ರಾಕ್ಷಸ ಓಡಿಬಂದು ಶೂಲದಿಂದ ಸ್ಥಳದಲ್ಲೇ ಸಂಹರಿಸಿದ.

ಅರಣ್ಯದಲ್ಲಿ ಸಮಿತ್ತುಗಳಿಗಾಗಿ ಹೋಗಿದ್ದ ಭರದ್ವಾಜರು ಆಶ್ರಮಕ್ಕೆ ಬಂದು ಅಗ್ನ್ಯಾಗಾರದಲ್ಲಿ ಅಗ್ನಿಯು ಪ್ರಜ್ವಲಿತವಾಗದಿರುವುದನ್ನು ಕಂಡು ಆ ಕಾವಲುಗಾರ ಅಂಧನನ್ನು ಪ್ರಶ್ನಿಸಿದರು. ಅವನಾದರೋ ನಡೆದ ವಿಚಾರವನ್ನೆಲ್ಲಾ ತಿಳಿಸಿದ. ಮಗನ ಮೃತವಾರ್ತೆಯನ್ನು ತಿಳಿದು ತೀವ್ರ ಪುತ್ರಶೋಕಕ್ಕೆ ಒಳಗಾದರು. ಇದ್ದ ಒಬ್ಬನೇ ಮಗನನ್ನು ಕಳೆದುಕೊಂಡು ದುಃಖಿತರಾದ ಅವರು ರೈಭ್ಯರ ಆಶ್ರಮಕ್ಕೆ ಹೋಗಬೇಡ-ವೆಂದು ತಾವು ಮಗನನ್ನು ನಿರ್ಬಂಧಿಸಿದ್ದನ್ನು ಜ್ಞಾಪಿಸಿಕೊಂಡರು. ಆದರೂ ಶೋಕದಿಂದ ತನ್ನ ಮಗನ ಸಾವಿಗೆ ಕಾರಣರಾದ 'ರೈಭ್ಯ'ರ ಮೇಲೆ ಕೋಪಗೊಂಡು ''ನಾನು ಹೇಗೆ ಪುತ್ರನಾಶದಿಂದ ಶೋಕಪಟ್ಟೆನೋ ಹಾಗೆಯೇ ರೈಭ್ಯರೂ ಜ್ಯೇಷ್ಠಮಗನಿಂದ ಹಿಂಸಿತನಾಗಲಿ'' ಎಂದು ಶಾಪಕೊಟ್ಟು ತನ್ನ ಮಗನ ಶವಕ್ಕೆ ಅಂತ್ಯಸಂಸ್ಕಾರವನ್ನು ಮಾಡಿ ತಾವೂ ಕೂಡ ವಿರಹ ತಾಳಲಾರದೆ ಅಗ್ನಿಪ್ರವೇಶಮಾಡಿದರು.

ಕೆಲವು ದಿನಗಳು ಕಳೆದ ಮೇಲೆ ಒಮ್ಮೆ 'ಬೃಹದ್ಯುಮ್ನ'ನೆಂಬ ರಾಜ 'ಸತ್ರಯಾಗ'-ವನ್ನು ಮಾಡಲು ಸಂಕಲ್ಪಿಸಿ, ಸತ್ರವನ್ನು ನಡೆಸಿಕೊಡಲು ರೈಭ್ಯರ ಮಕ್ಕಳಾದ 'ಅರ್ವಾವಸು' ಹಾಗೂ 'ಪರಾವಸು'ಗಳನ್ನು ಆಹ್ವಾನಿಸಿದ. ಸತ್ರ ಪ್ರಾರಂಭವಾಗಿ ಅನೇಕ ದಿವಸಗಳಾಯ್ತು. ಏತನ್ಮಧ್ಯೆ 'ಪರಾವಸು' ಆಶ್ರಮದಲ್ಲಿರುವ ತಂದೆ, ಹೆಂಡತಿಯನ್ನು ನೋಡಿಕೊಂಡು ಬರಲು ಆಶ್ರಮಕ್ಕೆ ತೆರಳಿದನು. ಬರುವ ಹೊತ್ತಿಗೆ ಕತ್ತಲಾಗಿತ್ತು. ಆಶ್ರಮದಲ್ಲಿ ತಂದೆ ಕೃಷ್ಣಾಜಿನವನ್ನು ಹೊದ್ದುಕೊಂಡು ದೂರದಲ್ಲಿ ಕುಳಿತಿದ್ದಾರೆ. ಕತ್ತಲಿನಲ್ಲಿ ದೂರದಿಂದ ನೋಡಿದ. ಪರಾವಸು ಯಾವುದೋ ಮೃಗವಿರಬೇಕೆಂದು ತಿಳಿದು ಅದನ್ನು ಸಂಹರಿಸಿದ. ಹತ್ತಿರ ಬಂದು ನೋಡಿದರೆ ತಂದೆಯ ಶರೀರ. ನಂತರ ದುಃಖದಿಂದ ಉತ್ತರಕಾರ್ಯಗಳನ್ನು ಮಾಡಿ ಮುಗಿಸಿ ಹಿಂದಿರುಗಿ ಸತ್ರ ಸ್ಥಳಕ್ಕೆ ಬಂದು ತಮ್ಮನಿಗೆ ತನ್ನಿಂದ ನಡೆದ ಅಪಚಾರವನ್ನು ತಿಳಿಸಿದ. ತಮ್ಮನಾದರೂ ನೀನು ಮಾಡಿದ ಬ್ರಹ್ಮಹತ್ಯೆಗೆ ಪ್ರಾಯಶ್ಚಿತ್ತವನ್ನು ನಾನು ಮಾಡುತ್ತೇನೆಂದು, ನೀನು ಬಂದು ''ಸತ್ರಯಾಗ'' ಮುಗಿಸು ಎಂದು ಹೇಳಿ ತೀರ್ಥಯಾತ್ರೆಗೆ ಹೊರಟು ಸಕಲ ಪ್ರಾಯಶ್ಚಿತ್ತ-ವನ್ನು ಮುಗಿಸಿ ಬ್ರಹ್ಮಹತ್ಯೆಯಿಂದ ವಿಮುಕ್ತನಾದ.

ಮತ್ತೆ ಯಾಗದ ಸ್ಥಳಕ್ಕೆ ಆಗಮಿಸಿದ. ಆಗ ಮರಳಿ ಬಂದ ಅರ್ವಾವಸುವನ್ನು ನೋಡಿ 'ಪರಾವಸು' ಬೃಹದ್ಯುಮ್ನನಿಗೆ ''ನನ್ನ ತಮ್ಮನಿಗೆ ಬ್ರಹ್ಮಹತ್ಯೆಯ ದೋಷವಿದೆ.



ಆದ್ದರಿಂದ ಸತ್ರದಿಂದ ನಿರ್ಗಮಿಸಲು ಹೇಳು'' ಎಂದನು. ಅದರಂತೆ ರಾಜ ತನ್ನ ಮಂತ್ರಿಗಳಿಂದ ಯಾಗಸ್ಥಳದಿಂದ 'ಅರ್ವಾವಸು'ವನ್ನು ಹೊರಹಾಕಿಸಿದ. ಜ್ಞಾನಿಯಾದ ಅರ್ವಾವಸುವಾದರೋ ಮೌನದಿಂದ ಅಲ್ಲಿಂದ ಆಶ್ರಮಕ್ಕೆ ಹೋಗಿ ಸೂರ್ಯನನ್ನು ಕುರಿತು ತಪಸ್ಸನ್ನು ಪ್ರಾರಂಭಿಸಿದ. ಇವನ ತಪಸ್ಸಿಗೆ ಸಂತುಷ್ಟರಾಗಿ ಸೂರ್ಯದೇವರು ಪ್ರತ್ಯಕ್ಷರಾದರು. ಆಗ ವರವನ್ನು ಕೇಳೆಂದಾಗ ''ಸ್ವಾಮಿ, ನನ್ನ ಅಣ್ಣನಿಂದ ಸಂಹೃತನಾದ ತಂದೆ ಬದುಕಲಿ, ನನ್ನ ತಂದೆಯನ್ನು ಸಂಹರಿಸಿದ ಕಾರ್ಯವನ್ನು ನಮ್ಮ ಅಣ್ಣ ಮರೆಯಲಿ ಹಾಗೂ ಇವೆಲ್ಲದಕ್ಕೂ ಕಾರಣನಾದ ಭರದ್ವಾಜ ಹಾಗೂ ಮಗ ಬದುಕಲಿ'' ಎಂದು ಪ್ರಾರ್ಥಿಸಿದ. ಸೂರ್ಯನಿಂದ ಅನೇಕ ವೇದದ ರಹಸ್ಯ ಮಂತ್ರಗಳನ್ನೂ ಸ್ವೀಕರಿಸಿದ. ಆಗ ಯವಕ್ರೀತನು ದೇವತೆಗಳನ್ನು ಕುರಿತು ''ಸ್ವಾಮಿ, ನಾನು ನನ್ನತಂದೆ ಅನೇಕ ವೇದೋಕ್ತ ವ್ರತ, ನಿಯಮಗಳಿಂದ ತಪಸ್ವಿಗಳಾದರೂ ರೈಭ್ಯರು ನಮ್ಮನ್ನು ಅನುಚಿತವಾಗಿ ಸಂಹರಿಸಲು ಹೇಗೆ ಶಕ್ತರಾದರು ?'' ಎಂದು ಕೇಳಿದನು. ಅದಕ್ಕೆ ದೇವತೆಗಳು ''ಹೇ ಯವಕ್ರೀತ, ನೀನು ವೇದವನ್ನು ಗುರುಗಳಿಂದ ಅಧ್ಯಯನಮಾಡಿಲ್ಲ. ಆದರೆ ಬಹುಕಾಲದಿಂದ ಗುರುಸೇವೆ ಮಾಡಿ, ಕಷ್ಟಪಟ್ಟು ಅಧ್ಯಯನಮಾಡಿ, ಗುರುಗಳ ಅನುಗ್ರಹಕ್ಕೆ ಪಾತ್ರರಾಗಿ ಬ್ರಹ್ಮಜ್ಞಾನವನ್ನು ರೈಭ್ಯಾದಿಗಳು ಸಂಪಾದಿಸಿದ್ದಾರೆ'' ಎಂದು ತಿಳಿಸಿ ಅದೃಶ್ಯರಾದರು. ಅಂದಿನಿಂದ ಎಲ್ಲರೂ ಪರಸ್ಪರ ಸುಖ-ಸಂತೋಷದಿಂದ ಆಶ್ರಮದಲ್ಲಿ ತಮ್ಮ ತಮ್ಮ ವ್ರತಾನುಷ್ಠಾನಗಳಿಂದ ತೀವ್ರ ತಪೋನುಷ್ಠಾನದಲ್ಲಿ ತೊಡಗಿದರು.

ಮೇಲ್ಕಂಡ ''ಭಾರತ ಕಥೆ''ಯಿಂದ ಗುರುವಿನಿಂದ ಬಂದ ವೇದಾಧ್ಯಯನಕ್ಕೂ, ಸುಲಭವಾಗಿ ಬಂದ ವೇದಾಧ್ಯಯನ ಫಲಕ್ಕೂ ಎಷ್ಟು ವ್ಯತ್ಯಾಸವಿದೆ ಎಂಬುದನ್ನು ತಿಳಿಸುತ್ತಿದೆ. ಗುರುಕುಲದಲ್ಲಿ ಶಿಕ್ಷಿತನಾದ ವ್ಯಕ್ತಿ ಗುರುಗಳಿಂದ ನಿರಂತರ ನೀತಿಬೋಧೆ-ಗಳಿಂದ ಅಹಂಕಾರಾದಿಗಳನ್ನು ಕಳೆದುಕೊಂಡು ವಿನೀತನಾಗಿ ಹೇಗೆ ವಿದ್ಯೆ, ಅದರ ಸಿದ್ಧಿ ಪಡೆಯಬಹುದು ಎಂಬುದು ಅರ್ವಾವಸುವಿನಿಂದ ತಿಳಿಯಬಹುದು. ಏಕೆಂದರೆ, ಅರ್ವಾವಸು ಅಣ್ಣನಿಂದ ತಿರಸ್ಕರಿಸಲ್ಪಟ್ಟು ಸತ್ರದಿಂದ ಹೊರಹಾಕಿದ ಅವಮಾನಕ್ಕೆ ಒಳಗಾದರೂ ರಾಗ, ದ್ವೇಷಕ್ಕೆ ಒಳಗಾಗದೆ ಸರ್ವರ ಒಳಿತಿಗೋಸ್ಕರ ತಪಸ್ಸು ಮಾಡುತ್ತಾನೆ. ತಪಸ್ಸಿ-ನಿಂದ ಪಡೆದ ಸಿದ್ಧಿಯಿಂದ ಎಲ್ಲರನ್ನೂ ಬದುಕಿಸುತ್ತಾನೆ. ಅಷ್ಟೇ ಅಲ್ಲದೆ, ಸನಾತನ ಧರ್ಮದ ನೀತಿಯಾದ 'ಸರ್ವೇ ಜನಾಃ ಸುಖಿನೋ ಭವಂತು', 'ಪರೋಪಕಾರಾರ್ಥಮಿದಂ ಶರೀರಂ' ಎಂಬ ಧ್ಯೇಯೋಧಾತ್ತಗಳನ್ನು ತೋರಿಸಿಕೊಡುತ್ತಾನೆ.

ಆದರೆ ಸುಲಭವಾಗಿ ಸಂಪಾದಿಸಿದ ವಿದ್ಯೆ (Self Study) ಅಥವಾ ಗುರುವಿನಿಂದ ಬಲಾತ್ಕಾರದಿಂದ (ಅಸಂತೋಷದಿಂದ) ಸಂಪಾದಿಸಿದ ವಿದ್ಯೆ. ದೇವತೆಗಳು ಈ ಮಾರ್ಗ

ಸರಿಯಲ್ಲವೆಂದು ತಿಳಿಸಿದರೂ ಛಲದಿಂದ ಪಡೆದ ವಿದ್ಯೆ ತನ್ನ ಹಾಗೂ ತನ್ನ ತಂದೆಯ ನಾಶಕ್ಕೆ ಕಾರಣವಾಯಿತು. ವೇದಾಧ್ಯಯನವನ್ನು ನಡೆಸುವಾಗ್ದ ಶಿಷ್ಯನನ್ನು ಕುರಿತು (ನಿಯಮಾದಿಗಳನ್ನು) ಹೇಳುವ ವಾಕ್ಯಗಳು 'ನ ಪರದಾರಾನ್ ಗಚ್ಛೇತ್' ನ ಪಲಾಂಡುಂ 'ಭಕ್ಷಯೇತ್' ಇತ್ಯಾದಿ ವಾಕ್ಯಗಳು ಓದಿದ್ದರೂ ಅದು ಕಾರ್ಯರೂಪಕ್ಕೆ ಬರದಿದ್ದ ಮೇಲೆ, ನಮ್ಮ ಆಚಾರವನ್ನು ಬದಲಿಸದಿದ್ದ ಮೇಲೆ ವಾಕ್ಯದ ಅಧ್ಯಯನದಿಂದ ಪ್ರಯೋಜನವೇನು ? ಎಂಬ ಅಂಶವನ್ನು ಯವಕ್ರೀತನ ದೃಷ್ಟಾಂತದಿಂದ ಚೆನ್ನಾಗಿ ತಿಳಿಯುತ್ತದೆ. ತನ್ನಂತೆಯೇ ಋಷಿಚರ್ಯೆಯಲ್ಲಿರುವ ಋಷಿಯ ಪತ್ನಿಯನ್ನು ನೋಡಿದಾಗ ಮನಸ್ಸು ಹೇಗಿರಬೇಕು ಎಂಬ ಸಾಮಾನ್ಯ ಜ್ಞಾನವೂ ನಮಗೆ ಆ ಕ್ಷಣದಲ್ಲಿ ಹೊಳೆಯುವುದಿಲ್ಲ ಎನ್ನಬೇಕಾದರೆ ಗುರುವಿಲ್ಲದ ಅಧ್ಯಯನ ಎಂತಹ ವಿಪತ್ತಿಗೆ ನಮ್ಮನ್ನು ದೂಡುತ್ತದೆ. ಸಾಮಾನ್ಯ ಜ್ಞಾನದಿಂದಲೂ ದೂರಮಾಡುತ್ತದೆ ಎಂಬುದನ್ನು ತಿಳಿಯಬಹುದು. **ಯವಕ್ರೀತನಂತೆ ಸ್ವಯಂ ಅಧ್ಯಯನವು ಸಮಾಜದಲ್ಲಿ ಕೀರ್ತಿ, ಧನವನ್ನು ಕೊಡಿಸಿದರೂ ಬ್ರಹ್ಮಜ್ಞಾನಕ್ಕೆ ಕಾರಣವಾಗುವುದಿಲ್ಲ.**

ಇನ್ನೊಬ್ಬರ ಕೀರ್ತಿಯನ್ನು ನೋಡಿ ಯವಕ್ರೀತ ಅಸೂಯೆಪಟ್ಟಂತೆ ನಮ್ಮ ಸ್ವತಃ ಅಧ್ಯಯನದ ವಿದ್ಯೆ ಇನ್ನೊಬ್ಬರಲ್ಲಿರುವ ಅಧಿಕ ಗುಣವನ್ನು ಸ್ವೀಕರಿಸಲೂ ಹಿಂಜರಿದು ದ್ವೇಷಕ್ಕೂ ಕಾರಣವಾಗುತ್ತದೆ. ಅಂತ್ಯದಲ್ಲಿ ಆತ್ಮನಾಶಕ್ಕೂ ಕಾರಣವಾಗುತ್ತದೆ ಎಂದುದನ್ನೂ ಚೆನ್ನಾಗಿ ಮೇಲ್ಕಂಡ ಘಟನೆ ತಿಳಿಸುತ್ತದೆ. ಗುರುಗಳು ವಿದ್ಯೆ ಕೊಡುವ ಕೆಲಸ ಅಷ್ಟೇ ಮಾಡದೆ ಪಾರಂಪರಿಕ ರಹಸ್ಯವನ್ನೂ ತಿಳಿಸಿಕೊಡುತ್ತಾರೆ. ಅದು ಎಂದೂ ಸ್ವತಃ ಅಧ್ಯಯನಕ್ಕೆ ಸಿಗುವಂತಹುದಲ್ಲ. ಉದಾಹರಣೆಗೆ ಭಾಗವತದಲ್ಲಿ 'ದ್ವೇಷಾತ್ ಚೈದ್ಯಾದಯೋ ನೃಪಾಃ' ಎಂಬುದಾಗಿ ಭಗವಂತನ ದ್ವೇಷದಿಂದಲೂ ಮೋಕ್ಷಸಾಧ್ಯ ಎಂಬ ವಾಕ್ಯಗಳು ಸಿಗುತ್ತವೆ. ಆದರೆ ಅದರ ಹಿಂದಿರುವ ತಾತ್ಪರ್ಯವೇ ಬೇರೆ ಇರುತ್ತದೆ. ತದ್ವಿರುದ್ಧವಾಗಿ ಭಗವಂತನ ದ್ವೇಷಿಗಳಿಗೆ ಎಂದೂ ಮೋಕ್ಷವಿಲ್ಲ ಎಂಬುದೇ ಸಿದ್ಧಾಂತ. **ಅದನ್ನು (ಸಿದ್ಧಾಂತವನ್ನು) ನಾನಾ ಬೇರೆ ಉದಾಹರಣೆಗಳಿಂದ ಸಿದ್ಧಪಡಿಸಿ ಪ್ರಮಾಣಸಹಿತವಾಗಿ ಗುರುವಾದವನು ರಹಸ್ಯ ಬೋಧಿಸುತ್ತಾನೆ. ಆದ್ದರಿಂದ ಗುರುವಿನ ಮುಖಾಂತರವೇ ಅಧ್ಯಯನದ ಅವಶ್ಯಕತೆ ಎಷ್ಟಿದೆ ಎಂಬುದನ್ನು ತಿಳಿಸುತ್ತಿದೆ.** ಮೂಲಗ್ರಂಥಗಳಿಗೆ ಅನೇಕ ಟೀಕಾ, ಟಿಪ್ಪಣಿ, ವ್ಯಾಖ್ಯಾನಗಳು ಇರುವುದರಿಂದ ಎಲ್ಲಾ ರಹಸ್ಯ ಸ್ವತಃ ಅಧ್ಯಯನದಿಂದ (ವ್ಯಾಖ್ಯಾನಗಳಿಂದ) ಅರಿಯಬಹುದಲ್ಲ ಎಂದರೆ **ರಹಸ್ಯವಾದ ಮಾಹಿತಿಗಳನ್ನು ಯಾವ ವ್ಯಾಖ್ಯಾನಕಾರರೂ ತಿಳಿಸುವುದಿಲ್ಲ, ಅಲ್ಪ-ಸ್ವಲ್ಪ ತಿಳಿಸಿದರೂ ಇನ್ನೂ ತಿಳಿಸಬೇಕಾದದ್ದು ಬೇಕಾದಷ್ಟು ಇದ್ದೇ ಇರುತ್ತದೆ. ಅದಕ್ಕೋಸ್ಕರವೇ**



**ಆಚಾರ್ಯರು ಏಕಾದಶಸ್ಕಂದದಲ್ಲಿ "ವಿಶೇಷವಿಧಿಸ್ತು ಸ್ವಗುರು ಉಪದೇಶಗಮ್ಯಂ ಇತಿ ಶಾಸ್ತ್ರಹೃದಯಂ ರಹಸ್ಯತ್ವಾತ್ ನೋಕ್ತಂ" ಎಂಬುದಾಗಿ ತಿಳಿಸಿದ್ದಾರೆ.**

ಮೇಲ್ಕಂಡ ಕಥೆಯಲ್ಲಿ ಇಂದ್ರದೇವರು ಸುಲಭ ಅಧ್ಯಯನ ಮಾರ್ಗ ಎಂದು ತಿಳಿಸಿದರೂ ಮತ್ತೆ 'ಸಕಲವೇದ ಪ್ರತಿಭಾಸವಾಗಲಿ' ಎಂದು ವರ ಏಕೆ ಕೊಟ್ಟರು ? ಎಂಬ ಪ್ರಶ್ನೆ ಬಂದರೆ ಇಂದ್ರದೇವರು ತಿಳಿದೇ ಕೊಟ್ಟಿದ್ದಾರೆ. ಸುಲಭ ಅಧ್ಯಯನ ಪ್ರಯತ್ನದಿಂದ ನಾವು ಸಾಧಿಸಿಕೊಂಡರೂ (ಸಾಧಿಸಿದಂತೆ ತೋರುತ್ತದೆ). ಮುಂದೆ ಅದು ಹೇಗೆ ಅನರ್ಥಕ್ಕೆ ಕಾರಣವಾಗಿ ಆತ್ಮನಾಶಕ್ಕೆ ಕಾರಣವಾಗುತ್ತದೆ ಎಂಬ ದೃಷ್ಟಾಂತ ಜಗತ್ತಿಗೆ ಕೊಡಲೋಸುಗವೇ ತಾವೇ ಕೊಟ್ಟಂತೆ ಮಾಡಿ ಪರಿಣಾಮವನ್ನು ಜಗತ್ತಿನ ಜನಗಳ ಕಣ್ಮುಂದೆ ತೆರೆದಿಟ್ಟಿದ್ದಾರೆ.

ಇನ್ನು ಪಾರಂಪರಿಕ ಅಧ್ಯಯನ ಮಾಡಿದ ರೈಭ್ಯನ ಮಗನೂ ತಾನೇ ಬ್ರಹ್ಮಹತ್ಯಾ ಮಾಡಿ, ತಮ್ಮನನ್ನೇ ಬೈದು ಹೊರಹಾಕಿಸಿದನಲ್ಲ ಎಂಬ ಪ್ರಶ್ನೆ ಬಂದರೆ, ತಮ್ಮನ ಯೋಗ್ಯತೆ ಎಂತಹ ಗುಣಮಟ್ಟದ್ದು, ಅಣ್ಣನ ಬ್ರಹ್ಮಹತ್ಯೆಯನ್ನೂ ತಾನು ಶುದ್ಧೀಕರಿಸಿ, ಮುಂದೆ ತಂದೆ ಹಾಗೂ ಬಂಧುಗಳಾದ ಭರದ್ವಾಜಾದಿಗಳನ್ನು ತನ್ನ ತಪಸ್ಸಿನ ಸಾಮರ್ಥ್ಯದಿಂದ ಬದುಕಿಸುವ ಶಕ್ತಿ ಉಳ್ಳವನು ಎಂಬುದನ್ನು ಜಗತ್ತಿಗೆ ತೋರಿಸಬೇಕಾಗಿದೆ. ಅದಕ್ಕೋಸ್ಕರವೇ ದೈವವೇ ಅವನಲ್ಲಿ ನಿಂತು ಅಂತಹ ಅನುಚಿತ ಪ್ರಸಂಗ ಸೃಷ್ಟಿಸಿ ತಮ್ಮನ ಯೋಗ್ಯತೆ ಜಗತ್ತಿಗೆ ಬೆಳಕಿಗೆ ಬರಲು, ಗುರುವಿನ ಮೂಲಕದ ವಿದ್ಯೆಯ ಮಹತ್ವ ತಿಳಿಸಲು ಘಟನೆ ಯೋಜಿಸಿರುವುದು. ಹಾಗಿಲ್ಲದೆ ಹೋದಲ್ಲಿ ಗುರುಮುಖದ ವಿದ್ಯೆಯ ಮಹತ್ವ ತಿಳಿಯುವುದಾದರೂ ಹೇಗೆ ? ಇನ್ನು ಸಿದ್ಧಾಂತದಂತೆ ಒಬ್ಬನೇ ಗುರುವಿನಲ್ಲಿ ಅನೇಕ ಶಿಷ್ಯರು ಶ್ರದ್ಧಾ-ಭಕ್ತಿಯಿಂದ ಅಧ್ಯಯನಮಾಡಿದರೂ, ಒಂದೇ ಗುರು, ಒಂದೇ ವಿದ್ಯೆ ಆದರೂ ಸೂಕ್ಷ್ಮವಾಗಿ ಜೀವ-ಜೀವರ ಸ್ವರೂಪ, ವೈವಿಧ್ಯತೆ ಹೇಗಿರುತ್ತದೆ ? ತಾರತಮ್ಯ ಎಷ್ಟು ಸೂಕ್ಷ್ಮ, ತಾರತಮ್ಯ ಹೇಗೆ ಜೀವರುಗಳಲ್ಲಿ ಫಲಾಫಲಗಳಿಗೆ ಒಂದೇ ಕರ್ಮ ಕಾರಣವೆನಿಸುತ್ತದೆ ಎಂಬ ಆಚಾರ್ಯರ ಸಿದ್ಧಾಂತವನ್ನು ಮನಸ್ಸಿಗೆ ತೆಗೆದುಕೊಂಡಾಗ ತಾರತಮ್ಯದ ಮಹತ್ವವೆಷ್ಟು ಎಂಬ ಅರಿವಾಗುತ್ತದೆ. ಉದಾ : ವಿಶ್ವಾಮಿತ್ರರೂ ಬ್ರಹ್ಮರ್ಷಿಗಳು, ವಸಿಷ್ಠರೂ ಬ್ರಹ್ಮರ್ಷಿಗಳು. ಆದರೂ ಅವರಿಬ್ಬರ ನಡುವೆ ನಡೆದ ಅನೇಕ ಪರಸ್ಪರ ವಿರೋಧದ ಘಟನೆಗಳು ಹೇಗೆ ತಾರತಮ್ಯ ದ್ಯೋತಕವೋ ಹಾಗೆ ಪ್ರಕೃತದಲ್ಲೂ ತಿಳಿದರೆ ತಪ್ಪಿಲ್ಲ.

**ಇನ್ನು ಈಗಿನ ಕಾಲದಲ್ಲಿ ಪುಸ್ತಕಗಳು, ವ್ಯಾಖ್ಯಾನಗಳು, ಆಡಿಯೋ, ವೀಡಿಯೋ, ಕೋಶಗಳು, ಕಂಪ್ಯೂಟರ್** ಎಲ್ಲ ಇರಬೇಕಾದರೆ **ಸಂಸ್ಕೃತದ ಭಾಷಾಜ್ಞಾನ**

**ಇದ್ದಲ್ಲಿ ಗುರುವೇಕೆ? ಎಂಬ ಭ್ರಮೆ ನಮ್ಮಲ್ಲೆಲ್ಲಾ ಆವರಿಸಿದೆ.** ಕಾಲಕಾಲಕ್ಕೆ ಇಂತಹ ಭ್ರಮಜ್ಞಾನ ಹುಟ್ಟುತ್ತದೆ ಎಂದಿಟ್ಟುಕೊಂಡೇ ಭಾರತಾದಿಗಳಲ್ಲಿ ಇಂತಹ ಸಾರ್ವಕಾಲಿಕ ಉದಾಹರಣೆಗಳ ಮುಖಾಂತರ ಸಾರ್ವಕಾಲಿಕ, ಸರ್ವಸಜ್ಜನರನ್ನು ಎಚ್ಚರಿಸ ಲೆಂದೇ ಹೊರಟ ವೇದವ್ಯಾಸರ ವಾಣಿ ಎಷ್ಟು ಸರ್ವಜ್ಞತ್ವದಿಂದ ಕೂಡಿದೆ. ಆದ್ದರಿಂದ ಶ್ರೀವಾದಿರಾಜರು ಶ್ರೀರಾಘವೇಂದ್ರರಂತಹ ಗುರುಗಳು ಸಿಕ್ಕಿರುವುದು ನಮ್ಮ ಸೌಭಾಗ್ಯ. ಅಂತಹವರ ಗ್ರಂಥಗಳನ್ನು ಗುರುಮುಖೇನ ಅಧ್ಯಯನಮಾಡಿ ನಾವು ಜನ್ಮವನ್ನು ಸಾರ್ಥಕಮಾಡಿಕೊಳ್ಳೋಣ. ರಹಸ್ಯವನ್ನು ತಿಳಿದು ಮುಂದಿನ ಪರಂಪರೆಗೆ ದಾರಿದೀಪ-ವಾಗಿ, ಪರಂಪರೆಯನ್ನೂ ಮುಂದುವರೆಸಿ ನಮ್ಮ ಕೊಡುಗೆಯನ್ನು ಕೊಡೋಣ. ಹಾಗಿಲ್ಲದಿದ್ದಲ್ಲಿ ಶ್ರೀರಾಘವೇಂದ್ರರ ಪ್ರಾತಃಸಂಕಲ್ಪಗದ್ಯದಲ್ಲಿ 'ಅನಾದಿಸತ್ಪರಂಪರಾಪ್ರಾಪ್ತ' ಎನ್ನುವ ವಿಶೇಷಣ ಏಕೆ ಬೇಕಿತ್ತು? ಆದ್ದರಿಂದ ಶ್ರೀರಾಘವೇಂದ್ರರ ಒಂದೊಂದು ಪದವೂ ಬಹ್ವರ್ಥಗರ್ಭಿತವಾದದ್ದೇ ಎಂಬಲ್ಲಿ ಸಂದೇಹವೇ ಇಲ್ಲ.

❑❑


## ಶ್ರೀನವರತ್ನ ಸುದರ್ಶನಾಚಾರ್ಯರಿಂದ ಪ್ರಾಯೋಜಿತವಾದ ಮಾನವೀಯ ಕಳಕಳಿಯ ನೂತನ ಯೋಜನೆ

"ಜಾತಸ್ಯ ಹಿ ಧ್ರುವೋ ಮೃತ್ಯುಃ ಧ್ರುವಂ ಜನ್ಮ ಮೃತಸ್ಯ ಚ"

ಎಂಬ ಗೀತಾಚಾರ್ಯನ ವಾಕ್ಯದಂತೆ ಈ ಮಾನವ ಶರೀರವು ಅನಿತ್ಯ. ಈ ಚರಾಚರ ಜಗತ್ತಿನಲ್ಲಿ ಹುಟ್ಟು-ಸಾವುಗಳು ಸತ್ಯ. ಈ ಕಾರಣದಿಂದಾಗಿ ಈ ಶರೀರವನ್ನು ಹೊಂದಿದ ಜೀವಿಗೆ ಈ ಜಗತ್ತಿನಲ್ಲಿ ಇರುವ ತನಕ ಶುಭಕರ್ಮಗಳೂ, ಮೃತಿ ಹೊಂದಿದ ನಂತರ ಅಪರಕರ್ಮಗಳು ಶಾಸ್ತ್ರೋಕ್ತವಾಗಿ ನಡೆಯಬೇಕೆಂದು ಸೃಷ್ಟಿ ನಿಯಮ.

ನಮ್ಮ ಸಮಾಜದಲ್ಲಿ ಬಹಳ ಜನರು ಇತರರಿಗೆ ಇರುವಂತೆ ಬಂಧು-ಬಾಂಧವರನ್ನು ಹೊಂದಿರುವುದಿಲ್ಲ. ವಯಸ್ಸಾದ ನಂತರದಲ್ಲಿ ಆ ವ್ಯಕ್ತಿಯ ಮನಸ್ಸಿನಲ್ಲಿ "ನಾನು ಮೃತಿ ಹೊಂದಿದ ಮೇಲೆ ನನ್ನ ಅಪರಕರ್ಮಗಳನ್ನು ಮಾಡುವವರು ಯಾರೂ ಇಲ್ಲ" ಎಂಬ ಚಿಂತೆಯು ಬಹಳವಾಗಿ ಕಾಡುತ್ತಿರುತ್ತದೆ. ಈ ರೀತಿಯಾಗಿ ಏಕಾಂಗಿಗಳಾದ ಜೀವಿಗಳಿಗೆ ಅವರ ಚಿಂತೆಯನ್ನು ದೂರಮಾಡಿ, ಅವರ ನಿಧನದ ನಂತರದಲ್ಲಿ ಶಾಸ್ತ್ರೋಕ್ತವಾಗಿ ಅವರ ಅಪರಕರ್ಮಗಳನ್ನು ಮಾಡುವ ಒಂದು ಅತ್ಯಂತ ಪವಿತ್ರವಾದ ಮಾನವೀಯ ಅನುಕಂಪದ ಯೋಜನೆಯನ್ನು ಅಪರಕರ್ಮ ಧುರೀಣರಾದ ಶ್ರೀನವರತ್ನ ಸುದರ್ಶನಾಚಾರ್ಯರು ರೂಪಿಸಿರುತ್ತಾರೆ. ಈ ಯೋಜನೆಯ ಅನ್ವಯ ಬಂಧು-ಬಾಂಧವರಿಲ್ಲದ ಏಕಾಂಗಿ ವ್ಯಕ್ತಿಗಳು ಈ ಯೋಜನೆಯಲ್ಲಿ ತಮ್ಮ ಹೆಸರು - ವಿಳಾಸಗಳನ್ನು ನೋಂದಾಯಿಸಿ ನಿಶ್ಚಿಂತರಾಗಿ ತಮ್ಮ ಸ್ವಸ್ವಯೋಗ್ಯ ಕರ್ಮನಿರತರಾಗಿ ಸಾಧನೆ ಮಾಡಿಕೊಳ್ಳಬಹುದು. ಈ ಒಂದು ಸಾಮಾಜಿಕ ಕಳಕಳಿಯ ಯೋಜನೆಗೆ ಆಸಕ್ತಿಯುಳ್ಳ ಉದಾರ ಹೃದಯಿಗಳು ದೇಣಿಗೆಯನ್ನು ನೀಡಲು ಅವಕಾಶವಿರುತ್ತದೆ. ಈ ಯೋಜನೆಯ ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಬೇಕಾದ ವಿಳಾಸ

**ಶ್ರೀನವರತ್ನ ಸುದರ್ಶನಾಚಾರ್ಯ**

ಶ್ರೀಪವಮಾನ ಮಂದಿರ ಧಾರ್ಮಿಕ ಕೇಂದ್ರ, ಶ್ರೀಗುರು ರಾಘವೇಂದ್ರ ಸೇವಾ ಸಮಿತಿ (ರಿ.)
ತ್ಯಾಗರಾಜನಗರ, ಬೆಂಗಳೂರು - 560 028
ದೂರವಾಣಿ ಸಂಖ್ಯೆ : 080-26766711, 26768662, 55391173, ಮೊಬೈಲ್ ಸಂಖ್ಯೆ : 98801-10281




**ಲೇಖನಾಂಕ**

# ಜೀವನ ಸಂಗ್ರಾಮದಲ್ಲಿ ಶ್ರುತಿ-ಸ್ಮೃತಿ ಮಾರ್ಗದರ್ಶನ


■ ಶ್ರೀ ಕೋಟೇಶ್ವರ ಸೂರ್ಯನಾರಾಯಣರಾವ್
'ಮಹಾಲಕ್ಷ್ಮಿ ಕೃಪಾ', ೨೫/೧, ಡಿ.ವಿ.ಜಿ. ರಸ್ತೆ, ಬಸವನಗುಡಿ, ಬೆಂಗಳೂರು - ೦೪


ಹಿಂದಿನ ಸಂಚಿಕೆಯಿಂದ.......

**"ದೀಪಂ ನ ಸ್ಥಾಪಯೇದ್ಭೂಮೌ ಘೃತ-ತೈಲೇ ನ ಮಿಶ್ರಯೇತ್ ।**
**ಪಾತ್ರಂ ತಸ್ಯ ನ ಭಗ್ನಂ ಸ್ಯಾತ್ ವರ್ತಿಕಾ ಚಾಪ್ಯದೂಷಿತಾ ॥"**

ದೀಪವನ್ನು ನೆಲದಲ್ಲಿಡಬಾರದು, **ತುಪ್ಪ ಹಾಗೂ ಎಣ್ಣೆಯೊಡನೆ ಮಿಶ್ರ-ಗೊಳಿಸಿದ ದೀಪವನ್ನು ಹಚ್ಚಬಾರದು,** ಎಣ್ಣೆ ಬತ್ತಿ ನಿಲ್ಲುವ ಭಾಗ ಒಡೆದಿರಬಾರದು, ಬತ್ತಿಯು ನುಣುಪಾಗಿರಬೇಕು.

**"ದೇವಸ್ಯ ದಕ್ಷಿಣೇ ಪಾರ್ಶ್ವೇ ದೀಪಂ ದದ್ಯಾದ್ಯಥಾವಿಧಿ ।**
**ಘೃತದೀಪಂ ದಕ್ಷಿಣಸ್ತೈಲದೀಪಂ ಚ ವಾಮತಃ ।**
**ಸಾಧಾರಂ ಸ್ಥಾಪಯೇದ್ದೀಪಮನ್ಯಥಾ ಹ್ಯಶುಭಂ ಭವೇತ್ ॥"**

ದೇವರ ಬಲಭಾಗಕ್ಕೆ ದೀಪವನ್ನಿಡಬೇಕು. ತುಪ್ಪದ ದೀಪ ದೇವರ ಬಲಕ್ಕೂ, ಎಣ್ಣೆಯ ದೀಪ ದೇವರ ಎಡಕ್ಕೂ ಇಡಬೇಕು. ದೀಪಕ್ಕೆ ಭದ್ರ ಆಧಾರವಿರಬೇಕು. ಹೀಗೆ ಮಾಡದಿದ್ದರೆ ಅಶುಭವುಂಟಾಗುವುದು.

**"ಭಸ್ಮನಾ ಶುದ್ಧತೇ ಕಾಂಸ್ಯಂ ತಾಮ್ರಮಾಮ್ಲೇವ ಶುದ್ಧ್ಯತಿ ।**
**ರಜಸಾ ಶುದ್ಧ್ಯತೇ ನಾರೀ ನದೀ ವೇಗೇನ ಶುದ್ಧ್ಯತಿ ॥"**

ಕಂಚಿನ ಪಾತ್ರೆಗಳು ಭಸ್ಮಲೇಪನದಿಂದಲೂ, ತಾಮ್ರಪಾತ್ರೆಗಳು ಹುಣಸೇ ಹಣ್ಣಿನ ಸ್ಪರ್ಶದಿಂದಲೂ, ನಾರಿಯು ರಜಸ್ರಾವದಿಂದಲೂ, ನದಿಯು ಪ್ರವಾಹ-ದಿಂದಲೂ ಶುದ್ಧವೆನಿಸುತ್ತದೆ.

**"ವನಿತಾನಾಂ ಗಲೇ ಸೂತ್ರೇ ಮಾಂಗಲ್ಯೇ ಶಿಥಿಲೇ ಪುನಃ ।**
**ಕೃತ್ವಾ ತು ಪೂರ್ವವತ್ಸದ್ಯೋ ಧಾರಯೇತ್ ಪ್ರಥಮೋಪಮಮ್ ॥"**

ಸುಮಂಗಲಿಯ ಮಂಗಲಸೂತ್ರ ಭಿನ್ನವಾದಾಗ ಮೊದಲಿನಂತೆ ಮಾಡಿಸಿ ದೇವರಿಗೆ ಸಮರ್ಪಿಸಿ ಸ್ವಯಂ ಧರಿಸಬೇಕು.

**"ಏಕ ವಸ್ತ್ರೋ ನ ಭುಂಜೀತ ಶ್ರೌತೇ ಸ್ಮಾರ್ತೇ ಚ ಕರ್ಮಣೀ ।**
**ನ ಕುರ್ಯಾದೇವ ಕಾರ್ಯಾಣಿ ದಾನಂ ಹೋಮಂ ತಥಾ ಜಪಮ್ ॥"**

ಒಂದೇ ವಸ್ತ್ರವನ್ನು ಧರಿಸಿಕೊಂಡು ಶ್ರೌತ ಹಾಗೂ ಸ್ಮಾರ್ತ ಕರ್ಮಗಳೆರಡನ್ನೂ ಊಟ, ಜಪ, ದೇವತಾರ್ಚನೆ, ದಾನ, ಹೋಮಗಳನ್ನು ಮಾಡಬಾರದು.

**"ಆಸನಾರೂಢ ಪಾದೋ ವಾ ವಸ್ತ್ರಾರ್ಧಪ್ರಾವೃತೋಽಪಿ ವಾ ।**
**ಹಸತೇ ವದತೇ ಚೈವ ತತ್ಕ್ರಿಯಾ ನಿಷ್ಫಲಂ ಭವೇತ್ ॥"**

ಆಸನದಲ್ಲಿ ಪಾದಗಳನ್ನಿಡುವುದು, ಅರ್ಧ ವಸ್ತ್ರವನ್ನುಟ್ಟು, ಉಳಿದರ್ಧವನ್ನು ಹೆಗಲಿನಲ್ಲಿ ಹಾಕಿಕೊಳ್ಳುವುದು, ನಗುತ್ತಿರುವುದು, ಮಾತನಾಡುತ್ತಿರುವುದು - ಇವುಗಳನ್ನು ಕ್ರಿಯಾಸಮಯದಲ್ಲಿ ಮಾಡಬಾರದು. ಹಾಗೆ ಮಾಡುವುದರಿಂದ ಕ್ರಿಯಾಕರ್ಮವೇ ನಿಷ್ಫಲವಾಗುವುದು.

**"ಯಾ ತಿಥಿಂ ಸಮನುಪ್ರಾಪ್ಯ ಉದಯಂ ಯಾತಿ ಭಾಸ್ಕರಃ ।**
**ಸಾ ತಿಥಿಃ ಸಮನುಗ್ರಾಹ್ಯಾ ದೇವಪೂಜಾದಿ ಕರ್ಮಸು ॥"**

ಸೂರ್ಯೋದಯ ಕಾಲದಲ್ಲಿ ಯಾವ ತಿಥಿ ಇರುವುದೋ ಅದೇ ತಿಥಿಗಳನ್ನು ಪೂಜಾದಿಕಾರ್ಯಗಳಲ್ಲಿ ಆಚರಿಸಬೇಕು.

**"ದೇವಯಾತ್ರಾ ವಿಹಾರೇಷು ಯಜ್ಞೇಷು ಪ್ರಕೃತೇಷು ಚ ।**
**ಉತ್ಸವೇಷು ಚ ಸರ್ವೇಷು ಸ್ಪೃಷ್ಟಾಸ್ಪೃಷ್ಟೌ ನ ವಿದ್ಯತೇ ॥**

**ಉತ್ಸವೇ ವಾಸುದೇವಸ್ಯ ಯಃ ಸ್ನಾತಿ ಸ್ಪರ್ಶ ಶಂಕಯಾ ।**
**ಸ್ವರ್ಗಸ್ಥಾಃ ಪಿತರಸ್ತಸ್ಯ ಪತಂತಿ ನರಕೇ ಕ್ಷಣಾತ್ ॥**

**ವಿಷ್ಣ್ವಾಲಯೇ ಸಮೀಪಸ್ಥಾನ್ ವಿಷ್ಣುಸೇವಾರ್ಥಮಾಗತಾನ್ ।**
**ಚಂಡಾಲಾನ್ ಪತಿತಾನ್ವಾಪಿ ಸ್ಪೃಷ್ಟ್ವಾ ನ ಸ್ನಾನಮಾಚರೇತ್ ॥"**

ದೇವರ ಉತ್ಸವ - ವಿಹಾರ - ಯಜ್ಞ - ಇತ್ಯಾದಿ ಸಾಮೂಹಿಕವಾಗಿ ನಡೆಸಲ್ಪಡುವ ಸಂದರ್ಭ, ಅರ್ಥಾತ್ ದೇವಸ್ಥಾನದಿಂದ ಹೊರಭಾಗದಲ್ಲಿ ನಡೆಯುವ ಧಾರ್ಮಿಕ ಕಾರ್ಯಕ್ರಮದಲ್ಲಿ ಒಂದು ಸಂದರ್ಭ ದೇವರ ಉತ್ಸವಮೂರ್ತಿಯೊಡ- ನಿದ್ದರೂ ಅಲ್ಲಿ ಅಸ್ಪೃಶ್ಯತೆ ಆಚರಣೆ ಮಾಡಬಾರದೆನ್ನುವುದನ್ನೂ, ಮಡಿ - ಮೈಲಿಗೆ ಇತ್ಯಾದಿ ದಿಗ್ಬಂಧನವನ್ನು ವಿಧಿಸಿಕೊಳ್ಳಬಾರದೆಂದು (ಉತ್ಸವದಲ್ಲಿ ಎಲ್ಲರನ್ನೂ ಮುಟ್ಟಿದ್ದ- ರಿಂದ ಮೈಲಿಗೆಯಾಯಿತೆಂದು ಸ್ನಾನಮಾಡಬಾರದೆಂದು) ಸ್ಮೃತಿ ಸ್ಪಷ್ಟವಾಗಿ ನಿರ್ದೇಶನ ನೀಡಿದೆ.



ಒಂದು ಸಂದರ್ಭ ಪೂರ್ವಾಗ್ರಹಪೀಡಿತರಾಗಿ ಉತ್ಸವಾನಂತರ ಮೈಲಿಗೆ- ಯಾಯಿತೆಂದು ಸ್ನಾನಮಾಡಿದರೆ ಸ್ವರ್ಗವಾಸಿಯಾಗಿದ್ದ ಪಿತೃಗಳು ನರಕಕ್ಕೆ ಬೀಳುತ್ತಾರೆ.

**"ಅಥ ಕುಶೋ ವಹ್ನಿಮಂತ್ರೌ ತುಳಸೀ ವಿಪ್ರಧೇನವಃ ।**
**ನೈತೇ ನಿರ್ಮಾಲ್ಯತಾಂ ಯಾಂತಿ ಕ್ರಿಯಮಾಣಃ ಪುನಃ ಪುನಃ ॥"**

ದರ್ಭೆ, ಅಗ್ನಿ, ಮಂತ್ರ, ತುಳಸಿ, ಬ್ರಾಹ್ಮಣ, ಗೋವು - ಇವರುಗಳನ್ನು, ಅವುಗಳನ್ನು ಮತ್ತೆ ಮತ್ತೆ ಉಪಯೋಗಿಸಿದರೂ ನಿರ್ಮಾಲ್ಯವೆನಿಸುವುದಿಲ್ಲ.

**"ಬಾಹುಭ್ಯಾಮಥ ಜಾನುಭ್ಯಾಂ ಶಿರಸಾ ಮನಸಾ ಧಿಯಾ ।**
**ಪಂಚಾಂಗತ ಪ್ರಣಾಮಃ ಸ್ಯಾತ್ ಸ್ತ್ರೀಣಾಂ ನಮನ ಲಕ್ಷಣಮ್ ॥"**

ಸ್ತ್ರೀಯರು ನಮಸ್ಕರಿಸುವಾಗ ಕೈಗಳೆರಡು, ಮೊಣಕಾಲುಗಳೆರಡು ಮತ್ತು ತಲೆ ನೆಲಕ್ಕೆ ತಗಲಬೇಕು. ಮನಸ್ಸು ಬುದ್ಧಿಯಲ್ಲಿ ಭಗವಂತನನ್ನು ಧ್ಯಾನಿಸಿ ನೆನೆಯಬೇಕು. ಇವು ಸ್ತ್ರೀಯರು ನಮಸ್ಕರಿಸುವಾಗ ಅನುಸರಿಸಬೇಕಾದ ವಿಧಿಗಳು.

❑❑

**ಶ್ರೀಶ್ರೀಪಾದಂಗಳವರಿಂದ ಅನುಗ್ರಹಿತ ಜನಪ್ರಿಯವಾದ ಯಾತ್ರಾ ಪ್ರವಾಸ**

**ಶ್ರೀವಿಜಯವಿಠ್ಠಲ ಯಾತ್ರಾ ಪ್ರವಾಸ, ಬಳ್ಳಾರಿ**

**(ಕರ್ನಾಟಕ ರಾಜ್ಯ ಸರ್ಕಾರ ಪ್ರವಾಸೋದ್ಯಮ ಇಲಾಖೆಯಿಂದ ಮನ್ನಣೆ ಪಡೆದಿದೆ)**
**19, ಅಂತಾಪುರ ಕಾಲೋನಿ, ಸತ್ಯನಾರಾಯಣಪೇಟೆ, ಬಳ್ಳಾರಿ ಇವರಿಂದ**

**13 ದಿನಗಳ ದಕ್ಷಿಣ ಭಾರತ ಯಾತ್ರಾ ಪ್ರವಾಸ**

**ತಾ. 27.01.2008 ರಿಂದ ತಾ. 08.02.2008 ರವರೆಗೆ**

ಚಿಪ್ಪಗಿರಿ, ಕಂಚಿ (ವಿಷ್ಣುಕಂಚಿ, ಶಿವಕಂಚಿ), ತಿರುವಣ್ಣಾಮಲೈ, ತಿರುಕೋಯಿಲೂರು, ಶ್ರೀಮುಷ್ಣಂ, ಚಿದಂಬರಂ, ಭುವನಗಿರಿ, ಕುಂಭಕೋಣಂ, ತಂಜಾವೂರು, ಶ್ರೀರಂಗಂ, ಜಂಬುಕೇಶ್ವರ, ರಾಮೇಶ್ವರ, ಮಧುರೈ, ತೋತಾದ್ರಿ, ಕನ್ಯಾಕುಮಾರಿ, ಸುಚೀಂದ್ರ, ತಿರುವನಂತಪುರಂ, ಜನಾರ್ಧನ, ಕಾಲಡಿ, ಗುರುವಾಯೂರು, ಸುಬ್ರಹ್ಮಣ್ಯಂ, ಧರ್ಮಸ್ಥಳ, ಇತ್ಯಾದಿ.

**ಸೀಟು ಒಂದಕ್ಕೆ ರೂ. 6,500/- ಮಾತ್ರ**

**ಈ ಸುದೀರ್ಘ ಪ್ರವಾಸದಲ್ಲಿ ಪ್ರತಿದಿನ ಎರಡು ಕಾಫಿ, ಊಟ, ರಾತ್ರಿ ಪೂರ್ಣ ಫಲಹಾರ, ದರ್ಶನದ ವ್ಯವಸ್ಥೆ, ವಸತಿ, ಪ್ರಾಂತಗಳ ತೆರಿಗೆ ಸೇರಿದೆ.**

**ಇಂದೇ ಸೀಟು ಒಂದಕ್ಕೆ ರೂ. 2,500/– ಮುಂಗಡ ಹಣವನ್ನು ಕೊಟ್ಟು ತಮ್ಮ ಸೀಟನ್ನು ಕಾದಿರಿಸಿರಿ**

**ಹೆಚ್ಚಿನ ವಿವರಗಳಿಗೆ**

**R.V. Chalapathy**
Proprietor

**H.C. Guruprasad**
S/o. R.V. Chalapathy

**Sri Vijaya Vittala Travels**

"SRI VIJAYA", 19, Anthapur Colony, 2nd Cross, S.N. Pet, Bellary - 583 101
**Ph : 08392-275580 / 271861, CELL : 94487 92267**

ಲೇಖನಾಂಕ

# ಸರ್ವಕರ್ಮಸಮರ್ಪಣೆ

■ ಶ್ರೀವರದರಾಜ್ ಗುತ್ತಲ್

ನಂ. ೧೦೬/೫೫, ೩ನೇ ಅಡ್ಡರಸ್ತೆ, ೩ನೇ ಮುಖ್ಯರಸ್ತೆ, ನಾಗೇಂದ್ರ ಬಡಾವಣೆ, ಬೆಂಗಳೂರು - ೫೦

**ಭ**ಕ್ತರ ಯೋಗಕ್ಷೇಮದ ಭಾರವನ್ನು ಹೊತ್ತಿರುವ ಭಗವಂತನು ನಮ್ಮಿಂದ ಹೆಚ್ಚಿನದೇನನ್ನೂ ಅಪೇಕ್ಷಿಸುವುದಿಲ್ಲ. ಅವನಿಗೆ ಅದರಿಂದ ಯಾವ ಪ್ರಯೋಜನವೂ ಇಲ್ಲ. ''ಆಪ್ತ ಕಾಮಸ್ಯ ಕಾ ಸ್ಪೃಹಃ'' ಅಂದರೆ ಭಗವಂತನು ಪೂರ್ಣಕಾಮನಾದ್ದರಿಂದ ಪೂರ್ಣತೆಯಿರುವ ವಸ್ತು ಭಗವಂತ, **ಅವನಿಗೆ ಅಪೂರ್ಣರಾದ ಭಕ್ತರು ಸಮರ್ಪಿಸಿದ ಕರ್ಮದಿಂದಲಾಗಲೀ, ವಸ್ತುಗಳಿಂದಾಗಲೀ, ಯಾವ ಲಾಭವೂ ಇಲ್ಲ**. ಭಕ್ತರನ್ನು ಉದ್ಧಾರ ಮಾಡುವ ಸಲುವಾಗಿಯೇ ಅವತಾರಗಳನ್ನೂ ಮಾಡುತ್ತಾನೆ. ಶಿಷ್ಟರನ್ನು ರಕ್ಷಿಸುವುದು, ದುಷ್ಟರನ್ನು ಶಿಕ್ಷಿಸುವುದೇ ಅವತಾರದ ಮುಖ್ಯ ಪ್ರಯೋಜನ. ಸಾಮಾನ್ಯವಾಗಿ ನಾವು ಪತ್ರವನ್ನು ಬರೆಯುವ ಸಂದರ್ಭದಲ್ಲಿ 'ಯೋಗಕ್ಷೇಮ' ಶಬ್ದವನ್ನು ಬಳಸುತ್ತೇವೆ. ನಮ್ಮ ಅರ್ಥದಲ್ಲಿ ನಾವು ಚೆನ್ನಾಗಿದ್ದೇವೆ, ನೀವು ಚೆನ್ನಾಗಿದ್ದೀರಾ? ಎನ್ನುವ ಉದ್ದೇಶದಿಂದ ಯೋಗಕ್ಷೇಮ ಶಬ್ದದ ಬಳಕೆಯಾಗಿರುತ್ತದೆ.

ಆದರೆ ಶ್ರೀರಾಘವೇಂದ್ರತೀರ್ಥರ ಅಭಿಪ್ರಾಯ 'ಯೋಗಕ್ಷೇಮ' ಶಬ್ದವನ್ನು ತಮ್ಮ ಗೀತಾವಿವೃತ್ತಿ ಗ್ರಂಥದಲ್ಲಿ ಭಗವಂತನಿಂದಲೇ 'ಯೋಗಕ್ಷೇಮ' ಉಂಟಾಗುತ್ತದೆ. ಯೋಗವೆಂದರೆ 'ಅಪ್ರಾಪ್ತಪ್ರಾಪ್ತಿ' ಯಾವುದನ್ನು ಹೊಂದಿಲ್ಲವೋ ಅದು ಯೋಗವೆಂತಲೂ, 'ಪ್ರಾಪ್ತಿ ಪರಿರಕ್ಷಣಂ ಕ್ಷೇಮಃ' ಅಂದರೆ ಹೊಂದಿದ ವಸ್ತುವನ್ನು ರಕ್ಷಿಸುವುದು ಎಂದು ಅರ್ಥೈಸಿದ್ದಾರೆ. ಯಾವ ಯಾವ ವಸ್ತುಗಳನ್ನು ಭಗವಂತನು ಸೃಷ್ಟಿಸಿದ್ದಾನೋ, ಅವುಗಳನ್ನು ಕೇವಲ ನಮ್ಮ ಸ್ವಾರ್ಥಕ್ಕಾಗಿಯೇ ಬಳಸದೆ, ಅವುಗಳನ್ನೂ ಭಗವಂತನಿಗಾಗಿ ಸಮರ್ಪಿಸುವ ತ್ಯಾಗಪ್ರವೃತ್ತಿಯಿಂದ ಭಗವಂತನು ಪ್ರಸನ್ನನಾಗುತ್ತಾನೆ. ಏಕೆಂದರೆ ಅವನು ಕೊಟ್ಟ ವಸ್ತುಗಳನ್ನು ಅವನ ಪ್ರೀತ್ಯರ್ಥವಾಗಿ ಬಳಸಿದರೆ ಅದರಿಂದ ಸಾಧಕನಿಗೆ ಯಾವ ಪಾಪದ ಲೇಪವು ಅಂಟುವುದಿಲ್ಲ. 'ಈಶಾವಾಸ್ಯಮಿದಂ ಸರ್ವಂ ಯತ್ಕಿಂಚ ಜಗತ್ಯಾಂ ಜಗತ್, ತೇನ ತೆಕ್ತೇನ ಭುಂಜೀಥಾ ಮಾ ಗೃದಃ ಕಸ್ಯಸ್ವಿದ್ಧನಮ್' (ಈಶಾವಾಸ್ಯ ಉಪನಿಷತ್ತು). ಭಗವಂತನಿಂದ ಕೊಡಲ್ಪಟ್ಟ ವಸ್ತುಗಳಿಂದ ತೃಪ್ತನಾಗಿ, ಅವನ ಪ್ರೀತಿಗೋಸ್ಕರವಾಗಿಯೇ ಕರ್ಮಗಳನ್ನು ಆಚರಿಸಬೇಕು. ಆ ವಸ್ತುಗಳ ಮೇಲೆ ನಮ್ಮ ಒಡೆತನ (ownership) ಭಾವನೆಯಾಗಲೀ ಅಥವಾ ನಮ್ಮ ಕ್ರಿಯೆಗಳ ಬಗ್ಗೆ, ನಾನೇ ಕರ್ತ ಎನ್ನುವ ಅಹಂಕಾರವಾಗಲೀ ನಮ್ಮಲ್ಲಿ ಇರಬಾರದು. ನಮ್ಮಿಂದ ನಡೆದ ಎಲ್ಲಾ



ಕರ್ಮಗಳಿಗೂ, ಸ್ವತಂತ್ರನಾದ ಭಗವಂತನೇ ಪ್ರೇರಕನು ಎನ್ನುವ ಅನುಸಂಧಾನವೇ ಸರ್ವಕರ್ಮಗಳ ಸಮರ್ಪಣೆ. ಭಗವಂತನಿಗೆ ಪ್ರೀತಿಕರವಾಗುವಂತೆ ನಮ್ಮ ಜೀವನದ ಎಲ್ಲ ವ್ಯವಹಾರಗಳೂ ಲೌಕಿಕವಾಗಲೀ, ಆಧ್ಯಾತ್ಮಿಕವಾಗಲೀ ಅದು ಹರಿಯ ಪೂಜೆ ಎನ್ನಿಸುತ್ತದೆ. ''ಪ್ರಾತಃ ಪ್ರಭೃತಿ ಸಾಯಾಂತಂ, ಸಾಯಾದಿ ಪ್ರಾತರಂತತಃ । ಯತ್ಕರೋಮಿ ಜಗನ್ನಾಥ ತದಸ್ತು ತವ ಪೂಜನಂ ॥'' ''ಹಗಲು ಆರಂಭಮಾಡಿ ರಾತ್ರಿಯವರೆಗೆ, ರಾತ್ರಿಯಿಂದ ಪ್ರಾತಃಕಾಲದವರೆಗೆ ಏನೇನು ಕರ್ಮಗಳನ್ನು ಮಾಡುವೆನೋ ಅವೆಲ್ಲವೂ ನಿನ್ನ ಪೂಜೆಯೇ ಆಗಿರಲಿ'' ಎಂದು ಪ್ರಾರ್ಥಿಸಬೇಕು. ಕರ್ಮಗಳು ಸ್ವವರ್ಣಾಶ್ರಮೋಚಿತ ವಿಹಿತಕರ್ಮಗಳಾದರೆ ಮಾತ್ರ, ಅವು ಹರಿಯ ಪೂಜೆ ಆಗುತ್ತವೆ ಎಂದು ಅರ್ಥ. ಅಂತಹ ಕರ್ಮಗಳನ್ನು ಭಗವಂತನಿಗೆ ಶ್ರೀಕೃಷ್ಣಾರ್ಪಣಪೂರ್ವಕವಾಗಿ ಸಮರ್ಪಿಸಬೇಕು. ಸಮರ್ಪಿಸದೇ ಇದ್ದಲ್ಲಿ, ಆ ಕರ್ಮಗಳಿಂದ ಬಂದಂತಹ ಪುಣ್ಯವನ್ನು ಅಸುರರು ಅಪಹರಿಸುತ್ತಾರೆ. ಆದ್ದರಿಂದ ಅವುಗಳನ್ನು ಕಾಲ ಕಾಲಕ್ಕೆ **ಶ್ರೀಮುಖ್ಯಪ್ರಾಣದೇವರ ದ್ವಾರಾ ಭಗವಂತನಿಗೆ ಅರ್ಪಿಸಬೇಕು.** ಇದನ್ನೇ ಗೀತೆಯಲ್ಲಿ ಶ್ರೀಕೃಷ್ಣನು ಅರ್ಜುನನಿಗೆ ಉಪದೇಶಿಸಿದುದು.

**"ಯತ್ಕರೋಶಿ ಯದಶ್ನಾಸಿ, ಯಜ್ಜುಹೋಷಿ ದದಾಸಿ ಯತ್ ।**
**ಯತ್ ತಪಸ್ಯಸಿ ಕೌಂತೇಯ! ತತ್ ಕುರುಷ್ವ ಮದರ್ಪಣಮ್ ॥"**

ಯಾವ ವಿಹಿತಕರ್ಮಗಳನ್ನು ಆಚರಿಸುವೆವೋ, ಯಾವ ಭಗವಂತನಿಗೆ ನಿವೇದಿಸಿದ ಆಹಾರವನ್ನು ತಿನ್ನುವೆವೋ, ಯಾವ ವೈಶ್ವದೇವಾದಿಗೋಮಗಳನ್ನು ಆಚರಿಸುವೆವೋ, ಯಾವ ಗಾಯತ್ರ್ಯಾದಿ ಮಂತ್ರಗಳನ್ನು ಜಪಿಸುವೆವೋ, ಯಾವ ದಾನಗಳನ್ನು ಮಾಡುವೆವೋ ಯಾವ ಜ್ಞಾನರೂಪವಾದ ತಪಸ್ಸನ್ನು (ಶ್ರಾವಣ, ಮನನಾದಿಗಳು) ಆಚರಿಸುವೆವೋ, **ಅವೆಲ್ಲವನ್ನು ಭಗವಂತನೇ ನಮ್ಮೊಳಗೆ ನಿಂತು ದೇವತೆಗಳ ದ್ವಾರಾ ಅಸ್ವತಂತ್ರನಾದ ನನ್ನಿಂದ ಮಾಡಿಸಿದ್ದಾನೆ. ಆ ಭಗವಂತನ ಅಧೀನನಾಗಿ ನಾನು ಮಾಡಿದ್ದೇನೆ** ಎನ್ನುವ ಅನುಸಂಧಾನದಿಂದ ಆ ಭಗವಂತನಲ್ಲಿ ಶ್ರೀಕೃಷ್ಣಾರ್ಪಣಪೂರ್ವಕವಾಗಿ ಸಮರ್ಪಿಸುವುದೇ ''ಸರ್ವಕರ್ಮಸಮರ್ಪಣೆ''ಯಾಗಿದೆ. ಒಂದು ವೇಳೆ ನಿಷಿದ್ಧಕರ್ಮವನ್ನು ಆಚರಿಸಿದ್ದರೆ, ಆ ಕರ್ಮವು ನನ್ನ ಹಿಂದಿನ ಜನ್ಮದ ಪಾಪದ ಫಲದಿಂದ ಭಗವಂತನೇ ನನ್ನಲ್ಲಿ ನಿಂತು ಅಸುರರ ಮೂಲಕ ನನ್ನಿಂದ ಮಾಡಿಸಿದ್ದಾನೆ ಎನ್ನುವ ಅನುಸಂಧಾನ ಇರಬೇಕು ಹಾಗೂ ಭಗವಂತನಲ್ಲಿ ಇಂತಹ ನಿಷಿದ್ಧಕರ್ಮಾಚರಣೆಯನ್ನು ನನ್ನಿಂದ ಪುನಃ ಮಾಡಿಸಬೇಡ ಎಂದು ಪಶ್ಚಾತ್ತಾಪದಿಂದ ವಿಜ್ಞಾಪಿಸಿಕೊಳ್ಳಬೇಕು. ಹೀಗೆ ಸಮರ್ಪಿಸುವುದು ಕೂಡಾ ನಿಷಿದ್ಧಕರ್ಮದ ಸಮರ್ಪಣೆಯೇ ಆಗಿದೆ.

ಲೇಖನಾಂಕ

# ಅಪೂರ್ವ ಯೋಗಸಿದ್ಧಿಗಳು ಮತ್ತು ಚತುಃಷಷ್ಠಿಕಲಾವಿದ್ಯೆಗಳು

■ ವಿದ್ವಾನ್. ಕೆ.ಎಲ್. ಪುಷ್ಕರಾಚಾರ್ಯ

ಕ್ಯಾತಸಂದ್ರ, ಹಳೇ ಪೋಸ್ಟ್ ಆಫೀಸ್ ರಸ್ತೆ, ತುಮಕೂರು - ೫೭೨ ೧೦೪

ಹಿಂದಿನ ಸಂಚಿಕೆಯಿಂದ.......

**ಹಿಂದಿನ ಸಂಚಿಕೆಯಲ್ಲಿ ೬೦ ಕಲೆಗಳ ಬಗ್ಗೆ ವಿವರಿಸಿದ್ದಾರೆ. ಉಳಿದ ನಾಲ್ಕು ಇತರೆ ಪ್ರಭೇದಗಳ ಜತೆ ವಿವರಿಸುತ್ತಾರೆ.**

## ಚತುಃಷಷ್ಠಿಕಲಾವಿದ್ಯೆಗಳು

೧) **ಗೀತಾ** (ಹಾಡುಗಾರಿಕೆ, ವಾದ್ಯಗಳನ್ನು ನುಡಿಸುವಿಕೆ, ನರ್ತಿಸುವುದು (ನೃತ್ಯಕಲೆ))

ಸಂಗೀತವು ಪ್ರಾಚೀನ ೬೪ ವಿದ್ಯೆಗಳಲ್ಲಿ ಪ್ರಥಮ ಸ್ಥಾನ ಪಡೆದಿದೆ. ಶಾಸ್ತ್ರೀಯವಾಗಿ ಹೇಳುವುದಾದರೆ ಅದು ಸಾಮವೇದದ ಉಪವೇದವಾದ ''ಗಾಂಧರ್ವ ವೇದ'' ಎಂದೆನಿಸಿಕೊಂಡಿದೆ. ಶಂಕರನ ಪಂಚಮುಖಗಳಿಂದ ಸಪ್ತಸ್ವರಗಳು ಹಾಗೂ ಪಂಚವಿಧ ವಾದ್ಯಗಳು ಹುಟ್ಟಿದವು. ವಾದ್ಯಗಳಿಂದ ಮತ್ತೆ ನಾನಾ ಶಾಸ್ತ್ರಗಳು ಹುಟ್ಟಿದವು. ಅದು ಹೇಗೆ ಸಾಧ್ಯ? ಎನ್ನಲು ಉತ್ತರವು ಇದೆ. ರುದ್ರದೇವರ ಡಮರುಗದಿಂದ ''ಅಇಉಣ್'' ಇತ್ಯಾದಿ ವ್ಯಾಕರಣದ ಮೂಲ ಸೂತ್ರಗಳು ಬಂತಲ್ಲವೆ? ''ಗೀತಂ ವಾದ್ಯಂ ತಥಾ ನೃತ್ಯಂ ತ್ರಯಂ ಸಂಗೀತ ಮುಚ್ಯತೇ'' ಎಂದು ಶಾರ್ಙ್ಗದೇವನು ಹೇಳಿದ್ದಾನೆ. ''ನಾಟ್ಯವು ಋಗ್ವೇದದಿಂದ ಸಾಹಿತ್ಯವನ್ನೂ, ಯಜುರ್ವೇದದಿಂದ ಅಭಿನಯವನ್ನೂ, ಸಾಮವೇದದಿಂದ ಸಂಗೀತವನ್ನೂ, ಅಥರ್ವದಿಂದ ಸಾಹಿತ್ಯವನ್ನೂ, ಸ್ವೀಕರಿಸಿದೆ'' ಎಂದು ಪ್ರಾಚೀನ ನಾಟ್ಯಶಾಸ್ತ್ರಕಾರನಾದ ಭರತಮುನಿ ಹೇಳಿದ್ದಾನೆ. ಇಂತಹ ನಾದೋಪಾಸಕರೂ ಕ್ರಮವಾಗಿ ಮೋಕ್ಷಮಾರ್ಗವನ್ನು ಹೊಂದುತ್ತಾರೆಂದು ''ವೀಣಾವಾದನ ತತ್ವಜ್ಞಃ ಶ್ರುತಿಜಾತಿವಿಶಾರದಃ । ತಾಲಜ್ಞಶ್ಚಾಪ್ಯಪ್ರಯಾಸೇನ ಮೋಕ್ಷಮಾರ್ಗಂ ಸ ಗಚ್ಛತಿ'' ಎಂದು ಪ್ರಮಾಣವಿದೆ. ಅದರಂತೆ ಮಹಾಯೋಗಿಗಳು, ತತ್ವಜ್ಞಾನಿಗಳೂ, ಯತಿಪುಂಗವರೂ, ವಿಭೂತಿಪುರುಷರೂ ಆದ ಶ್ರೀಶ್ರೀವ್ಯಾಸರಾಜಗುರುಸಾರ್ವಭೌಮರು ವ್ಯಾಸತ್ರಯಗಳೆಂಬ ಪ್ರೌಢಶಾಸ್ತ್ರಗ್ರಂಥಗಳನ್ನು ರಚಿಸಿದ ವಿದ್ವತ್ತಿಮಿಂಗಿಲರಾದರೂ, ಸಂಗೀತಶಾಸ್ತ್ರದಲ್ಲಿಯೂ 'ತಿಮಿಂಗಲರೇ' ಎಂಬುದನ್ನು ಪ್ರಾಚೀನರು ಒಪ್ಪಿದ್ದಾರೆ.



**''ಪ್ರಸಿದ್ಧ ಸಂಗೀತ ವಿದ್ಯಾ ಸಂಪ್ರದಾಯಪ್ರವರ್ತಕಃ ।**
**ವಿದ್ಯಾಸಿಂಹಾಸನಾಧ್ಯಕ್ಷಃ ಕಲ್ಪನಾಚತುರಾನನಃ ।**
**ಶ್ರೀವ್ಯಾಸಪ್ಪಾಚಾರ್ಯ ಏವ ಅಸ್ಮತ್ ಪೂವಾಚಾರ್ಯೇತಿ ವಿಶ್ರುತಃ ।''**

ಎಂಬುದಾಗಿ 'ಸಂಗೀತಸಾರಾಮೃತ'ಕಾರನೂ ವರ್ಣಿಸಿದ್ದಾನೆ. ಈ ಸಂಗೀತಕ್ಕೆ ಮುಖ್ಯ ಅಭಿಮಾನಿದೇವತೆಯಾಗಿ **ಶ್ರೀಹನುಮಂತದೇವರೇ ಗುಂಡಕ್ರಿಯಾದಿರಾಗಗಳಿಂದ ಹಾಡಿ, ಅನೇಕ ಬೆಟ್ಟ-ಪರ್ವತ-ಬಂಡೆಕಲ್ಲುಗಳನ್ನೂ ಕರಗಿಸಿದರೆಂದು ಪುರಾಣಗಳಲ್ಲಿ ಕೇಳುತ್ತೇವೆ.** ಹೀಗೆ ಶ್ರೀಮುಖ್ಯಪ್ರಾಣರಿಂದ ಹಿಡಿದು, ದೇವತೆಗಳು, ಗಂಧರ್ವರು, ಋಷಿಪುಂಗವಾದಿ ಸರ್ವರಿಂದಲೂ ಮಾನ್ಯವಾಗಿ ಶ್ರೀಸಾಮಾನ್ಯನವರೆಗೂ ಇಂದಿಗೂ ಹಾಸುಹೊಕ್ಕಾಗಿ ಸಾಧನೆಗೆ ಸಹಕಾರಿಯಾಗಿರುವ ಈ ವಿದ್ಯೆಯನ್ನು ಯಾರು - ಎಂದು ಬಿಡಲು ಸಾಧ್ಯ? ಆದ್ದರಿಂದ ಒಂದೊಂದು ಕಲಾವಿದ್ಯೆಗಳನ್ನು ವಿಸ್ತಾರವಾಗಿ ತಿಳಿಯಬೇಕಾದರೆ ಎಷ್ಟೋ ಜನ್ಮಗಳೇ ಬೇಕಾಗುತ್ತವೆ. ಇನ್ನು ಅವುಗಳ ಸಿದ್ಧಿ ಪಡೆಯಲು ಹೇಳುವುದೇನು? ಈ ಕಲಾವಿದ್ಯೆಗಳು ಯಾರಿಂದಲೋ ಉಪಾದೇಯವಲ್ಲ. ಶ್ರೀಹರಿಭಕ್ತರಿಗೆ ಮಾತ್ರ ಸಾಧ್ಯವು ಈ ಮಹತ್ವವನ್ನು ೬೪ ವಿದ್ಯೆಗಳಲ್ಲಿ ತೋರಿಸಿಕೊಟ್ಟ ಮಹಾತ್ಮರೇ ಶ್ರೀಶ್ರೀಅಜಯ್ಯವಿಜಯೀಂದ್ರತೀರ್ಥರು.

೨) **ವಿಶೇಷಕಚ್ಛೇದ್ಯವಿದ್ಯೆ** : ಹಣೆಯ ಮೇಲೆ ತೊಡಲು ಅಥವಾ ಧರಿಸಲು ಆಗುವಂತೆ ವಿವಿಧ ಆಕೃತಿಗಳಲ್ಲಿ ಎಲೆಗಳನ್ನು - ಪಕ್ಷಿಗಳ ಪುಕ್ಕಗಳನ್ನು ಜೋಡಿಸುವಿಕೆಗೆ ಈ ಹೆಸರು.

೩) **ತಂಡುಲಕುಸುಮಬಲಿವಿಕಾರವಿದ್ಯೆ** : ಪೂಜೆಗಾಗಿ ಅಕ್ಕಿ - ಗೋಧಿ ಮೊದಲಾದ ಧಾನ್ಯಗಳಿಂದ ಮತ್ತು ನಾನಾವಿಧ ಪುಷ್ಪಗಳಿಂದ ಯಂತ್ರಾಕಾರವಾಗಿ ಅಲಂಕರಿಸುವುದು ಹಾಗೂ ಶ್ರೀಹರಿಯ ಅನೇಕ ರೂಪಗಳನ್ನು ಬಿಡಿಸುವುದು, ನಾನಾವಿಧ ಯಜ್ಞಕುಂಡಗಳನ್ನು ಅಲಂಕರಿಸುವುದು. ಈ ವಿಧ ವಿದ್ಯೆಗೆ ಹೆಸರು.

೪) **ಪುಷ್ಪಾಸ್ತರಣವಿದ್ಯೆ** : ಮನೆಯನ್ನು - ಮನೆಯ ಕೊಠಡಿಗಳು - ಅರಮನೆಯ ಸಭಾಗೃಹಗಳನ್ನು - ದೇವಾಲಯದ ಆವರಣಗಳು - ಮಹಾಗೋಪುರಗಳನ್ನು - ದೊಡ್ಡ ದೊಡ್ಡ ಬಯಲನ್ನು ವಿವಿಧ ಪುಷ್ಪಗಳಿಂದ ಅಲಂಕರಿಸುವ ವಿದ್ಯೆಗೆ ಈ ಹೆಸರು.

೫) **ದಶನವಸನಾಂಗರಾಗವಿದ್ಯೆ** : ವಿವಿಧ ರೀತಿಯ ಹುಲ್ಲು(ಗರಿಕೆ)ಗಳು, ಬಣ್ಣ ಬಣ್ಣದ ಬಟ್ಟೆಗಳು, ಪ್ರಾಣಿ-ಪಕ್ಷಿಗಳ ಚರ್ಮಗಳು - ಪುಕ್ಕಗಳು ಇವುಗಳಿಂದ

ವಿವಿಧ ಜೀವಂತದಂತೆ ಆಕೃತಿಗಳನ್ನು ಮಾಡುವುದು ಹಾಗೂ ದೇಹಕ್ಕೆ ನಾನಾವಿಧ ನೈಸರ್ಗಿಕ ಬಣ್ಣಗಳನ್ನು ಹಚ್ಚಿ ಶೃಂಗರಿಸುವ ವಿದ್ಯೆಗೆ ಈ ಹೆಸರು.

೬) **ಮಣಿಭೂಮಿಕಾಕರ್ಮ** : ನವರತ್ನಗಳ ಜಡಿತದಿಂದ ಹಾಸುನೆಲಗಟ್ಟನ್ನು ತಯಾರಿಸುವುದು. ಹಾಗೆಯೇ ಸ್ತಂಭಗಳನ್ನು, ನೆಲದ ಅಂಚುಗಳನ್ನು, ಮೇಲ್ಛಾವಣಿ-ಯನ್ನು ನವರತ್ನಗಳಿಂದ ಅಲಂಕರಿಸುವಿಕೆಗೂ ಈ ಹೆಸರು.

೭) **ಶಯನರಚನಕಲೆ** : ವಿವಿಧ ಭಂಗಿಗಳಿಂದ ಕೂಡಿದ ಹಂಸತೂಲಿಕಾದಿ ಹಾಸಿಗೆ-ಯನ್ನು ರಚಿಸುವುದು ಹಾಗೆಯೇ ಮೆತ್ತಗಿನ ವಿವಿಧ ಭಂಗಿಯ ಪೀಠೋಪಕರಣಕ್ಕೆ ಅಳವಡಿಸುವ ಕೂಡುವ ಹಾಸಿಗೆಯನ್ನು ರಚಿಸುವ ವಿದ್ಯೆಗೆ ಈ ಹೆಸರು.

೮) **ಉದಕವಾದ್ಯವಿದ್ಯೆ** : ವೈವಿಧ್ಯಮಯ ಧ್ವನಿಗಳಿಗಾಗಿ ನೀರಿನ ಮೇಲೆ ಬಾರಿಸುವ ವಿದ್ಯೆಗೆ ಈ ಹೆಸರು.

೯) **ಉದಕಾಘಾತವಿದ್ಯೆ** : ಜಲಕ್ರೀಡೆಯಲ್ಲಿ ನೀರನ್ನು ಬೊಗಸೆ ಬೊಗಸೆಯಾಗಿ ಇತರರ ಮೇಲೆ ಎರಚುವ ವಿದ್ಯೆಗೆ ಮತ್ತು ಈ ಎರಚುವ ನೀರಿನ ವೇಗದಿಂದ ಶರೀರವನ್ನು ಗಟ್ಟಿಯಾಗುವಂತೆ ಮಾಡುವ ವಿದ್ಯೆಗೆ ಈ ಹೆಸರು.

೧೦) **ಚಿತ್ರಾಯೋಗವಿದ್ಯೆ** : ಅನೇಕ ಗಿಡಮೂಲಿಕೆಗಳಿಂದ, ಮದ್ದುಗಳು, ಔಷಧ, ಮಂತ್ರಗಳಿಂದ ಬೇರೆಯವರು ಕೃಶಕಾಯರೂ, ಅಕಾಲಿಕವಾಗಿ ಚರ್ಮಸುಕ್ಕು-ಗಟ್ಟುವುದು, ತಲೆನೆರೆತವರೂ, ಹುಚ್ಚರೂ ಆಗುವಂತೆ ಮಾಡುವ ವಿದ್ಯೆಗೆ ಮತ್ತು ಇಂತಹ ಸ್ಥಿತಿಗಳನ್ನು ತಡೆಗಟ್ಟುವುದಕ್ಕೂ ಈ ಹೆಸರು.

೧೧) **ಮಾಲ್ಯಗ್ರಂಥನವಿಕಲ್ಪವಿದ್ಯೆ** : ನಾನಾವಿಧ ಪುಷ್ಪಗಳಿಂದ, ಪತ್ರಗಳಿಂದ, ಬೇರು-ಗಳಿಂದ, ಗಿಡದ ಗೊಂಚಲುಗಳಿಂದ ಸುಂದರ ಹಾರಗಳನ್ನು ಮಾಡುವಿಕೆ, ಮತ್ತೆ ಇವುಗಳಿಂದ ದೊಡ್ಡ ದೊಡ್ಡ ದೇವತಾಮೂರ್ತಿಗಳನ್ನು ರಚಿಸುವುದಕ್ಕೂ ಈ ಹೆಸರು.

೧೨) **ಶೇಖರಕಪೀಡಾಯೋಜನ** : ಶಿರೋಭೂಷಣವಾಗಿ ಶೇಖರಕ - ಅಪೀಡಕ ಎಂಬ ಎರಡು ಬಗೆಯ ಆಭರಣವನ್ನು ಹೂಗಳು, ನವರತ್ನಗಳು, ಬಂಗಾರದ ತಂತಿಗಳಿಂದ ಹೆಣೆದು ಮಾಡುವ ವಿದ್ಯೆಗೆ ಈ ಹೆಸರು.

೧೩) **ನೇಪಥ್ಯಪ್ರಯೋಗವಿದ್ಯೆ** : ತಾನೂ ಅನೇಕ ವಿಧ ವಸ್ತ್ರಾಲಂಕಾರ ಮಾಡಿಕೊಳ್ಳುವುದೂ ಮತ್ತು ಇತರರಿಗೂ ಮಾಡುವುದು, ರಾಜ-ಮಹಾರಾಜ-ಚಕ್ರವರ್ತಿಸಾರ್ವಭೌಮರಿಗೆ ಮಾಡುವ ಅಲಂಕಾರವಿದ್ಯೆಗೂ ಈ ಹೆಸರು.



೧೪) **ದಂತಕಲ್ಪವಿದ್ಯೆ** : ದಂತ (ಆನೆಯ ಕೊಂಬು), ನವರತ್ನಗಳು, ಚಿನ್ನದ ತಂತಿ ಮೊದಲಾದವುಗಳಿಂದ ವಿವಿಧ ಆಭರಣಗಳನ್ನು ಮತ್ತು ವಿಶೇಷವಾಗಿ ಕರ್ಣಾಭರಣ-ಕೈಕಡಗಗಳನ್ನು ತಯಾರಿಸುವ ವಿದ್ಯೆಗೆ ಈ ಹೆಸರು.

೧೫) **ಗಂಧಯುಕ್ತಿಕಲ್ಪವಿದ್ಯೆ** : ನಾನಾವಿಧ ಪರಿಮಳದ್ರವ್ಯ ತಯಾರಿಕಾ ವಿದ್ಯೆ ಮತ್ತು ಈ ಪರಿಮಳದ್ರವ್ಯದಿಂದ ರಾಜಾದಿರಾಜರ ವಸ್ತ್ರಗಳನ್ನು ಸಿಂಪಡಿಸುವುದು, ರಾಜಗೃಹಗಳು, ದೊಡ್ಡ ದೊಡ್ಡ ಸಭಾಗೃಹಗಳು, ದರ್ಬಾರ್ ಹಾಲುಗಳನ್ನು ಸುಗಂಧಯುಕ್ತವನ್ನಾಗಿ ಮಾಡುವ ವಿದ್ಯೆಗೂ ಈ ಹೆಸರು.

೧೬) **ಭೂಷಣಯೋಜನವಿದ್ಯೆ** : ನವರತ್ನಗಳಿಂದ ಹೂಗೊಂಚಲಂತೆ ಅರಳುವ ನಾನಾವಿಧ ಆಭರಣಗಳನ್ನು, ಕಂಠೀಹಾರಗಳನ್ನು, ಬಾಪುರಿ, ಕಡಗ, ಗಗ್ಗರಿ, ವಡ್ಯಾಣ, ನೂಪುರ, ನಾಗಕಂಕಣಾದಿಗಳನ್ನು ತಯಾರಿಸುವ ವಿದ್ಯೆಗೆ ಈ ಹೆಸರು.

೧೭) **ಐಂದ್ರಜಾಲಯೋಗವಿದ್ಯೆ** : ಭ್ರಮಾಸೃಷ್ಟಿಲೋಕ - ಸಣ್ಣ ಪ್ರಮಾಣದ ಕಣ್ಣುಕಟ್ಟಿನಿಂದ ಪ್ರಾರಂಭಿಸಿ, ದೇಹ ಸೀಳುವುದು, ಕಡಿಯುವುದು, ರಕ್ತ ಚಿಮ್ಮಿಸುವುದು, ಆನೆ - ಕುದುರೆ - ಸೈನಿಕರು ಹೀಗೆ ಭ್ರಮಾಸೃಷ್ಟಿ ಕೊನೆಗೆ ಗುಡ್ಡ - ಬೆಟ್ಟ - ಪರ್ವತ - ನದಿ - ಪ್ರವಾಹಾದಿ ಉನ್ನತ ಪ್ರಕೃತಿ ವಿಕೋಪದವರೆಗಿನ ಸೃಷ್ಟಿವಿದ್ಯೆಗೆ ಈ ಹೆಸರು.

೧೮) **ಕೌಚುಮಾರಯೋಗವಿದ್ಯೆ** : ಸಾಮಾನ್ಯ ವ್ಯಕ್ತಿಯನ್ನು ನಾನಾವಿಧ ಔಷಧ, ಮೂಲಿಕೆ-ಗಳಿಂದ ದೃಢದೇಹಿಯನ್ನಾಗಿ, ವೀರ್ಯಶಾಲಿಯನ್ನಾಗುವಂತೆ ಮಾಡುವ ಚಿಕಿತ್ಸಾಜ್ಞಾನಕ್ಕೆ ಈ ಹೆಸರು.

೧೯) **ಹಸ್ತಲಾಘವವಿದ್ಯೆ** : ಕೈಬೆರಳುಗಳಿಂದ, ಮಣಿಕಟ್ಟುಗಳಿಂದ, ಚಪ್ಪಾಳೆಯಿಂದ, ಮುದ್ರೆಗಳಿಂದ, ಚಮತ್ಕಾರಮಾಡಿ, ನಾನಾ ಜನರ ಮನಸ್ಸನ್ನು ಸೆಳೆಯುವ ವಿದ್ಯೆ ಹಾಗೂ ಈ ವಿಧದಿಂದ ವಸ್ತ್ರವಿನ್ಯಾಸದ ಬೀಸುವಿಕೆಗೂ ಈ ಹೆಸರು.

೨೦) **ವಿಚಿತ್ರಶಾಕಯೂಷಭಕ್ಷವಿಕಾರಕ್ರಿಯಾ** : ಬಗೆಬಗೆಯ ಅನಿಶಿದ್ಧ ತರಕಾರಿ - ಹಣ್ಣುಗಳ ಅಡುಗೆಯನ್ನು ತಯಾರಿಸುವುದು. ಬಹುರುಚಿಕರವಾದ ಸಾರು, ಹುಳಿ, ವ್ಯಂಜನಾದಿಗಳನ್ನು ತಯಾರಿಸುವುದು. ಬಗೆಬಗೆಯ ಭಕ್ಷ್ಯ, ಭೋಜ್ಯಗಳ ತಯಾರಿಕಾ ವಿದ್ಯೆಗೆ ಈ ಹೆಸರು.

೨೧) **ಪಾನಕರಸರಾಗಾಸವಯೋಜನವಿದ್ಯೆ** : ವಿವಿಧ ಹಣ್ಣಿನ ರುಚಿಕರ ಪಾನಕ ತಯಾರಿಸುವುದು. ಅನೇಕ ವಿಧ ಮಿಶ್ರರಸಗಳಿಂದ ಮಾಡಿದ ಬಗೆಬಗೆಯ ಪೇಯಗಳ ತಯಾರಿಕೆಗೆ ಈ ಹೆಸರು. ಇಂತಹ ವಿಶಿಷ್ಟ ಪೇಯಗಳಿಂದ ಜ್ಞಾನ, ಆಯಸ್ಸು, ಉಲ್ಲಾಸ, ಶಕ್ತಿವರ್ಧಕತ್ವಾದಿಗಳು ಬರುವಂತೆ ಮಾಡುವ ವಿದ್ಯೆ.

೨೨) **ಸೂಚೀವಾನಕರ್ಮ :** ಬಟ್ಟೆಯ ಹೊಲಿಗೆಯ ವಿದ್ಯೆ ಹಾಗೂ ಅನೇಕ ವಿಧ ಕಸೂತಿಯ ಕುಶಲಗಾರಿಕೆಯ ಕೆಲಸ. ನವರತ್ನಾದಿಗಳ ಕೂಡಿಸುವಿಕೆ, ಚಿನ್ನದ-ಬೆಳ್ಳಿಯ ತಂತಿಗಳಿಂದ ವಿಚಿತ್ರ ಲಾಸ್ಯಮಯ ಚಿತ್ರಗಳನ್ನು ಹೊಲಿದು ಬಿಡಿಸುವುದು. ಆ ಚಿತ್ರಕಸೂತಿಗೆ ಜೀವ ತುಂಬುವಂತೆ ಮಾಡುವ ವಿದ್ಯೆಗೆ ಈ ಹೆಸರು.

೨೩) **ಸೂತ್ರಕ್ರೀಡಾ :** ಅನೇಕ ವಿಧ ದಾರದ ಆಟಗಳು. ದಾರದಿಂದ ಮನೆ, ಮಠ, ದೇವಾಲಯ ಇತ್ಯಾದಿಗಳ ರೇಖಾಕೃತಿಯ ನಿರ್ಮಾಣ ಮಾಡುವುದು. ನಾನಾ ಗೊಂಬೆಗಳ ಕುಣಿತವನ್ನು ಮಾಡುವಂತೆ ದಾರಗಳ ಸಹಾಯದಿಂದ ಮಾಡುವುದು (ಸೂತ್ರದ ಗೊಂಬೆಯಾಟ). ಈ ವಿದ್ಯೆಗೆ ಈ ಹೆಸರು.

೨೪) **ಪ್ರಹೇಲಿಕಾವಿದ್ಯೆ :** ಯಾವುದೇ ಭಾಷೆಯಲ್ಲಿ ಒಗಟುಗಳನ್ನು ರಚಿಸುವುದು. ಹೆಚ್ಚಾಗಿ ಸಂಸ್ಕೃತ ಭಾಷೆಯಲ್ಲಿ ಇವುಗಳ ಪ್ರಯೋಗವು ಹೆಚ್ಚು.

**(ಮುಂದುವರೆಯುವುದು)**


## ಶ್ರೀಸರಸ್ವತೀ ಟೂರ್ಸ್ ಅಂಡ್ ಟ್ರಾವೆಲ್ಸ್

ನಂ. 2, ಅಗಸ್ತಿಯಾರ್ ಸ್ಟ್ರೀಟ್, ತಾಂಬರಮ್ ಈಸ್ಟ್, ಚೆನ್ನೈ - 600 059. **ದೂ. 044-22390890**

(೨೦೦೨ ಮತ್ತು ೨೦೦೪ ರಲ್ಲಿ ಚೆನ್ನೈನಲ್ಲಿರುವ ಅತ್ಯುತ್ತಮ ಯಾತ್ರಾ ಪ್ರವಾಸೋದ್ಯಮವೆಂದು ಪ್ರಶಸ್ತಿ ಪಡೆದಿದೆ)

**ಕರ್ನಾಟಕದ ಯಾತ್ರಿಗಳಿಗೆ ಪ್ರವಾಸ 1, ಪ್ರವಾಸ 2 ಕ್ಕೆ ಅವರ ವಾಸಸ್ಥಳದಿಂದ ಹೋಗಿ ಬರುವ ರೈಲ್ವೇ II Sitting Class Ticket ವೆಚ್ಚವೂ ಸೇರಿದೆ. ಶ್ರೀಬದರೀನಾರಾಯಣನ ಅನುಗ್ರಹದೊಂದಿಗೆ, 2007 ಮತ್ತು 2008 ರಲ್ಲಿ ಕೆಳಗಿನ ತೀರ್ಥಯಾತ್ರಾ ಪ್ರವಾಸಗಳನ್ನು ಚೆನ್ನೈನಿಂದ ವ್ಯವಸ್ಥೆ ಮಾಡಲಾಗಿದೆ.**

**ಪ್ರವಾಸ 1 : ದಿನಾಂಕ 13-02-2008 ರಿಂದ 15 ದಿನಗಳು**

**ನವದ್ವಾರಕಾ ಯಾತ್ರಾ ಒಬ್ಬರಿಗೆ ರೂ. 8,100/- ಸ್ಥಳಗಳು** : ಅಹಮದಾಬಾದ್, ಮೂಲದ್ವಾರಕ, ಗೋಮತಿದ್ವಾರಕ, ಭೇಟ್‌ದ್ವಾರಕ, ಹರಿಸಿದ್ಧಿಮಾತ, ಪೋರಬಂದರ್, ಸೋಮನಾಥ, ಮಾತೃಗಯಾ, ಪುಷ್ಕರ, ಅಂಬಾಜಿ, ಉದಯಪುರ, ಶ್ರೀನಾಥದ್ವಾರಕ, ಕಂಗ್ರೋಲಿದ್ವಾರಕ.

**ಪ್ರವಾಸ 2 : ದಿನಾಂಕ 01-03-2008 ರಿಂದ 10 ದಿನಗಳು ಮಹಾಶಿವರಾತ್ರಿ ಸ್ಪೆಷಲ್ ಕಾಶಿ / ಗಯಾ ಯಾತ್ರಾ ಒಬ್ಬರಿಗೆ ರೂ. 6,000/- ಸ್ಥಳಗಳು** : ಅಲಹಾಬಾದ್, ಅಯೋಧ್ಯಾ, ವಾರಣಾಸಿ (ಕಾಶಿ), ಗಯಾ, ಪುರಿ, ಕೋನಾರ್ಕ್, ಭುವನೇಶ್ವರ್ ಮತ್ತು ಧವಳಗಿರಿ.

ಸೂಚನೆ : ಮೇಲೆ ತಿಳಿಸಿದ ದರಗಳಲ್ಲಿ ಎರಡನೆಯ ದರ್ಜೆಯಲ್ಲಿ ರೈಲ್ವೇ ಸ್ಲೀಪರ್ ಛಾರ್ಜ್ ಮತ್ತು ಬಸ್ ಛಾರ್ಜು ಸ್ಥಳೀಯ ವೀಕ್ಷಣೆ ಖರ್ಚು ಮತ್ತು ಪ್ರತಿದಿನ 2 ಹೊತ್ತಿನ ಕಾಫಿ / ಟೀ, ಊಟದ ದರ ಹಾಗೂ ವಸತಿಯ ಖರ್ಚುಗಳೆಲ್ಲವೂ ಸೇರಿವೆ. ಪ್ರತಿದಿನ ಮಾಧ್ವ ಬ್ರಾಹ್ಮಣರಿಂದ ಅಡುಗೆ ತಯಾರಿಕೆಗಳನ್ನು ವ್ಯವಸ್ಥೆ ಮಾಡಲಾಗಿದೆ.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ**

**ಆರ್. ಪ್ರಸಾದ್/ಆರ್. ಪ್ರಭಾಕರ್**, ನಂ. 2, ಅಗಸ್ತಿಯಾರ್ ಸ್ಟ್ರೀಟ್, ತಾಂಬರಮ್ ಈಸ್ಟ್, ಚೆನ್ನೈ - 600 059 **ದೂ. 044-22390890, ಮೊಬೈಲ್ : 94440-87901 -- ಎ. ಭೀಮರಾವ್**, ನಂ. 10/10, 19ನೇ ಅಡ್ಡರಸ್ತೆ, ಇಟ್ಟಮಡು ಮುಖ್ಯರಸ್ತೆ, ಬಿ.ಎಸ್.ಕೆ. 3ನೇ ಹಂತ, ಬೆಂಗಳೂರು - 560 085, **ದೂ. 080-26729528 -- ಡಿ.ಆರ್. ರಾವ್**, 'ಘಟಿಕಾಚಲ', ಪ್ಲಾಟ್ ನಂ. 34, ಶಂಕರ್ ಕಾಲೋನಿ, 1ನೇ ಅಡ್ಡರಸ್ತೆ, ಬಳ್ಳಾರಿ - 583 101, **ದೂ. 08392-274107 -- ಎ. ಮುರಳೀಧರ ರಾವ್**, ಆಲೂರ್ ನಿವಾಸ್, ಅಸುಂಡಿ ಕಾಂಪೌಡ್, ಸ್ಟೇಷನ್ ರಸ್ತೆ, ಹೊಸಪೇಟೆ - 583 201, **ದೂ. 08394-224312**




॥ಶ್ರೀಹರಿ ಸರ್ವೋತ್ತಮ॥ ॥ಹರೇ ಶ್ರೀನಿವಾಸ॥ ॥ವಾಯುಜೀವೋತ್ತಮ॥

ನಮೋ ನಮೋ ಕಾರಣಕಾರಣಾಯ । ನಮೋ ನಮಃ ಪಾಲಕಪಾಲಕಾಯ ।
ನಮೋ ನಮಃ ಸರ್ವನಿಯಾಮಕಾಯ । ನಮೋ ನಮಃ ಸಾತ್ವಿಕಮುಕ್ತದಾಯ ।
ನಮೋ ನಮಸ್ತಾಮಸ ನಿತ್ಯದುಃಖ ಭೋಗಪ್ರದಾಯಾಖಿಲಲೋಕಪಾಯ ।

**॥ ಸರ್ವೇ ಜನಾಃ ಸುಖಿನೋ ಭವಂತು ॥**

ಯಾವುದೇ ಜಾತಕ ಅಥವಾ ವ್ಯಕ್ತಿಯ ಗ್ರಹಗತಿಗಳು ಕೇವಲ ಹರಿಚಿತ್ತದಂತೆ ನಡೆಯುತ್ತವೆಯೇ ಹೊರತು ಮನುಷ್ಯನ ಪ್ರಯತ್ನದಿಂದ ಅಲ್ಲವೇ ಅಲ್ಲ. ಆದ್ದರಿಂದ ಭಗವಂತನ ಆರಾಧನಾಕ್ರಮವನ್ನು ಬಿಟ್ಟು ಕೇವಲ ಒಬ್ಬ ವ್ಯಕ್ತಿಯು ತನ್ನ ಸ್ವಾರ್ಥಕ್ಕಾಗಿ ಮಾಡುವ ಜಪ, ತಪ, ಪೂಜೆಗಳೆಲ್ಲವೂ ವ್ಯರ್ಥ. 'ಸಕಲ ಗ್ರಹಬಲ ನೀನೇ ಸರಸಿಜಾಕ್ಷ' ಎಂಬಂತೆ ಎಲ್ಲ ಗ್ರಹಗಳ ಅಂತರ್ಯಾಮಿಯಾಗಿರುವ ಭಾರತೀರಮಣಮುಖ್ಯಪ್ರಾಣಾಂತರ್ಗತನಾದ ಸಾಕ್ಷಾತ್ ಲಕ್ಷ್ಮೀನಾರಾಯಣನನ್ನು ನಿಷ್ಕಾಮ ಭಕ್ತಿಯಿಂದ 'ಒಂದು ದಳ ಶ್ರೀತುಳಸಿ ಬಿಂದು ಗಂಗೋದಕ'ದಿಂದ ಯಥಾಮತಿಯಾಗಿ ಪೂಜಿಸಿದರೂ ಸಹ ಶ್ರೀಹರಿಯು ನಮ್ಮ ಕಷ್ಟಗಳನ್ನು ದೂರಮಾಡುತ್ತಾನೆ. ಇಲ್ಲಿ ದೈವಪ್ರೇರಣೆಯಿಂದ ಜಾತಕಗಳನ್ನು ಕೂಲಂಕಷವಾಗಿ ಪರಿಶೀಲಿಸಿ, ಶಾಶ್ವತ ಪರಿಹಾರಗಳನ್ನು ಮಾಡಿಸಲಾಗುತ್ತದೆ. ಸರ್ವೇಂದ್ರಿಯಪ್ರೇರಕನಾದ ಶ್ರೀಹರಿಯ ಆಜ್ಞೆಯಿಂದಲೇ ಇಲ್ಲಿ ಫಲ ಹೇಳಲಾಗುತ್ತದೆ. ಜೀವನದಲ್ಲಿ ನೊಂದಿರುವ ಯಾವುದೇ ವ್ಯಕ್ತಿಯು ಯಾವುದೇ ಊರಿನಲ್ಲಿರಲಿ ಅವರು ಹರಿವಾಯುಗುರುಗಳ ಭಕ್ತರಾಗಿದ್ದಲ್ಲಿ ಅವರಿಗೆ ಅನಾನುಕೂಲವಿದ್ದ ಪಕ್ಷದಲ್ಲಿ ನಾವೇ ಸ್ವತಃ ಅವರ ಜಾಗಕ್ಕೆ ಹೋಗಿ ದೈವಸಂಕಲ್ಪದಿಂದ ದೋಷಪರಿಹಾರ ಮಾಡಿಸುವ ಇಚ್ಛೆಯನ್ನು ಹೊಂದಿದ್ದೇವೆ. ಪರಿಹಾರಕ್ಕಾಗಿ ಮುಖತಃ ಭೇಟಿಮಾಡಿ ಅಥವಾ ಪತ್ರಮುಖೇನ ಜಾತಕ ಕಳುಹಿಸಿಕೊಡಬಹುದು.

ಒಂದು ಪ್ರಶ್ನೆಗೆ 30 ರೂ., ಎರಡು ಪ್ರಶ್ನೆಗೆ 50 ರೂ. ಹಾಗೂ ಮೂರು ಪ್ರಶ್ನೆಗಳಿಗೆ 60 ರೂ.ಗಳನ್ನು ಸ್ಟಾಂಪ್ ಲಗತ್ತಿಸಿದ ಸ್ವ-ವಿಳಾಸವಿರುವ ಅಂಚೆ ಲಕೋಟೆಯೊಂದಿಗೆ ''ವ್ಯವಸ್ಥಾಪಕರು'' ಎಂದು ಬರೆದು ಕೆಳಗಿನ ವಿಳಾಸಕ್ಕೆ ಮನಿ ಆರ್ಡರ್ ಮಾಡಬೇಕು.

## ಮಾಧ್ವಮಂದಿರ ಜ್ಯೋತಿಷ್ಯಾಲಯ ಮತ್ತು ಧಾರ್ಮಿಕ ಕೇಂದ್ರ

**ಟಿ.ಆರ್. ಮಾಧವಾಚಾರ್**

**ಜ್ಯೋತಿಷ್ಕರು ಮತ್ತು ಪುರೋಹಿತರು**

ನಂ. 149, 'ಕಾನೀನ ನಿಲಯ', 5ನೇ ಅಡ್ಡರಸ್ತೆ, ಆರ್.ಕೆ. ಬಡಾವಣೆ
ಪದ್ಮನಾಭನಗರ, ಬೆಂಗಳೂರು

**ದೂರವಾಣಿ : 080-65351688, ಮೊಬೈಲ್ : 98444 75429**

ಲೇಖನಾಂಕ

# ದೇವರ ನಾಮ

■ ಶ್ರೀಮತಿ ಪದ್ಮಾ ಪಾಂಡುರಂಗೀ
ನಂ. ೩೭೨, ೨ನೇ ಮುಖ್ಯರಸ್ತೆ, ೭ನೇ ಅಡ್ಡರಸ್ತೆ, ಶ್ರೀನಿವಾಸನಗರ, ಬೆಂಗಳೂರು - ೫೬೦ ೦೫೦

ದೇವರ ನಾಮವೆಂದಾಕ್ಷಣ, ದೇವರ ನಾಮ ಯಾವಾಗ ಪ್ರಾರಂಭವಾಯಿತು, ಇದರ ವಿಕಾಸ ಯಾವಾಗ ಆಯಿತು ? ಯಾರಿಂದ ? ಯಾವ ರೀತಿಯಲ್ಲಿ ? ಇತ್ಯಾದಿ ಪ್ರಶ್ನೆಗಳು ಸಹಜವಾಗಿ ಬರುತ್ತವೆ. ಇವುಗಳ ವಿಚಾರ ಅತ್ಯಾವಶ್ಯಕ.

## ದೇವರ ನಾಮದ ಅರ್ಥ

ದೇವರ ನಾಮಗಳಿಗೆ 'ಕೀರ್ತನೆ', 'ದಾಸರ ಪದಗಳು' ಎಂದೂ ಕರೆಯುತ್ತಾರೆ. ಹರಿದಾಸರು ಪಲ್ಲವಿ, ಅನುಪಲ್ಲವಿ ಮತ್ತು ಚರಣಗಳಿರುವ ರಚನೆಗಳನ್ನು ಮಾಡಿದ್ದಾರೆ. ಇವುಗಳಿಗೆ 'ದಾಸರ ಪದಗಳು', 'ದೇವರ ನಾಮ' ಎಂದು ಕರೆಯುತ್ತಾರೆ.

ಪರಮಾತ್ಮನ ಗುಣವಿಶೇಷಗಳನ್ನು ಗಾನರೂಪದಲ್ಲಿ ವರ್ಣಿಸಿ ಸ್ತೋತ್ರ ಮಾಡು-ವುದಕ್ಕೆ ಕೀರ್ತನೆ ಅಥವಾ ದೇವರ ನಾಮ ಎಂದು ಹೆಸರು. ಭಜನೆಯ ಪದ್ಧತಿಯು ಇದಕ್ಕೆ ನಿದರ್ಶನ. ಹಿಂದೆ ಸಂಗೀತದ ಮುಖ್ಯ ಉದ್ದೇಶವು ದೇವರ ಮಹಿಮೆಯನ್ನು ಕೊಂಡಾಡುವುದು ಮಾತ್ರವಾಗಿತ್ತು. ಈ ಕ್ಷೇತ್ರದಲ್ಲಿ ಸೇರುವ ಸಾಹಿತ್ಯವು ಬಹು ವಿಶಾಲವಾಗಿದೆ. ಇದು ಲೋಕಶಿಕ್ಷಣಕ್ಕಾಗಿ ರಚಿಸಿದುದಾದ್ದರಿಂದ ಅದರ ವಿಮರ್ಶೆ-ಯನ್ನು ಅನೇಕ ವಿಧದಿಂದ ಮಾಡಬೇಕಾಗುವುದು.

೧೪ ನೆಯ ಶತಮಾನದ ಪೂರ್ವಾರ್ಧದಲ್ಲಿ ದಾಸಪಂಥದವರೇ ಆದಿಯಾಗಿ ರಚಿಸಿದ ರಚನೆಗಳೆಲ್ಲವೂ 'ಕೀರ್ತನೆ' ಅಥವಾ 'ದೇವರ ನಾಮ' ಎಂಬ ಹೆಸರಿನಿಂದ ಪ್ರಚಾರವಾದವು. ಇದೇ ದೇವರ ನಾಮದ ಮೂಲರೂಪ. ೧೫ ನೆಯ ಶತಮಾನ-ದಿಂದೀಚೆಗೆ ಸುವ್ಯವಸ್ಥಿತವಾದ 'ಭಜನಾಪದ್ಧತಿ ಕೀರ್ತನೆಗಳು' ಹೆಚ್ಚು ಸಂಖ್ಯೆಯಲ್ಲಿ ಬೆಳೆದಿವೆ.

ಲೋಕಶಿಕ್ಷಣಕ್ಕಾಗಿ ಅವಶ್ಯಕವಾದ ಭಾವನಾಪ್ರದಾನವಾದ ಸಾಹಿತ್ಯವು ಇದರಲ್ಲಿ ಬರುವುದರಿಂದ ಸಂಗೀತಶಾಸ್ತ್ರದ, ಸಾಹಿತ್ಯದಲ್ಲಿಯ ಕಠಿಣ ಪ್ರಮೇಯಗಳನ್ನೆಲ್ಲಾ ಬಿಟ್ಟು ಕೊಟ್ಟು, ಕೇವಲ ಸುಲಭವಾದವುಗಳನ್ನೂ, ಸಾಮಾನ್ಯರ ಅಭ್ಯಾಸಕ್ಕೆ ಹಾಗೂ ಆಚರಣೆಗೆ ಅರ್ಹವಾದವುಗಳನ್ನೂ ಸಂಗ್ರಹಿಸಿ, ಸಂಗೀತವೆಂದರೆ ಚಿಕ್ಕ ಬಾಲಕರಿಗೂ, ಮಹಾಪಂಡಿತರಿಗೂ, ಶ್ರಮಜೀವಿಗಳಿಗೂ ಸುಖಜೀವಿಗಳಿಗೂ, ಬಾಲಕರಿಗೂ -



ವೃದ್ಧರಿಗೂ, ಅಸಂಸ್ಕೃತರಿಗೂ - ಸುಸಂಸ್ಕೃತರಿಗೂ, ಸ್ತ್ರೀಯರಿಗೂ-ಪುರುಷರಿಗೂ ಸರಿಯಾಗಿಯೇ ಪ್ರಯೋಜನವಾಗುವ ಮಾದರಿಯನ್ನು ಹೊಸತಾಗಿ ಹುಡುಕಿ ತೆಗೆದು 'ಸಂಗೀತದ ಮುಖಾಂತರ ಲೋಕಶಿಕ್ಷಣವನ್ನು, ಲೋಕಶಿಕ್ಷಣದ ಮೂಲಕ ಸಂಗೀತವನ್ನೂ' ಪ್ರಚಾರಮಾಡುವುದಕ್ಕೆ ರಚಿಸಿದ ಸಾಹಿತ್ಯವು ಇದಾಗಿದೆ.

## ದೇವರ ನಾಮದ ಲಕ್ಷಣ

ದೇವರ ನಾಮಗಳಲ್ಲಿ ಮುಖ್ಯವಾಗಿ ಎರಡು ಭಾಗಗಳು ಅಥವಾ ಧಾತು-ಗಳಿರುವವು. ಅವುಗಳಿಗೆ ಅನುಕ್ರಮವಾಗಿ ಪಲ್ಲವಿ, ಅನುಪಲ್ಲವಿ, ನುಡಿ ಎಂದು ಹೆಸರು. ಈ ಮೂರು ಧಾತುಗಳೇ ಪರ್ಯಾಯದಿಂದ ಉದ್ಗ್ರಾಹ, ಧ್ರುವ, ಅಭೋಗ-ಗಳ ಪರ್ಯಾಯನಾಮವಾಗಿವೆ. ಪ್ರತಿಯೊಂದು ಪದಕ್ಕೆ ರಾಗ ಮತ್ತು ತಾಳ ಅವಶ್ಯಕ. ಕೀರ್ತನೆಯು ಪವಿತ್ರವಾದ ಗಾನದ ಒಂದು ರೂಪ. 'ಪ್ರಾರ್ಥನಾ ಗೀತಾ' ಅಥವಾ 'ಸ್ತೋತ್ರವಾಕ್ಯ' ಎಂದೂ ಇದನ್ನು ಕರೆಯಬಹುದು.

### ಸಾಹಿತ್ಯ

ಕೃತಿಗಳಲ್ಲಿ 'ಧಾತು'ವಿಗೆ ಕೊಡುವ ಪ್ರಾಮುಖ್ಯತೆಯನ್ನು 'ಕೀರ್ತನೆ' ಅಥವಾ ದೇವರ ನಾಮದಲ್ಲಿ 'ಮಾತು' ಅಥವಾ 'ಸಾಹಿತ್ಯ'ಕ್ಕೆ ಕೊಡುತ್ತೇವೆ. ದೇವರ ನಾಮದ ಸಾಹಿತ್ಯದ ವಸ್ತು ಪುರಾಣಸಂಬಂಧವಾದ ವಿಷಯಗಳನ್ನೋ ಅಥವಾ ದೇವರ ಸ್ತುತಿರೂಪದ ಸಾಹಿತ್ಯವನ್ನೋ ಹೊಂದಿರುತ್ತವೆ. ಇದರ ಸಾಹಿತ್ಯ ಮತ್ತು ಅದರ ಗತಿ ಅತ್ಯಂತ ಸರಳವಾಗಿದ್ದು, ಅತಿ ಸಾಮಾನ್ಯವಾಗಿರುತ್ತದೆ. **ಅನುಪಲ್ಲವಿ ಇರಲೇಬೇಕೆಂಬ ಅವಶ್ಯಕತೆಯಿಲ್ಲ. ಭಕ್ತಿಪ್ರಚೋದನೆಯೇ ಕೀರ್ತನೆಯ ಮುಖ್ಯ ಉದ್ದೇಶ.** ದೇವರ ನಾಮದಲ್ಲಿ ಪಲ್ಲವಿ, ಅನುಪಲ್ಲವಿಗಳು ಒಂದಕ್ಕೊಂದು ಹೊಂದಿಕೊಂಡು ಮುಂದೆ ಬರುವ ಅನೇಕ ಚರಣಗಳಿಗೆ ಪೋಷಕವಾಗಿರುತ್ತವೆ. ಪಲ್ಲವಿ, ಅನುಪಲ್ಲವಿಗಳು ಸಾಮಾನ್ಯವಾಗಿ ಆದಿಪ್ರಾಸದಿಂದ ಕೂಡಿರುತ್ತವೆ. ಪ್ರತಿ ಚರಣದ ಪ್ರತಿ ಸಾಲಿನಲ್ಲೂ ಆದಿಪ್ರಾಸದ ಪ್ರಯೋಗವಿರುತ್ತದೆ. ಚರಣಗಳು ೧, ೩, ೫, ೭, ೧೧, ಹೀಗೆ ವಿಷಮ ಸಂಖ್ಯೆಯಲ್ಲಿದ್ದು ಕೊನೆಯ ಚರಣದಲ್ಲಿ ರಚನಾಕಾರರ ಅಂಕಿತಗಳಿರುತ್ತವೆ.

## ಕರ್ನಾಟಕ ಸಂಗೀತದ ವೈಶಿಷ್ಟ್ಯ 'ದೇವರ ನಾಮ'

### ರಾಗ

ಕೆಲವು ಕೀರ್ತನೆಗಳಿಗೆ ಮಾತ್ರ ರಾಗಗಳು ಬಹಳ ಹಿಂದಿನಿಂದ ಉಳಿದು ಬಂದಿದೆ. ಮಿಕ್ಕ ರಚನೆಗಳಿಗೆ ರಾಗ - ತಾಳಗಳ ನಿಯಮ ಕಾಣುವುದಿಲ್ಲ. ಇಂದಿನ ಪದ್ಧತಿಯಲ್ಲಿ ಉಚಿತವಾದ ರಾಗ, ತಾಳಗಳನ್ನು ದೇವರ ನಾಮಗಳಿಗೆ ಅಳವಡಿಸಿಕೊಂಡು ಹಾಡಲಾಗುತ್ತಿದೆ. ಹರಿದಾಸರ ಪದಗಳನ್ನು ಹಾಡಬೇಕಾದರೆ ರಾಗಜ್ಞಾನವು ವಿಶೇಷವಾಗಿ

ಬೇಕಿಲ್ಲ. ಅಭ್ಯಾಸವೂ ವಿಶೇಷವಾಗಿ ಬೇಡ. ಏಕೆಂದರೆ, ದಾಸರ ಕಾಲದಲ್ಲಿ ೫೦ ರಿಂದ ೭೦ ರಾಗಗಳು ಪ್ರಚಾರದಲ್ಲಿದ್ದರೂ ಅವುಗಳಲ್ಲಿ ತೀರಾ ಸುಲಭವಾದ ಬಹು ಪ್ರಚಾರವಾದ ಹಾಗೂ ಜನಮನೋರಂಜಕವಾದ ಸುಮಾರು ೩೦-೩೫ ರಾಗಗಳಲ್ಲಿಯೇ ಹೆಚ್ಚಾಗಿ ಕೃತಿಗಳನ್ನು ಮಾಡಿರುವರೆಂದು ಊಹಿಸಬಹುದು. ಏಕೆಂದರೆ, ಆಯಾ ರಾಗಗಳಲ್ಲಿಯೇ ಸ್ವರಸಂಚಾರ, ಶಬ್ದಪ್ರಯೋಗಗಳೂ ಕೂಡ ಒಂದನ್ನೊಂದು ಹೋಲುವಂತೆ ನೂರಾರು ಪದಗಳನ್ನು ಮಾಡಿದ ಉದಾಹರಣೆಗಳೂ ಎಷ್ಟೋ ಉಂಟು. ಆದುದರಿಂದ ಲೋಕಪ್ರಿಯ-ವಾದ ಯಾವುದಾದರೊಂದು ಪದದ ಧಾಟಿಯಿಂದ ಹೊಸದಾದ ಅದಕ್ಕೆ ಸಮಾನ-ವಾದ ಪದಗಳ ಸಾಹಿತ್ಯವನ್ನು ಮಾತ್ರ ನೋಡಿಕೊಂಡರಾಯಿತು. ಆ ಧಾಟಿಯಿಂದ ಹೊಸದಾದ ಎಷ್ಟೇ ಪದಗಳುಳ್ಳ ಹಾಡನ್ನು ಹೇಳಿದರೂ ತತ್‌ಕ್ಷಣದಲ್ಲಿ ಆ ಸಾಹಿತ್ಯ ಬರೆದ ಕಾಗದವನ್ನು ಎದುರು ಇಟ್ಟುಕೊಂಡ ರಾಗ-ತಾಳ-ಭಾವಗಳಿಗೆ ಏನೂ ವ್ಯತ್ಯಾಸ-ವಿಲ್ಲದಂತೆ ಹಾಡಲು ಸಾಧ್ಯವಾಗಿದೆ. ಹೀಗೆ ವಸ್ತುಸ್ಥಿತಿಯಿರುವುದರಿಂದಲೇ ಸಂಗೀತವೂ ಸಾಹಿತ್ಯವೂ ಏಕಕಾಲದಲ್ಲಿಯೇ ಪ್ರಚಾರವಾಗಿರುವುದು.

ಕೀರ್ತನೆಯಲ್ಲಿ ಭಕ್ತಿಭಾವವು ಹೆಚ್ಚು ಸ್ಪಷ್ಟವಾಗಿ ಎದ್ದುಕಾಣುವಂತೆ ಸರಳವಾದ ಭಗವದ್ವಿಷಯಕವಾದ ಗೇಯ ವಸ್ತುವನ್ನು ಶಾಸ್ತ್ರೀಯ ಸಂಗೀತದಲ್ಲಿ ಅಳವಡಿಸಿರುತ್ತಾರೆ. **ಆದರೂ ಇದರಲ್ಲಿ ಸಾಹಿತ್ಯವೇ ಪ್ರಧಾನ. ಸಂಗೀತವು ಗೌಣ.** ಈ ರಚನೆಗಳ ಮುಖ್ಯ ಉದ್ದೇಶವು, ಜನಸಮುದಾಯದಲ್ಲಿ ಮಾನವತೆಯನ್ನು ಪ್ರಚೋದಿಸಿ ಭಕ್ತಿಮಾರ್ಗ, ಧರ್ಮಮಾರ್ಗ ಬೋಧಿಸುವುದೇ ಆಗಿದೆ. (ಆದ್ದರಿಂದ ಸಂಗೀತಕ್ಕೆ ಪ್ರಾಮುಖ್ಯತೆ ಕೊಟ್ಟು ಸಾಹಿತ್ಯವನ್ನು ವಿರೂಪಗೊಳಿಸಿ ಹಾಡುವುದು ತಪ್ಪು).

ದೇವರ ನಾಮಗಳಲ್ಲಿ ಸ್ಥಾಯಿಯ ಎಲ್ಲೆಯು ಕಡಿಮೆಯಾಗಿದ್ದು, ಸಾಮೂಹಿಕ ಗಾನಕ್ಕೆ ಯೋಗ್ಯವಾಗಿರುತ್ತದೆ. ಕೀರ್ತನೆಗಳು ಕೃತಿಗಳಿಗಿಂತ ಪ್ರಾಚೀನವಾದುದು ('ಕೃತಸಂಶಬ್ದನೇ' ಎಂಬ ಧಾತುವಿನಿಂದ ಹುಟ್ಟಿದ ಈ 'ಕೀರ್ತನಾ' ಶಬ್ದವು 'ಸಂ' ಉಪಸರ್ಗದಿಂದ ಕೂಡಿ 'ಸಂಕೀರ್ತನ'ವಾಗಿದೆ) ಎಂಬುದು ಉದ್ಭವಿಸಿದೆ. ಆಲಂಕಾರಿಕ ಅಂಶಗಳು ಇಲ್ಲದಿದ್ದರೂ, ಕೆಲವು ವೇಳೆ ಮಧ್ಯಯುಗದ ಸಾಹಿತ್ಯ ನೈಪುಣ್ಯತೆಯ ಕುಶಲತೆಯು ಕಂಡುಬರುತ್ತದೆ. ಸರಳವಾದ ರಾಗ, ತಾಳಗಳಲ್ಲಿ ಅಳವಡಿಸಿರುವುದರಿಂದ ಭಜನಪದ್ಧತಿ, ಗೋಷ್ಠಿಗಾನಕ್ಕೆ ಸುಲಭವಾಗುವಂತೆ ಜನಸಾಮಾನ್ಯರಿಗೂ ಹಾಡಲು ಅನುಕೂಲ- ವಾಗುವ ಮಾದರಿಯಲ್ಲಿರುತ್ತದೆ.

ಕೊನೆಯ ಲಕ್ಷಣವೆಂದರೆ ದೇವರ ನಾಮದ ಕೊನೆಯ ನುಡಿಯ ಮೂರನೇ ಅಥವಾ ನಾಲ್ಕನೆಯ ಚರಣಗಳಲ್ಲಿ 'ದಾಸರ ಅಂಕಿತ'ಗಳಿರುತ್ತವೆ. ಈ ಅಂಕಿತದ ಮೂಲಕ ಈ ದೇವರ ನಾಮಗಳನ್ನು ಇಂಥಹ ದಾಸರು ರಚಿಸಿದರೆಂದು ತಿಳಿದು-ಕೊಳ್ಳಲು ಬರುತ್ತದೆ. ದೇವರ ನಾಮಗಳಲ್ಲಿ ದಾಸರು ಬಹು ತರವಾಗಿ ಎಲ್ಲ ಭಾವ-ಗಳನ್ನು ತೋರಿಸಿದ್ದಾರೆ ಮತ್ತು ಅನೇಕ ವಿಷಯಗಳನ್ನು ತಂದಿದ್ದಾರೆ.



## ದೇವರ ನಾಮದ ಉಗಮ ಮತ್ತು ಬೆಳವಣಿಗೆ

ಸಂಗೀತ ಪ್ರಬಂಧಗಳಲ್ಲಿ ಅತ್ಯಂತ ಜನಪ್ರಿಯವಾದುದು ಕೀರ್ತನೆ ಅಥವಾ ದೇವರ ನಾಮ. ಇದು ದಾಸಕೂಟದ ಶ್ರೇಷ್ಠ ಕೊಡುಗೆಯಾಗಿದೆ. ದಾಸರುಗಳು ಕರ್ನಾಟಕ ಶಾಸ್ತ್ರೀಯ ಸಂಗೀತಕ್ಕೆ ನೀಡಿರುವ ಅತ್ಯಮೂಲ್ಯವಾದ ಕೊಡುಗೆಯಾಗಿದೆ. ದೇವರ ನಾಮಗಳನ್ನು ಕೇಳದ ಜನರಿಲ್ಲ. ಇದು ಸುಮಾರು ೧೩ ರಿಂದ ೧೫ ನೆಯ ಶತಮಾನದಲ್ಲಿ ಹುಟ್ಟಿ ಬೆಳೆದು, ೧೮ ನೆಯ ಶತಮಾನದ ಹೊತ್ತಿಗೆ ಪೂರ್ಣಾಕಾರ-ವನ್ನು ಪಡೆಯಿತು.

### ಪ್ರಾಚೀನತೆ

ನಾವು ಅತ್ಯಂತ ಪ್ರಾಚೀನವಾದ ಪುರಾಣಗಳಲ್ಲಿ ಕೀರ್ತನೆಯ ಉಲ್ಲೇಖವಿರು-ವುದನ್ನು ಕಾಣಬಹುದು. ಈ ವಿಷಯದಲ್ಲಿ ಪರಮಾತ್ಮನ ಅನಂತ ಕಲ್ಯಾಣಗುಣ-ಗಳನ್ನು ಅನವರತವೂ ಗಾನ ಮಾಡುವ ನಾರದ ಮಹಾಮುನಿಗಳನ್ನು ಹೆಸರಿಸಬಹುದು. ಶ್ರೀಮದ್ರಾಮಾಯಣವನ್ನು ಶ್ರೀರಾಮಚಂದ್ರನ ಯಜ್ಞಶಾಲೆಯಲ್ಲಿ ಹಾಡಿ, ಎಲ್ಲರೂ ತಲೆದೂಗುವಂತೆ ಮಾಡಿದ ಲವ-ಕುಶರನ್ನೂ ಸ್ಮರಿಸಬಹುದು. ಪದ್ಮಪುರಾಣದಲ್ಲಿ ಶುಕಾಚಾರ್ಯರು ಸಭೆಯಲ್ಲಿ ನವರಸಭರಿತವಾದ ಕೀರ್ತನೆ ಹಾಡಿದ ಉಲ್ಲೇಖವಿದೆ.

ಶ್ರೀಮದ್ಭಗವದ್ಗೀತೆಯಲ್ಲಿ ಶ್ರೀಕೃಷ್ಣನು -

> **"ಸತತಂ ಕೀರ್ತಯಂತೋ ಮಾಂ ಯತಂತಶ್ಚ ದೃಢವ್ರತಾಃ ।**
> **ನಮಸ್ಯಂತಶ್ಚಮಾಂ ಭಕ್ತ್ಯಾ ನಿತ್ಯಯುಕ್ತಾ ಉಪಾಸತೇ ॥"**

ಭಗವದ್ಗೀತೆಯಂಥ ಗ್ರಂಥದಲ್ಲಿ ಕೀರ್ತನೆಯ ಉಲ್ಲೇಖವಿರುವುದನ್ನು ನೋಡಿದರೆ ಶ್ರೀಕೃಷ್ಣನ ಕಾಲದಲ್ಲಿ ಕೀರ್ತನೆಯು ತನ್ನ ಉನ್ನತಿಯನ್ನು ಪಡೆದಿದೆಯೆಂದು ಗೊತ್ತಾಗುತ್ತದೆ.

ಕೀರ್ತನಾರೂಪವಾದ ಧರ್ಮೋಪದೇಶವು ಒಂದು ರೀತಿಯಾದ ಶಿಕ್ಷಣ. ರಾಜ, ಪ್ರಜೆಗಳೆಲ್ಲರ ಆದರಕ್ಕೆ ಪಾತ್ರವಾಗಿ ಜನಾಂಗದ ದೊಡ್ಡದೊಂದು ಶಿಕ್ಷಣಶಾಲೆ-ಯಾಗಿ ಪರಿಣಮಿಸಿತು. ಜನಾದರಣೆ ಹೆಚ್ಚಿದಂತೆ ವ್ಯಕ್ತಿತ್ವ ವಕ್ತೃತ್ವವುಳ್ಳವರು ಉಪದೇಶಕ-ರಾಗುತ್ತಾ ಬಂದರು. ಮುಂದೆ ಕೀರ್ತನಕಾರರು ಪೂರ್ವಕಾಲದ ಕ್ಷತ್ರಿಯ ರಾಜರ, ವಂದಿಮಾಗಧರಾಗಿ ರಾಜರ ಗುಣಕಥನ ಮಾಡುತ್ತಿದ್ದರು. ಹೀಗೆ ಕಲುಷಿತಗೊಂಡಿತ್ತು. ೧೩ ನೇ ಶತಮಾನದಲ್ಲಿ ಶ್ರೀಮಧ್ವಾಚಾರ್ಯರು ''ಸಂಗೀತಬದ್ಧವಾದ ದ್ವಾದಶಸ್ತೋತ್ರ'' ದಿಂದ ಕೃಷ್ಣನನ್ನು ಬರಮಾಡಿಕೊಂಡಿದ್ದರು.

ಕ್ರಿ.ಶ. ಒಂಭತ್ತನೇ ಶತಮಾನದಲ್ಲಿ ಕರ್ನಾಟಕದಲ್ಲಿ ಅತ್ಯಂತ ಪ್ರಬಲವಾದ ಅಚಲಾನಂದದಾಸರಿಂದ ಪುನಃ ಅದು (ಕೀರ್ತನಾ ಸಂಗೀತ) ತನ್ನ ಸಹಜ ಸ್ವರೂಪ ತಾಳಿತು. **ನಂತರ ಶ್ರೀಮಧ್ವಾಚಾರ್ಯರ ಸಾಕ್ಷಾತ್ ಶಿಷ್ಯರಾದ ಶ್ರೀನರಹರಿತೀರ್ಥರು ೧೩**

**ನೇ ಶತಮಾನದಲ್ಲಿ ಇದ್ದು, ಅವರು ಅನೇಕ ದೇವರ ನಾಮಗಳನ್ನು ರಚಿಸಿದ್ದಾರೆ.** ಮುಖ್ಯವಾಗಿ ದೇವರ ನಾಮಗಳನ್ನು ರಚಿಸಿರುವರೆಂದರೆ,

ಶ್ರೀಅಚಲಾನಂದದಾಸರು, ಶ್ರೀನರಹರಿತೀರ್ಥರು, ಶ್ರೀಶ್ರೀಪಾದರಾಜರು
ಶ್ರೀವ್ಯಾಸರಾಜರು, ಶ್ರೀವಾದಿರಾಜರು, ಶ್ರೀಪುರಂದರದಾಸರು
ಶ್ರೀವೈಕುಂಠದಾಸರು, ಶ್ರೀಕನಕದಾಸರು, ಶ್ರೀರಾಘವೇಂದ್ರಸ್ವಾಮಿಗಳು
ಶ್ರೀವಿಜಯದಾಸರು, ಶ್ರೀಗೋಪಾಲದಾಸರು, ಶ್ರೀಜಗನ್ನಾಥದಾಸರು
ಶ್ರೀಮಹೀಪತಿದಾಸರು, ಶ್ರೀಪ್ರಸನ್ನವೆಂಕಟದಾಸರು, ಗಿರಿಯಮ್ಮನವರು

ಇವರೇ ಮೊದಲಾದವರು.

## ದೇವರ ನಾಮಗಳಲ್ಲಿ ಕಂಡುಬರುವ ಪ್ರಮುಖ ವಿಷಯಗಳು

| | | | |
|---|---|---|---|
| ೧. | ಮಧ್ವಮತ ಪ್ರಶಂಸೆ | ೨. | ಹರಿಸರ್ವೋತ್ತಮತ್ವ |
| ೩. | ಭಗವದವತಾರಗಳು | ೪. | ಕೃಷ್ಣಾವತಾರ ಮಹಿಮೆ |
| ೫. | ಪಾದಾದಿ ಅವಯವ ವರ್ಣನೆ | ೬. | ಹರಿಯ ವಿಶೇಷ ಮಹಿಮೆ |
| ೭. | ನಾಮಮಹಿಮೆ | ೮. | ಭಗವಂತನ ಸೃಷ್ಟಿವೈಚಿತ್ರ್ಯ |
| ೯. | ತಾರತಮ್ಯ | ೧೦. | ಸಾಧನೆ |
| ೧೧. | ಇತರ ದೇವತೆಗಳ ಸ್ತೋತ್ರ | ೧೨. | ಪ್ರಾರ್ಥನಾಭಾಗ |
| ೧೩. | ಉಪಾಸನೆ | ೧೪. | ಸಾಕ್ಷಾತ್ಕಾರ |
| ೧೫. | ಹರಿದಾಸರ ಪ್ರಶಂಸೆ | ೧೬. | ಚಿತ್ರೋಕ್ತಿ |
| ೧೭. | ಲೋಕನೀತಿ | ೧೮. | ಶೀಲ |
| ೧೯. | ಸ್ತ್ರೀವಿಭಾಗ | ೨೦. | ಸಂಕೀರ್ಣ |

## ಸಂದರ್ಭೋಚಿತವಾದ ರಚನೆಗಳು

ಕೀರ್ತನೆಗಳಲ್ಲಿ ಪ್ರಮುಖವಾಗಿ ದ್ವೈತಸಿದ್ಧಾಂತದ ಪ್ರಮೇಯಗಳನ್ನು ದಾಸರು ತಿಳಿಸಿದ್ದಾರೆ. ಈ ದೇವರ ನಾಮಗಳು ಸಂದರ್ಭೋಚಿತವಾಗಿ ರಚಿತವಾದುದಾಗಿವೆ. ಸಂಗೀತದ ಅಭ್ಯಾಸಕ್ಕಾಗಿ ಕರ್ನಾಟಕೇತರರಿಗೆ ಹೇಗೆ ಶಿಕ್ಷಕರ ಅವಶ್ಯಕತೆ ಇರುವುದೋ ಹಾಗೇ ನಮಗೆ ಇಲ್ಲ. ಆದುದರಿಂದಲೇ ನಮ್ಮ ಕನ್ನಡ ದೇಶದಲ್ಲಿ ಹುಡುಗರಾಗಲೀ, ಸ್ತ್ರೀಯರಾಗಲೀ, ಪುರುಷರಾಗಲೀ ಪದಗಳನ್ನು ಯಾರು ಹಾಡಿದರೂ ಕೂಡ ತಾಳಕ್ಕೆ ರಾಗಗಳಿಗೆ ಏನೂ ವ್ಯತ್ಯಾಸವಾಗದಂತೆ ಹಾಡುವರು. ಇದು ಸಂಸ್ಕಾರಬಲದ ಪರಿಣಾಮ. ಸಂಸ್ಕಾರದ ಬಲವೆಂದರೆ ಬಾಲ್ಯದಿಂದಲೂ ಮನೆಯಲ್ಲಾಗಲೀ ಹೊರಗಾಗಲೀ ಯಾವ ಕೆಲಸ ಮಾಡಿದರೂ ಕೂಡ **ಆ ಸಂದರ್ಭಕ್ಕನುಸಾರವಾದ ಸಾಹಿತ್ಯವನ್ನು ಸಂಗೀತ-ದಿಂದ ಹೇಳುವುದು ನಮ್ಮ ಸಂಸ್ಕೃತಿಯಲ್ಲಿ ಬೇರೂರಿದೆ.** ೧) ಮಕ್ಕಳನ್ನು ಮಲಗಿಸುವಾಗ



ಹಾಡುವ 'ತೂಗಿರೆ ರಂಗನ್ನ' ಜೋಗುಳ ಪದಗಳು, ೨) 'ಎಣ್ಣೆಯನೊತ್ತುತ್ತ' ಎಂಬ ಪದ, ೩) ಶೃಂಗಾರದಾರತಿ ಮಾಡುವಾಗ 'ಆನಂದಮಯಗೆ' 'ಜಯಮಂಗಳಂ ನಿತ್ಯ ಶುಭಮಂಗಳಂ' ಎಂಬ ಪದಗಳು, ೪) ಹುಟ್ಟುಹಬ್ಬ, ಹುಣ್ಣಿಮೆ ಮೊದಲಾದ ಸಂಭ್ರಮ ಕಾಲದಲ್ಲಿ ಹಾಡುವ 'ಚಿರಂಜೀವಿಯಾಗಲೋ ಚಿನ್ನ ನೀನು' 'ಹೊಡಿ ನಗಾರಿ ಮೇಲೆ ಕೈ' ಪದಗಳು, ೫) 'ಫಲಹಾರವ ಮಾಡೋ' ಫಲಹಾರ ಮಾಡುವಾಗ, ೬) ಉಣ್ಣುವಾಗ 'ರಾಮನಾಮ ಪಾಯಸಕ್ಕೆ', ೭) ತಾಂಬೂಲ ಮೆಲ್ಲುವಾಗ 'ತಾಂಬೂಲ ಕೊಳ್ಳೋ', ೮) ಆಟಪಾಟವಾಡುವಾಗ 'ಬಗೆಬಗೆಯಾಟಗಳಲ್ಲಿ ಕಲಿತೆ', ೯) ಹಟ ಮಾಡುವ ಹುಡುಗರಿಗೆ ಅಂಜಿಸುವ 'ಸುಮ್ಮನಿರು ಬೇಡಿಕೊಂಬೆ ಕಾಡದಿರು ಕೃಷ್ಣಾ' 'ಅಳುವುದೇತಕೋ ರಂಗಾ' ಎಂಬ ಪದಗಳು, ೧೦) ಅಕ್ಷರಾಭ್ಯಾಸ, ಪಾಠ, ಶಿಕ್ಷಣಗಳಲ್ಲಿ 'ಪೋಗದಿರೋ ರಂಗಾ' 'ಆಡಹೋಗಲ ಬೇಡ' ಎಂಬವು, ೧೧) ಇತ್ಯಾದಿ ನಿತ್ಯನೈಮಿತ್ತಿಕ ಕ್ರಮಗಳಲ್ಲಿಯೂ, ೧೨) ದೇವತಾರ್ಚನೆಯ 'ಹೇಗೆ ಅರ್ಚಿಸಲಿ', ೧೩) ಯಜ್ಞಯಾಗಾದಿಗಳಲ್ಲಿ, ಸಭೆ-ಸಮ್ಮೇಳನಗಳಲ್ಲಿ 'ಲೋಕಮೋಹಕನೋ', ೧೪) ಹರಿಜಾಗದ 'ಹರಿವಾಸರದ ಉಪವಾಸದ ಫಲವು' ಮೊದಲಾದ ಉಚ್ಚ ಭಾವನೆಗಳನ್ನು ಉದ್ದೀಪಿಸುವ ಪದಗಳು; ಅಷ್ಟೇಕೆ ಬೀಸುವ, ಕುಟ್ಟುವ ಕಾರ್ಯಕ್ರಮದಲ್ಲಿ, ಮಾರ್ಗಪರ್ಯಟನ ಕಾಲದಲ್ಲಿ 'ಪಾಥೇಯ ಕಟ್ಟಿರೋ', ಇದೂ ಅಲ್ಲದೇ ಬಾಜಾರ ಬೀದಿಗಳಲ್ಲಿ ಪದಾರ್ಥವಿಕ್ರಯ ಮಾಡುವಾಗ್ಗೆ 'ಕಲ್ಲುಸಕ್ಕರೆ ಕೊಳ್ಳಿರೋ', ಭಿಕ್ಷೆ ಬೇಡುವಾಗ ಕೂಡ 'ರಾಗಿ ತಂದೀರಾ' ಎಂಬಿತ್ಯಾದಿ ಹಾಡುಗಳನ್ನು ತಮ್ಮ ಶಬ್ದಗಳಿಂದಲೇ ಸ್ವರ-ಲಯ ಬಂಧನದಿಂದ ಒಳಪಡಿಸಿ ಹಾಡುವ ನುಡಿಗಳು ವಿಶೇಷವಾಗಿ ಕಿವಿಗಳ ಮೇಲೆ ನಿರಂತರವಾಗಿ ಬೀಳುವುದರಿಂದ ಆ ವಾಗ್ಝರಿಯ ಒಂದು ನಿಶ್ಚಿತ ರೂಪವು ಮನಸ್ಸಿನಲ್ಲಿ ಅಂಟಿಕೊಳ್ಳುವುದು. ಅದೇ ಧಾಟಿ ಎನಿಸುವುದು. ಹರಿದಾಸರ ಪದಗಳ ಇಂಥಹಾ ಎಷ್ಟೋ ಧಾಟಿಗಳು ನಮಗೆ ಬಾಲ್ಯದಿಂದಲೂ ಮನಸ್ಸಿನಲ್ಲಿ ಮೂಡಿರುವುದರಿಂದ ಅದೇ ಧಾಟಿಯ ಎರಡನೆಯ ಯಾವುದಾದರೊಂದು ಪದವನ್ನು ನಮಗೆ ಹಾಡಬೇಕೆಂದು ಮನಸ್ಸಿನಲ್ಲಿ ಬಂದರೆ ಅದು ತಕ್ಷಣವೇ ಸಾಧ್ಯವಾಗುವುದು. ಇದೇ ಸಂಸ್ಕಾರದ ಬಲ. ಸಂಗೀತವು ಶ್ರವಣೇಂದ್ರಿಯದ ಸಂಸ್ಕಾರವಾಗಿರುವುದರಿಂದ ಅಭ್ಯಾಸಕ್ಕಿಂತಲೂ ನಿರಂತರ ಶ್ರವಣದಿಂದಲೇ ಸಾಧ್ಯವಾಗು-ವುದೆಂಬ ಮಾತು ಸರ್ವರ ಅನುಭವಸಿದ್ಧವಾದುದು. **ಇದೇ ಸಂಸ್ಕಾರವು ಕನ್ನಡಿಗರಿ-ಗಿರುವಂತೆ ಮಿಕ್ಕಾದ ಪ್ರಾಂತೀಯರಿಗಾಗಲೀ, ಆ ಭಾಷೆಯವರಿಗಾಗಲೀ ಇರುವುದು ಸಾಧ್ಯವಿಲ್ಲ. ಇದಕ್ಕೆ ಕಾರಣವು ಅವರಿಗೆ ನಮ್ಮಂತೆ ನಿರಂತರವಾಗಿ ಎಲ್ಲ ವ್ಯವಹಾರ-ದಲ್ಲಿ ಹಾಡಲರ್ಹವಾದ ಸಂಗೀತ ಸಾಹಿತ್ಯದ ಅಭಾವ ಮತ್ತು ಶ್ರವಣದ ಅಭಾವ.** ಈ ರೀತಿಯಲ್ಲಿ ದೇವರ ನಾಮಗಳ ಸಾಹಿತ್ಯವು ಅನೇಕ ವಿಧವಾದ ರಸಭಾವ ಅಲಂಕಾರದಿಂದೊಡಗೂಡಿದ ಲೋಕಶಿಕ್ಷಣಕ್ಕೆ ಏರ್ಪಟ್ಟ ಸಾಹಿತ್ಯವಾಗಿದೆ.

**(ಮುಂದುವರೆಯುವುದು)**

ಲೇಖನಾಂಕ

# ವಿಧರ್ಮೀಯರ ಮೇಲೆ ಮಾಧ್ವಯತಿಗಳ ಪ್ರಭಾವ

■ ಬಿ.ಆರ್. ತಂತ್ರಿ

೩೯/೩, ಕನಕಪುರ ರಸ್ತೆ, ಬನಶಂಕರಿ ೨ನೇ ಹಂತ, ಬೆಂಗಳೂರು - ೭೦

ಶ್ರೀಮನ್ಮಧ್ವಾಚಾರ್ಯರನ್ನು ಮೊದಲುಗೊಂಡು ಅವರ ಪರಂಪರೆಯಲ್ಲಿ ಬಂದ ಯತಿವರ್ಯರು ಅನ್ಯಧರ್ಮೀಯರ ಮೇಲೆ ವಿಶೇಷ ಪ್ರಭಾವ ಬೀರಿದ್ದಾರೆ.

**ಶ್ರೀಮಧ್ವಾಚಾರ್ಯರು :** ಬದರೀ ಯಾತ್ರೆಗೆ ಶಿಷ್ಯರೊಡನೆ ಪ್ರಯಾಣ ಹೊರಟ ಶ್ರೀಮದಾಚಾರ್ಯರು, ಉತ್ತರ ಭಾರತದಲ್ಲಿ ಗಂಗಾತೀರಕ್ಕೆ ಬಂದರು. ನದಿ ದಾಟಲು ಇಳಿದಾಗ ಇನ್ನೊಂದು ತೀರದ ಮುಸ್ಲಿಂ ಸುಲ್ತಾನನ ಭಟರು, ತಮ್ಮ ಆಯುಧಗಳನ್ನು ಝಳಪಿಸುತ್ತಾ 'ಮಾರಯತ, ಮಾರಯತ' (ಮಾರೋ, ಮಾರೋ) ಎಂದರುಚುತ್ತಾ ಮುಂದೆ ಬರಲು, ಶ್ರೀಮದಾಚಾರ್ಯರು ನಗುತ್ತಾ 'ಯಾಕೆ ನೀರಿಗಿಳಿಯುತ್ತಿದ್ದೀರಿ ? ನಾವು ನದಿ ದಾಟಬೇಕಾಗಿದೆಯಷ್ಟೇ, ನಿಮ್ಮೊಡನೆ ಕಾದಾಡಲು ಬಂದವರಲ್ಲ' ಎನ್ನಲು ಆ ತೀರದ ಮಹಡಿಯ ಮೇಲಿದ್ದ ಮುಸ್ಲಿಂರಾಜನು ಕೇಳಿಸಿಕೊಂಡನು. ಶ್ರೀಮದಾಚಾರ್ಯರ ಆಜಾನುಬಾಹು ಶರೀರ, ತೇಜೋಪುಂಜವಾದ ಮುಖ, ರಮ್ಯ ನಿರ್ಭೀತ ನಿಲುವು ಕಂಡ ಮುಸ್ಲಿಂ ರಾಜ ಬೆರಗಾದ. ಅವನು 'ನೀವು ಯಾರು ? ಯಮದೂತರಂತಿರುವ ನನ್ನ ಸೈನಿಕರನ್ನು ನೋಡಿ ನಿಮಗೆ ಭಯವಾಗಲಿಲ್ಲವೇ ?' ಎಂದು ಪ್ರಶ್ನಿಸಲು, ಶ್ರೀಮದಾಚಾರ್ಯರು ಅವನ ತುರಷ್ಕ ಭಾಷೆಯಲ್ಲೇ ಉತ್ತರಿಸಿದರು. ''ಮೇಲೆ ಕಾಣುತ್ತಿರುವ ಸೂರ್ಯನ ಅಂತರ್ಯಾಮಿಯಾದ ಭಗವಂತನು ನಿಮ್ಮನ್ನೂ, ನಮ್ಮನ್ನೂ ಕಾಪಾಡುತ್ತಿರಲು ನಮಗೇತರ ಭಯ ?'' ಎನ್ನಲು ರಾಜ ಆಶ್ಚರ್ಯಚಕಿತನಾಗಿ ಶ್ರೀಮದಾಚಾರ್ಯರನ್ನು ಗೌರವಾದರಗಳಿಂದ ಬರಮಾಡಿಕೊಂಡು ತನ್ನ ಅರ್ಧ ರಾಜ್ಯವನ್ನು ಸ್ವೀಕರಿಸಬೇಕೆಂದು ಪ್ರಾರ್ಥಿಸಲು ಶ್ರೀಮದಾಚಾರ್ಯರು 'ನಾವು ಸನ್ಯಾಸಿಗಳು ನಮಗೇಕೆ ರಾಜ್ಯಭಾರ ? ದೇವರು ನಿಮ್ಮನ್ನು ಕಾಪಾಡಲಿ' ಎಂದು ಹರಸಿ ಮುನ್ನಡೆದರು. ಶ್ರೀಮದಾಚಾರ್ಯರು ತುರುಷ್ಕ ಭಾಷೆಯಲ್ಲಿ ಸಂಭಾಷಣೆ ಮಾಡಿದ್ದನ್ನು 'ಶ್ರೀಸುಮಧ್ವವಿಜಯ'ದಲ್ಲಿ ನಾರಾಯಣ ಪಂಡಿತಾಚಾರ್ಯರು ವಿವರಿಸಿದ್ದಾರೆ.

**ಶ್ರೀವಾದಿರಾಜಗುರುಸಾರ್ವಭೌಮರು :** ಶ್ರೀಮದಾಚಾರ್ಯರಂತೆಯೇ ಅವರ ಪೀಠದಲ್ಲಿ ಬಂದ ಸೋದೆ ಮಠಾಧೀಶರಾದ ಶ್ರೀಮದ್ವಾದಿರಾಜರು, ಉತ್ತರ ಭಾರತ ಯಾತ್ರೆಯ ಕಾಲದಲ್ಲಿ ಅಯೋಧ್ಯೆಗೆ ಆಗಮಿಸಿದರು. ತಮ್ಮ ದಿವ್ಯದೃಷ್ಟಿಯಿಂದ ಅಯೋಧ್ಯೆಯಲ್ಲಿ ಭೂಗತವಾಗಿದ್ದ ಶ್ರೀಮುಖ್ಯಪ್ರಾಣ ಹಾಗೂ ಶ್ರೀಗರುಡದೇವರ



ಪ್ರತಿಮೆಗಳ ಸುಳಿವು ದೊರಕಿ ತಮ್ಮ ಶಿಷ್ಯರಿಂದ ಭೂಮಿಯನ್ನು ಅಗೆಸಿ, ಸುಂದರವಾದ ಪ್ರಾಣದೇವರ, ಗರುಡದೇವರ ವಿಗ್ರಹಗಳನ್ನು ತೆಗೆಸಿ, ಬಟ್ಟೆಯಲ್ಲಿ ಸುತ್ತಿಕೊಂಡು ಹೋಗುತ್ತಿರಲು ಮೊಗಲ್ ಚಕ್ರವರ್ತಿ ಹುಮಾಯೂನ್‌ನ ಭಟರು ಬಟ್ಟೆಯೊಳಗಿರುವ ವಿಗ್ರಹಗಳನ್ನು ಧನಕನಕವೆಂದು ಶಂಕಿಸಿ ಚಕ್ರವರ್ತಿಯ ಬಳಿಗೆ ಕರೆದೊಯ್ದರು. ಹುಮಾಯೂನ್ ಮೂಟೆಗಳನ್ನು ಬಿಚ್ಚಿ ಎಂದು ಹೇಳಲು ಶ್ರೀವಾದಿರಾಜರು ಇವು ಪವಿತ್ರ ವಿಗ್ರಹಗಳು, ಅವನ್ನು ಬಿಚ್ಚಿತೋರಿಸುವಂತಿಲ್ಲವೆಂದರು. ಬಲವಂತ ಮಾಡಿ ಬಿಚ್ಚಿಸಿದರೆ ಅದರಿಂದ ನಿನಗೆ ಶ್ರೇಯಸ್ಸು ಸಿಗುವುದಿಲ್ಲವೆಂದು ಹೇಳಿದರೂ ಆಗ್ರಹಪಡಿಸಿ ಮೂಟೆಗಳನ್ನು ಬಿಚ್ಚಿಸಿದಾಗ ಒಳಗಿದ್ದ ವಿಗ್ರಹಗಳನ್ನು ನೋಡಿ ಗುರುರಾಜರ ಕ್ಷಮೆ ಯಾಚಿಸಿದನು. ನಿನ್ನ ದುರಾಗ್ರಹದಿಂದ ನೀನು ಕೆಲಕಾಲ ರಾಜ್ಯ ಕಳೆದುಕೊಳ್ಳುವೆಯಾದರೂ, ಪಶ್ಚಾತ್ತಾಪಪಟ್ಟಿರುವುದರಿಂದ ಪುನಃ ಪಡೆದುಕೊಳ್ಳುವೆ ಎಂದು ಹರಸಿದರು. ವಾದಿರಾಜರು ಯಾತ್ರೆಯಿಂದ ಹಿಂದಿರುಗುವಾಗ ಹುಮಾಯೂನ್ ಕಳೆದುಕೊಂಡ ರಾಜ್ಯ ಪಡೆದುಕೊಂಡಿದ್ದನು. ಸಂತಸದಿಂದ ಧನಕನಕಾದಿಗಳನ್ನು ಸ್ವೀಕರಿಸಬೇಕೆಂದು ವಾದಿರಾಜರನ್ನು ವಿನಂತಿಸಲು, ಅದನ್ನು ವಿನಯದಿಂದ ತಿರಸ್ಕರಿಸಿ, ನಿನಗೊಬ್ಬ ಸುಪುತ್ರ ಹುಟ್ಟುವನು. ''ಅವನು ಹಿಂದೂ - ಮುಸಲ್ಮಾನರನ್ನು ಸಮಾನವಾಗಿ ಕಾಣುವನು'' ಎಂದು ಆಶೀರ್ವದಿಸಿದರು. ಅಕ್ಬರನೇ ಹುಮಾಯೂನ್‌ನ ಮಗನಾಗಿ ಮೆರೆದ ಮೊಗಲ ಚಕ್ರವರ್ತಿ. ಹುಮಾಯೂನನು ಧನಕನಕಾದಿಗಳನ್ನು ವಾದಿರಾಜರ ಹಿಂದೆ ಕಳುಹಿಸಿದನೆಂದೂ, **ರಾಜರು ಅದನ್ನು ಉಡುಪಿಯ ಶ್ರೀಕೃಷ್ಣಮಠದ ಬಡಗುಮಾಳಿಗೆಯ ಮುಂದೆ ಭೂಗತ ಮಾಡಿಸಿ ಅದರ ಮೇಲೆ ಸುಬ್ರಹ್ಮಣ್ಯದೇವರನ್ನು ಪ್ರತಿಷ್ಠಿಸಿದರೆಂದೂ ಐತಿಹ್ಯವಿದೆ** (ಇಂದೂ ಕಾಣಬಹುದು).

**ಅಯೋಧ್ಯೆಯಿಂದ ತಂದ ಪ್ರಾಣದೇವರ ಮತ್ತು ಗರುಡದೇವರ ವಿಗ್ರಹಗಳನ್ನುಉಡುಪಿ ಶ್ರೀಕೃಷ್ಣನ ಮುಂದಿನ ಚಂದ್ರಶಾಲೆಯಲ್ಲಿ ಪ್ರತಿಷ್ಠಾಪಿಸಿದರು.**

**ಶ್ರೀರಾಘವೇಂದ್ರತೀರ್ಥಗುರುಸಾರ್ವಭೌಮರು :** ಮಂತ್ರಾಲಯವನ್ನು ಪವಿತ್ರ ಕ್ಷೇತ್ರವಾಗಿಸಿದ ಮಹಾಮಹಿಮರು ಶ್ರೀರಾಘವೇಂದ್ರಸ್ವಾಮಿಗಳು. ಆದವಾನಿ ನವಾಬ ಒಮ್ಮೆ ಪ್ರಯಾಣ ಮಾಡುತ್ತಿರಲು ದೂತರು ಓಡೋಡಿ ಬಂದು ಅವನ ಕೈಗೆ ಒಂದು ಪತ್ರವನ್ನಿತ್ತರು. ಅದನ್ನು ಓದಬಲ್ಲವರು ನವಾಬನ ಪರಿವಾರದಲ್ಲಿ ಯಾರೂ ಇರಲಿಲ್ಲ. ಪಕ್ಕದಲ್ಲೇ ದನ ಕಾಯುತ್ತಿದ್ದ ಬ್ರಾಹ್ಮಣ ಹುಡುಗನನ್ನು ನೋಡಿ ಸುಲ್ತಾನ ಅವನಿಗೆ ''ಇದನ್ನು ಓದು'' ಎಂದ. ಅನಕ್ಷರಸ್ಥನಾದ ವಟುವಿಗೆ (ವೆಂಕಣ್ಣ ಭಟ್ಟ) ಅದನ್ನು ಓದಲಾಗಲಿಲ್ಲ. ''ಬ್ರಾಹ್ಮಣನಿಗೆ ಓದಲು ಬರುವುದಿಲ್ಲವೇ ? ಸಾಧ್ಯವೇ ಇಲ್ಲ. ಓದದಿದ್ದರೆ ನಿನ್ನನ್ನು ಸಾಯಿಸುತ್ತೇನೆ'' ಎಂದು ಬೆದರಿಸಿದ. ಆಗ ವೆಂಕಣ್ಣ ಭಟ್ಟನು ಹಿಂದೊಮ್ಮೆ ''ಕಷ್ಟ ಬಂದಾಗ ನಮ್ಮನ್ನು ಸ್ಮರಿಸಿಕೊ'' ಎಂದು ಹೇಳಿದ ಶ್ರೀರಾಘವೇಂದ್ರಸ್ವಾಮಿಗಳ

ಮಾತು ಜ್ಞಾಪಕಕ್ಕೆ ಬಂದು ಹುಡುಗ ''ರಾಘವೇಂದ್ರ ಕಾಪಾಡು'' ಎಂದು ಸ್ಮರಿಸಲು ವೆಂಕಣ್ಣ ಭಟ್ಟನಿಗೆ ಸರಾಗವಾಗಿ ಓದಲಾಯಿತು. ಪತ್ರದಲ್ಲಿ ನವಾಬ ಯುದ್ಧದಲ್ಲಿ ಜಯಿಸಿದನೆಂದೂ, ಆತನ ಬೇಗಂಗೆ ಗಂಡುಮಗುವಾಯಿತೆಂದೂ, ಎರಡು ಶುಭ ಸಮಾಚಾರಗಳಿದ್ದವು. ನವಾಬ ಸಂತಸದಿಂದ ಕುಣಿದಾಡುತ್ತಾ, ವೆಂಕಣ್ಣನನ್ನು ತನ್ನ ಮಂತ್ರಿಯಾಗಬೇಕೆಂದು ಕೇಳಿಕೊಂಡ.

ಮುಂದೊಮ್ಮೆ ಶ್ರೀರಾಘವೇಂದ್ರಸ್ವಾಮಿಗಳು ಆದವಾನಿ ಸಮೀಪ ಇರುವುದನ್ನು ತಿಳಿದ ವೆಂಕಣ್ಣ ನವಾಬರನ್ನು ''ನಮ್ಮ ಗುರುಗಳು ಸಮೀಪದಲ್ಲಿದ್ದಾರೆ. ಅವರನ್ನು ಅರಮನೆಗೆ ಕರೆಸಿಕೊಳ್ಳಬೇಕು'' ಎಂದು ವಿನಂತಿಸಿದ. ಒಪ್ಪಿದ ನವಾಬ, ಸ್ವಾಮಿಗಳನ್ನು ಪರೀಕ್ಷಿಸಬೇಕೆಂದು ತಟ್ಟೆಯಲ್ಲಿ ಮಾಂಸದ ತುಂಡುಗಳನ್ನಿರಿಸಿ ಮೇಲೆ ಬಟ್ಟೆ ಹೊದಿಸಿ ರಾಯರ ಮುಂದೆ ಇಟ್ಟು ಸ್ವೀಕರಿಸಬೇಕೆಂದು ಹೇಳಿದ. ತಮ್ಮ ದಿವ್ಯದೃಷ್ಟಿಯಿಂದ ತಟ್ಟೆಯಲ್ಲಿರುವುದು ಮಾಂಸವೆಂದು ತಿಳಿದರೂ, ''ನಮ್ಮ ರಾಮ ನಿಮ್ಮ ಕೊಡುಗೆಯನ್ನು ಸ್ವೀಕರಿಸುತ್ತಾನೆ'' ಎಂದು ತಮ್ಮ ಕಮಂಡಲುವಿನ ನೀರನ್ನು ತಟ್ಟೆಗೆ ಪ್ರೋಕ್ಷಿಸಿ, ಬಟ್ಟೆಯನ್ನು ತೆಗೆಸಲು, ತಟ್ಟೆಯಲ್ಲಿ ಬರೀ ಹೂ, ಹಣ್ಣುಗಳಿದ್ದವು. ದಂಗಾದ ನವಾಬ ಸ್ವಾಮಿಗಳ ಅತೀಂದ್ರಿಯಶಕ್ತಿಯನ್ನು ಅರಿತು, ಕ್ಷಮೆ ಯಾಚಿಸಿ, ತನ್ನ ರಾಜ್ಯದ ಯಾವುದೇ ಭಾಗವನ್ನು ಸ್ವೀಕರಿಸಬೇಕೆಂದು ಬೇಡಿದ. ರಾಯರು ''ನೀನು ಕೊಡುವುದಾದರೆ ನಿನ್ನ ರಾಜ್ಯದ ಮಂಚಾಲೆ ಗ್ರಾಮವನ್ನು ಕೊಡು'' ಎನ್ನಲು, ನವಾಬ ''ಸ್ವಾಮೀಜೀ, ಅದು ಕಲ್ಲು, ಮುಳ್ಳು ತುಂಬಿರುವ ಕುಗ್ರಾಮ. ಬೇರೆ ಯಾವುದಾದರೂ ಒಳ್ಳೆಯ ಗ್ರಾಮವನ್ನು ಕೇಳಿ'' ಎಂದನು. ''ನಮಗೆ ಮಂಚಾಲೆಯೇ ಬೇಕು, ಕೊಡುವುದಾದರೆ ಕೊಡು'' ಎಂದು ಶ್ರೀಗಳು ಹೇಳಿದಾಗ ನವಾಬನು ಮಂಚಾಲೆ ಗ್ರಾಮವನ್ನು ಅವರಿಗೆ ಕೊಡಲು ಒಪ್ಪಿದ.

ಮುಂದೆ ಆ ಮಂಚಾಲೆಯೇ ಮಂತ್ರಾಲಯವಾಗಿ ರಾಯರ ಮಹಿಮಾತಾಣವಾಯಿತು. ತಮ್ಮ ಅವತಾರ ಕಾಲ ಸಮೀಪಿಸಲು ರಾಯರು, ದಿವಾನ್ ವೆಂಕಣ್ಣನನ್ನು ಕರೆಸಿ ತಾವೇ ಸೂಚಿಸಿದ ಶಿಲೆಯಿಂದ ವೃಂದಾವನವನ್ನು ಕೆತ್ತಿಸಿದರು. ಶ್ರಾವಣ ಬಹುಳ ದ್ವಿತೀಯಾದ ಪುಣ್ಯದಿನದಂದು ಸಜೀವ ವೃಂದಾವನ ಪ್ರವೇಶಿಸಿದ ಯತಿಶ್ರೇಷ್ಠರು ಶ್ರೀರಾಘವೇಂದ್ರಸ್ವಾಮಿಗಳು.

ಹೀಗೆ ಶ್ರೀಮದಾಚಾರ್ಯರಾದಿಯಾಗಿ ಅವರ ಶಿಷ್ಯಪರಂಪರೆಯಲ್ಲಿ ಬಂದ ಯತಿವರ್ಯರಾದ ಶ್ರೀವಾದಿರಾಜರು ಹಾಗೂ ಶ್ರೀರಾಘವೇಂದ್ರರು. ವಿಧರ್ಮೀಯರಾದ ಮುಸಲ್ಮಾನ ದೊರೆಗಳ ಮೇಲೆ ಬೀರಿದ ಪ್ರಭಾವ. ಮಧ್ವಮತದ ಹಿರಿಮೆಗೊಂದು ನಿದರ್ಶನ.

❑❑





# ಶ್ರೀರಾಮಸೇತು ಅನೇಕರ ದೃಷ್ಟಿಯಲ್ಲಿ

■ ಪಿ.ವಿ. ಹರಿನಾಥ್

ನಂ. ೧೩೨, 'ಅನನ್ಯ', ೪ನೇ ಅಡ್ಡರಸ್ತೆ, ಬೃಂದಾವನ ಬಡಾವಣೆ, ಟಿ.ಸಿ. ಪಾಳ್ಯ, ಕೆ.ಆರ್. ಪುರಂ, ಬೆಂಗಳೂರು

ಶ್ರೀರಾಮಸೇತುವಿನ ಬಗ್ಗೆ ಶ್ರೀರಾಘವೇಂದ್ರವಿಜಯದಲ್ಲಿ ಪ್ರಸ್ತಾಪಿಸಿರುವ ವಿವರಣೆ, ಜನರ ಅಭಿಪ್ರಾಯ, ಇತ್ಯಾದಿಗಳನ್ನು ಕ್ರೋಢೀಕರಿಸಿ ಈ ಲೇಖನವನ್ನು ನೀಡುತ್ತಿದ್ದೇನೆ.

ಶ್ರೀರಾಮಸೇತುವಿನ ಬಗ್ಗೆ ಎಲ್ಲೆಡೆ ಚರ್ಚೆ ನಡೆಯುತ್ತಿದೆ. ಇದರ ಬಗ್ಗೆ ನಡೆಯುತ್ತಿರುವ ಚರ್ಚೆಯಲ್ಲಿ ಸಮಸ್ತ ಹಿಂದೂ ಜನರು ತಮ್ಮ ಭಾವನೆಗಳನ್ನು ವಿವಿಧ ಬಗೆಯಲ್ಲಿ ವ್ಯಕ್ತಪಡಿಸುತ್ತಿದ್ದಾರೆ. ಇದನ್ನು ಒಡೆಯುವುದರಿಂದ ಆಗುವ ಬಾಧಕಗಳನ್ನು ಅನೇಕರು ತಿಳಿಸಿದ್ದಾರೆ. ಕಾನೂನು ತಜ್ಞರು ಭಾವಾವೇಶಕ್ಕೊಳಗಾಗದೆ ನ್ಯಾಯದ ಚೌಕಟ್ಟಿನಲ್ಲಿ ಇದನ್ನು ಒಡೆಯುವುದರ ಬಗ್ಗೆ ಪ್ರತಿಭಟಿಸಿದರೆ, ವಿಜ್ಞಾನಿಗಳು ಇದರ ಒಡೆಯುವಿಕೆಯಿಂದ ಭವಿಷ್ಯದಲ್ಲಿ ಸುನಾಮಿಯಿಂದ ಕೇರಳ, ತಮಿಳುನಾಡಿನ ನಾಶ ಖಚಿತವೆಂದು ತಮ್ಮ ಅಭಿಪ್ರಾಯವನ್ನು ತಿಳಿಸಿ ಕಣ್ಣು ತೆರೆಸಿದ್ದಾರೆ. ಲಕ್ಷಾಂತರ ಜನ ಮೀನುಗಾರರು ಕೆಲ ವಿಶೇಷ ಜಾತಿಯ ಮೀನುಗಳು (ಶ್ರೀರಾಘವೇಂದ್ರ ವಿಜಯದಲ್ಲಿ ಈ ವಿಶೇಷ ಜಾತಿಯ ಮೀನನ್ನು 'ಶಿಂಶುಮಾರ' ಎಂಬ ಹೆಸರಿನಿಂದ ಗುರುತಿಸಿರುವುದನ್ನು ಮುಂದೆ ವಿವರಿಸಲಾಗಿದೆ) ಈ ರಾಮಸೇತು ಪ್ರಾಂತ್ಯದಲ್ಲಿಯೇ ಸಿಗುತ್ತಿದ್ದು, ಇದನ್ನು ಒಡೆದರೆ ಲಕ್ಷಾಂತರ ಜರ ಹೊಟ್ಟೆಗೆ ಮಣ್ಣೇ ಗತಿ ಎಂದು ಜಾತಿ, ಪಂಗಡಗಳ ಭೇದ ಮರೆತು ಜನರು ಪ್ರತಿಭಟಿಸುತ್ತಿದ್ದಾರೆ. ಎಲ್ಲಕ್ಕಿಂತಲೂ ಮುಖ್ಯವಾಗಿ ಧಾರ್ಮಿಕವಾಗಿ ಸಮಸ್ತ ಹಿಂದೂ ಜನರು ಈ ಸೇತುವಿನಲ್ಲಿ ತಮ್ಮದೇ ಆದ ಪವಿತ್ರ ಭಾವನೆಗಳ ಸಾಗರವನ್ನೇ ಹೊತ್ತಿದ್ದಾರೆ. ಒಮ್ಮೆ ಶ್ರೀರಾಮಸೇತುವಿನ ಎದುರು ಹೋಗಿ ನಿಂತ ಹಿಂದೂವಿನ ಮನದಲ್ಲಿ ಹೀಗೆನ್ನಿಸುತ್ತದೆ –

''ಇಲ್ಲಿರುವ ಶಿಲೆಗಳು, ಮರಳು ಶ್ರೀರಾಮಚಂದ್ರನ ಕಾಲದವುಗಳು. ಈ ಶಿಲೆಯ ಮೇಲೆ ಶ್ರೀರಾಮ ಸ್ವಲ್ಪ ಹೊತ್ತು ವಿಶ್ರಾಂತಿಗಾಗಿ ಕುಳಿತಿದ್ದನೇನೋ ? ಪಕ್ಕದ ಶಿಲೆಯ ಮೇಲೆ ಮಲಗಿದ್ದನೇನೋ ? ಅದರ ಪಕ್ಕದ ಶಿಲೆಯ ಮೇಲೆ ನಿಂತು ಗಾಳಿ ಬೀಸುವ ಹನುಮಂತನ ಪಾದಸ್ಪರ್ಶವು ಈ ಶಿಲೆಗಾಗಿರಬಹುದೇ ? ಎಲ್ಲೆಡೆ ಸೇತುವನ್ನು ಸಿದ್ಧಪಡಿಸುವ ನೇತೃತ್ವ ವಹಿಸಿದ್ದ ಲಕ್ಷ್ಮಣ, ಜಾಂಬುವಂತ, ಇವರೆಲ್ಲರೂ ಈ ಶಿಲೆಗಳ

ಮೇಲೆ ಸಂಚರಿಸಿರಬಹುದು. ಇದರ ಪರ್ಯವೀಕ್ಷಣೆಗಾಗಿ ಬರುವ ರಾಮಚಂದ್ರನ ಪಾದಸ್ಪರ್ಶವು ಈ ಎಲ್ಲ ಶಿಲೆಗಳಿಗೆ ಖಂಡಿತಾ ಆಗಿರಲಾರದೆ ? ಆಗಿರುತ್ತದೆ. ಈ ಎಲ್ಲಾ ಕಲ್ಲುಗಳು ಶ್ರೀರಾಮಚಂದ್ರ, ಹನುಮಂತ, ಲಕ್ಷ್ಮಣ, ಜಾಂಬುವಂತ, ಮೊದಲಾದವರ ಪಾದ, ಹಸ್ತ, ಬೆನ್ನು, ಶಿರಸ್ಪರ್ಶವನ್ನು ಖಂಡಿತಾ ಹೊಂದಿರುತ್ತದೆ'' ಎಂದೆಲ್ಲಾ ನೆನೆವ ನಮ್ಮ ಮನದಲ್ಲಿ ಒಂದು ಘಳಿಗೆ ''ಅಯ್ಯೋ! ನಾವುಗಳು ಈ ಶಿಲೆಯಾಗಲಿಲ್ಲವಲ್ಲಾ !'' ಈ ಶಿಲೆಗಳು ಮಾಡಿದ ಪುಣ್ಯವೇನು ? ನಾವು ಮಾಡಿದ ಪಾಪವೇನು ? ಎಂದೆನಿಸದಿದ್ದರೆ ಕೇಳಿ. ಮನವು ಭಾವುಕವಾಗುತ್ತದೆ. ಹೀಗೆಲ್ಲಾ ನೆನೆಯುತ್ತಾ ಆ ಕಲ್ಲುಗಳನ್ನು ಮುಟ್ಟುವಾಗ ಶ್ರೀರಾಮನ ಬೆರಳನ್ನೋ, ಉಗುರನ್ನೋ ಬೆನ್ನನ್ನೋ ಮುಟ್ಟುತ್ತಿದ್ದೇವೆ, ಇಲ್ಲವೇ ಆಂಜನೇಯನ ಪಾದ, ಹಸ್ತ, ಭುಜವನ್ನು ಮುಟ್ಟುತ್ತಿದ್ದೇವೆಂದು ಅನಿಸುತ್ತಿರುವಂತೆಯೇ ಒಂದು ಕ್ಷಣ ಆ ರಾಮಶಿಲೆಯನ್ನು ಮುಟ್ಟಿದಾಗ ರೋಮಾಂಚನವಾಗಿ ಕಣ್ಣಿಂದ ಭಕ್ತಿಪೂರಿತ ಎರಡು ಹನಿ ನೀರು ಬೀಳುತ್ತದೆ ನೋಡಿ, **ಇದನ್ನೇ ಮಿಲಿಯನ್ ಡಾಲರ್ ಭಾವನೆ ಎನ್ನುವುದು.**

**ಇಂತಹಾ ಅದ್ಭುತವಾದ, ಪವಿತ್ರವಾದ ನಮ್ಮ ಕೋಟಿ ಕೋಟಿ ಹಿಂದೂ ಜನರ ಭಾವನೆಯನ್ನು ವರ್ಣಿಸುವ ಶಕ್ತಿ ಆ ಕಾಳೀದಾಸನ ಕಾವ್ಯಕ್ಕಾಗಲೀ, ಬಾಣಭಟ್ಟನ ಶಬ್ದಭಂಡಾರಕ್ಕಾಗಲೀ ಇಲ್ಲವೆಂದರೆ ಅತಿಶಯೋಕ್ತಿಯಾಗಲಾರದು.** ಆದ್ದರಿಂದಲೇ ಈ ಭಾವನೆಯನ್ನು 'ಅನಿರ್ವಚನೀಯ' ಎಂಬ ಒಂದೇ ಶಬ್ದದಿಂದ ವರ್ಣಿಸಬಹುದು. **ಇಂತಹಾ ಸಾಲಿಗ್ರಾಮಸದೃಶವಾದ ವಿಶ್ವಾಸದ ಭಾವನೆಯನ್ನು ಹೃದಯವೆಂಬ ಸಂಪುಷ್ಟದೊಳಗೆ ಭದ್ರವಾಗಿರಿಸಿಕೊಂಡಿರುವಾಗ ಆ ಸಂಪುಷ್ಟದೊಳಗೆ ಡೈನಮೆಟ್ ಸಿಡಿಸಲು ಬರುತ್ತಲಿದೆ ಕೇಂದ್ರಸರ್ಕಾರ.** ಹೀಗಾದಾಗ ಪ್ರಳಯಸದೃಶ ಕೋಪ ಬರುವುದಲ್ಲದೆ, ಶಾಂತಿಮಂತ್ರ ಪಠಿಸಲು ಸಾಧ್ಯವೇ ?

ಇವೆಲ್ಲವನ್ನು ನಾವು ನಿಮಗೆ ಇನ್ನಷ್ಟು ವಿವರಿಸಿ ಹೇಳಬೇಕಿಲ್ಲ. ನೀವೆಲ್ಲ ಇದನ್ನು ತಿಳಿದವರೇ. ಈ ಸೇತುವೆಯ ಬಗ್ಗೆ ಅನೇಕ ಕವಿಗಳು ಅನೇಕ ಗ್ರಂಥಗಳಲ್ಲಿ ವಿವರಿಸಿದ್ದಾರೆ. ಇದನ್ನು ಕಂಡು ಪುನೀತರಾಗಿ ಆ ಭಾವನೆಗಳನ್ನು ಗ್ರಂಥಗಳಲ್ಲಿ ನಮೂದಿಸಿ, ಹಂಚಿಕೊಂಡಿದ್ದಾರೆ. ಇಂತಹಾ ಗ್ರಂಥಗಳು ಸಾವಿರಾರು ಇದೆ. ಹಿಂದೆ ಅನೇಕ ಋಷಿ-ಮುನಿಗಳು-ಯತಿಗಳು ಈ ಸೇತುವೆಯನ್ನು ಸಂದರ್ಶಿಸಿದ್ದರು. ಅವರಂತೆಯೇ ಸಾಕ್ಷಾತ್ ಮೂಲರಾಮಾರ್ಚಕರಾದ ಶ್ರೀರಾಘವೇಂದ್ರತೀರ್ಥರು ಈ ಪವಿತ್ರ ಕ್ಷೇತ್ರವನ್ನು ದರ್ಶಿಸಿದಾಗ ಅಲ್ಲಿಯ ವಾತಾವರಣ ಹೇಗಿತ್ತು ? ರಾಯರ ಮನದಲ್ಲಿ ಯಾವ ಭಾವನೆಯು ಮೂಡಿತು ? ರಾಯರ ದರ್ಶನದಿಂದ ಸಮುದ್ರರಾಜನ ಪ್ರತಿಕ್ರಿಯೆಯು ಏನು ? ರಾಮಸೇತು ಪ್ರಾಂತ್ಯದಲ್ಲಿ ಯಾವ ಯಾವ ವಿಶೇಷಗಳಿದ್ದವು ? ಇತ್ಯಾದಿ ವಿಷಯಗಳು ಶ್ರೀರಾಘವೇಂದ್ರವಿಜಯದಲ್ಲಿ ವರ್ಣಿಸಲ್ಪಟ್ಟಿವೆ. ಇಲ್ಲಿ ಕೆಲವು ವರ್ಣನೆ-



ಗಳಾದರೆ ಕೆಲವು ನೈಜಘಟನೆಗಳೂ ಕೂಡ ಪ್ರಸ್ತಾಪಿಸಲ್ಪಟ್ಟಿವೆ. ಈ ಎಲ್ಲ ವಿಷಯ-ಗಳನ್ನೂ ಕ್ರಮವಾಗಿ ವಿವರಿಸಲಾಗಿದೆ.

'ಶ್ರೀರಾಘವೇಂದ್ರವಿಜಯ' ಮಹಾಕಾವ್ಯವು ಶ್ರೀರಾಯರ ಜೀವಿತಕಾಲದಲ್ಲಿಯೇ ರಚಿಸಿರುವಂಥಾದ್ದು. ಈ ಕಾವ್ಯವನ್ನು ಶ್ರೀಗುರುರಾಜರ ಪೂರ್ವಾಶ್ರಮ ಸೋದರಳಿಯ ಶ್ರೀಮನ್ನಾರಾಯಣಾಚಾರ್ಯರು. **ಗುರುಗಳು ಪ್ರತ್ಯಕ್ಷರಾಗಿದ್ದಾಗ ಅವರ ಸಮಸ್ತ ಚಟುವಟಿಕೆಗಳನ್ನು ಸದಾ ಪಕ್ಕದಲ್ಲಿದ್ದು ಗಮನಿಸುತ್ತಿದ್ದ ಶ್ರೀನಾರಾಯಣಾಚಾರ್ಯರು ಆ ಎಲ್ಲ ಘಟನೆಗಳನ್ನೂ ಕಣ್ಣಿಗೆ ಕಟ್ಟುವಂತೆ ವಿವರಿಸಿದ್ದಾರೆ.** ಆದ್ದರಿಂದ ಈ ಕಾವ್ಯಕ್ಕೆ ಎಲ್ಲಿಲ್ಲದ ಪ್ರಾಮುಖ್ಯತೆ. ಈ ಮಹಾಕಾವ್ಯದಲ್ಲಿ ಅನೇಕ ಕಡೆ ಸಿದ್ಧಾಂತ, ಪ್ರಮೇಯ-ಗಳು ಸುಲಭವಾಗಿ ತಿಳಿಯುವಂತೆ ನಿರೂಪಿಸಲ್ಪಟ್ಟಿವೆ. 'ಶ್ರೀಮಲ್ಲಕ್ಷ್ಮೀನೃಸಿಂಹಸ್ಯ....' ಎಂದು ಉಪಕ್ರಮದಲ್ಲಿಯೂ, 'ಶ್ರೀಯಃ ಪತಿಃ......', 'ಶ್ರೀಮತ್ಕಶ್ಯಪವಂಶವಾರ್ಧಿಕ-ಶಶಿನಃ.....' ಎಂದು ಉಪಸಂಹಾರದಲ್ಲಿಯೂ ಶ್ರೀಕಾರದ ಪ್ರಯೋಗವಿರುವದರಿಂ ಈ ಕಾವ್ಯದ ಪಠನ-ಪಾಠನಗಳಿಂದ ಐಹಿಕಾಮುಷ್ಮಿಕ ಸಂಪತ್ತು ಲಭಿಸುವದೆಂಬುದು ಸೂಚಿತವಾಗಿದೆ. ಕವಿ ಶ್ರೀನಾರಾಯಣಾಚಾರ್ಯರು ಮೊದಲು ಶ್ರೀರಾಘವೇಂದ್ರವಿಜಯ ಕಾವ್ಯವನ್ನು ಹದಿನಾರು ಸರ್ಗಗಳಲ್ಲಿ ರಚಿಸಿ ಗುರುಗಳಿಗೆ ಸಮರ್ಪಿಸಿದರಂತೆ. ಅದನ್ನು ಆಮೂಲಾಗ್ರವಾಗಿ ನೋಡಿದ ಶ್ರೀಗುರುಸಾರ್ವಭೌಮರು ಹದಿನಾರು ಸರ್ಗಗಳಿಂದ ಯುಕ್ತವಾಗಿರುವ ಶ್ರೀಸುಮಧ್ವವಿಜಯಕ್ಕೆ ಈ ಕಾವ್ಯವು ಸಮಾನವಾಗುವುದನ್ನು ಬಯಸದೇ ಕೊನೆಯ ಆರು ಸರ್ಗಗಳನ್ನು ಕಡಿಮೆಗೊಳಿಸಿದರಂತೆ. ಹೀಗಾಗಿ ಈಗ ದೊರಕಿರುವ ಕಾವ್ಯವು ಹತ್ತು ಸರ್ಗಗಳಿಂದ ಯುಕ್ತವಾಗಿದೆ ಮತ್ತು ಶ್ರೀಗುರುಸಾರ್ವಭೌಮರ ಚರಿತ್ರೆಯ ಇನ್ನೂ ಅನೇಕ ಅಂಶಗಳು ಬೆಳಕಿಗೆ ಬಾರದೇ ಕಾವ್ಯಪ್ರವಾಹವು ಒಮ್ಮೆಲೇ ನಿಂತಂತೆ ೧೦ ನೆಯ ಸರ್ಗದ ಕೊನೆಗೆ ಭಾಸವಾಗುತ್ತದೆ.

ಇದು ಕಾವ್ಯವಾದ ಕಾರಣ, ಅನೇಕ ಘಟನೆಗಳನ್ನು ವಿವರಿಸುವಾಗ ಕವಿಗಳು ತಮ್ಮ ಕಲ್ಪನಾಲೋಕದಲ್ಲಿಯೂ ವಿಹರಿಸುತ್ತಾರೆ. ಅಂದರೆ, ಸತ್ಯಘಟನೆಗಳೊಡನೆ ತಮ್ಮ ಕಲ್ಪನೆಗಳನ್ನೂ ಸೇರಿಸಿ ವರ್ಣಿಸಿ, ಒಂದು ಉತ್ತಮ ಚಿತ್ರವನ್ನು ಕೊಡುತ್ತಾರೆ (ಹೀಗೆ ಕಲ್ಪನೆಗಳನ್ನು ಸೇರಿಸಿ ವರ್ಣಿಸುವುದು ಕಾವ್ಯಲಕ್ಷಣ). ಇದರಂತೆಯೇ ಶ್ರೀರಾಘವೇಂದ್ರವಿಜಯದ ಏಳನೇಯ ಸರ್ಗದಲ್ಲಿ ದಕ್ಷಿಣ ಭಾರತದ (ತಮಿಳುನಾಡಿನ) ಯಾತ್ರೆಗೆಂದು ಬಂದು ಮನ್ನಾರುಗುಡಿಯ ಶ್ರೀರಾಜಗೋಪಾಲಕೃಷ್ಣದೇವರ ದರ್ಶನವನ್ನು ಪಡೆದ ಶ್ರೀರಾಯರು ನಂತರ ಶ್ರೀರಾಮಚಂದ್ರನಿಂದ ನಿರ್ಮಿತವಾದ ಶ್ರೀರಾಮಸೇತುವಿನ ದರ್ಶನ ಮಾಡಬೇಕೆಂಬ ನಿಮಿತ್ತದಿಂದ ರಾಮೇಶ್ವರ ಕ್ಷೇತ್ರದತ್ತ ಪ್ರಯಾಣ ಬೆಳೆಸುತ್ತಾರೆ.

ನಾವುಗಳು ಇನ್ನೇನು ರಾಮಸೇತುವನ್ನು ಸಮೀಪಿಸುತ್ತಿದ್ದೇವೆ ಎನ್ನುವ ಹಂತದಲ್ಲಿ ಉದ್ವೇಗಕ್ಕೊಳಗಾಗುತ್ತೇವಲ್ಲಾ, ಅದರಂತೆಯೇ ಶ್ರೀರಾಯರು ಆ ಸೇತುಪ್ರಾಂತವನ್ನು

ಸಮೀಪಿಸಿದಾಗ ಅವರ ಭಾವನೆಗಳು ಹೇಗಿದ್ದವು? ಎಂದು ತಿಳಿದುಕೊಳ್ಳಲು ನಮಗೆ ಕಿತೂಹಲವಿರುತ್ತದೆ. ಅದನ್ನು ಶ್ರೀರಾಘವೇಂದ್ರವಿಜಯದಲ್ಲಿ ಹೀಗೆ ಹೇಳುತ್ತಾರೆ.

**"ಇತಿ ಬಾಷ್ಪಗದ್ಗದತಯಾತಿಮಂಥರಂ ಪ್ರಮದಪ್ರವಾಹಕೃತಕಾಂತಿಕಂಧರಮ್ ।**
**ರಚಿತಸ್ತುತಿಃ ಕೃತನತಿಸ್ಸಮೇಯಿವಾನ್ ಸ ತು ರಾಮಸೇತುಮವಲೋಕನೋತ್ಸುಕಃ ॥"**

ಶ್ರೀರಾಯರು ಮನ್ನಾರುಗುಡಿಯ ಶ್ರೀರಾಜಗೋಪಾಲಕೃಷ್ಣದೇವರನ್ನು ಸ್ಮರಿಸಿ ನಮಿಸುವಾಗ ಪರಮಾತ್ಮನನ್ನು ನೋಡಿ, ಶ್ರೀರಾಮಸೇತುವನ್ನು ದರ್ಶಿಸಲಿದ್ದೇನೆಂದು ನೆನೆದು ಭಾವಪರವಶರಾಗಿದ್ದರು. ಇದರಿಂದಾಗಿ ತಡೆಯಲಸಾಧ್ಯವಾದ ಕಣ್ಣೀರಿನಿಂದ ಅವರ ಕಂಠವು ಬಿಗಿದು, ಅಕ್ಷರಗಳು ಸ್ಖಲಿಸುತ್ತಿದ್ದರೂ ಗಂಭೀರವದನರಾಗಿ ಅತ್ಯಂತ ಸಂತುಷ್ಟರಾಗಿ ಶೋಭಿಸುವ ಕಂಠವುಳ್ಳವರಾಗಿ ಪರಮಾತ್ಮನನ್ನು ಸ್ತುತಿಸಿ, ಶ್ರೀರಾಘವೇಂದ್ರ-ತೀರ್ಥರು ಶ್ರೀರಾಮಸೇತುವನ್ನು ನೋಡಲೇಬೇಕೆಂಬ ಉತ್ಸಾಹದಿಂದ ಸಂಚಾರವನ್ನು ಮುಂದುವರಿಸಿ, ಶ್ರೀರಾಮಸೇತುವನ್ನು ತಲುಪಿದರು.

ನಂತರ ಮಹಾತೇಜಸ್ವಿಗಳಾದ ಉನ್ನತ ಪ್ರಜ್ಞಾಶಕ್ತಿಯುಳ್ಳ ಶ್ರೀರಾಘವೇಂದ್ರ-ತೀರ್ಥರು ತಮ್ಮೆದುರಿನಲ್ಲಿ ಇರುವ ಪವಿತ್ರವಾದ ಸಮುದ್ರವನ್ನು ನೋಡಿದರು. ಈ ಸಮುದ್ರವು ಹೇಗಿತ್ತೆಂದರೆ, ಅಲೆಗಳು ಪರಸ್ಪರ ಹೊಡೆದುಕೊಳ್ಳೋಣದರಿಂದ ತುಂತುರು ಹನಿಗಳ ಸಿಂಪಡಿಸುವಿಕೆಯಿಂದ ಆಯಾಸ ಪರಿಹಾರವಾಗುತ್ತಿತ್ತು. ಅಲ್ಲಿ ಸಮುದ್ರದಲ್ಲಿ ಅಸಂಖ್ಯಾತವಾದ ಮೊಸಳೆ ಮುಂತಾದ ಜಲಚರ ಪ್ರಾಣಿಗಳು ತುಂಬಿದ್ದವು ಎಂಬ ಸಂಗತಿಯನ್ನು ಈ ಕೆಳಗಿನ ಶ್ಲೋಕದಲ್ಲಿ ತಿಳಿಸಿದ್ದಾರೆ.

**"ಅಥ ಲೋಚನಾತಿಥಿಮಸಾವಪಾಂ ನಿಧಿಂ ನಿಧಿರರ್ಹಣೀಯಮಹಸಾಮುದಾರಧೀಃ ।**
**ಅಕರೋದಪಾರಮಕರೋದಪಾಕುಲಂ ಸುಕರಂ ಶ್ರಮಾಪನಯಶಕ್ತಿಶೀಕರಮ್ ॥"**

**(ಮುಂದುವರೆಯುವುದು)**

ನಿಮಗಿದು ಗೊತ್ತೆ ?

- ಅಮೆರಿಕ ಸರ್ಕಾರವು ಭಾರತೀಯ ವಾಸ್ತುಶಾಸ್ತ್ರದಲ್ಲಿರುವ ಅನುಕೂಲತೆ-ಗಳನ್ನು ಅಧ್ಯಯನಮಾಡಿದ ನಂತರ ಪ್ರಸ್ತುತ ಡಬ್ಲ್ಯು.ಟಿ.ಸಿ. ಭವನವಿದ್ದ ಸ್ಥಳದಲ್ಲಿ ಪ್ರಸ್ತುತ ನಿರ್ಮಿಸುತ್ತಿರುವ ನೂರಕ್ಕೂ ಹೆಚ್ಚು ಅಂತಸ್ತಿನ ಭವನವನ್ನು ಸಂಪೂರ್ಣವಾಗಿ ಭಾರತೀಯ ವಾಸ್ತುಶಾಸ್ತ್ರದ ಪದ್ಧತಿಯನ್ನನುಸರಿಸಿಯೇ ನಿರ್ಮಿಸಲು ನಿರ್ಧರಿಸಿದೆ.
- ಗೋಮೂತ್ರದಲ್ಲಿರುವ ಅನೇಕ ಮಹತ್ವಗಳನ್ನು ಸಾವಿರಾರು ಗ್ರಂಥಗಳಲ್ಲಿ ಸಾರಿ ಹೇಳಲಾಗಿದೆ. ಪ್ರಸ್ತುತ ಕಣ್ಣು ತೆರೆದಿರುವ ಸರಕಾರವು ಗೋಮೂತ್ರದಿಂದ ಕೆಲವು ಮೆಗಾವ್ಯಾಟ್ ವಿದ್ಯುತ್ತನ್ನು ಉತ್ಪಾದಿಸುವ ಪ್ಲಾಂಟ್ ಒಂದನ್ನು ಬೆಂಗಳೂರಿನ ಹೊರವಲಯದ ಪ್ರಾಂತ್ಯದಲ್ಲಿ ನಿರ್ಮಿಸುತ್ತಿದೆ. ಇತ್ತೀಚೆಗಷ್ಟೇ ಒಬ್ಬ ಪ್ರತಿಭಾವಂತರು ಗೋಮೂತ್ರದಿಂದ ವಿದ್ಯುತ್ತನ್ನು ಉತ್ಪಾದಿಸಬಹುದೆಂಬ ಸಂಶೋಧನೆಯನ್ನು ಮಾಡಿದ್ದರು.



ಲೇಖನಾಂಕ

# ಗೀತೆ ಮತ್ತು ಶ್ರೀಮಧ್ವಾಚಾರ್ಯರು

■ ಡಾ. ಪಾಂಡುರಂಗ ಜೋರಾಪುರ
ಶ್ರೀರಾಘವೇಂದ್ರಸ್ವಾಮಿಗಳವರ ಮಠ, ಪೋಸ್ಟ್ : ಕರಜಗಿ, ಜಿಲ್ಲಾ ಹಾವೇರಿ - ೫೮೧ ೧೧೨

**ಸೂ**ರ್ಯಚಂದ್ರರು ವಿಶ್ವವನ್ನು ಪ್ರಕಾಶಪಡಿಸುವಂತೆ, ಶ್ರೀಮಧ್ವಾಚಾರ್ಯರು ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯಗಳ ಮೂಲಕ ತಾತ್ವಿಕ ಪ್ರಪಂಚವನ್ನು ತೋರಿಸುತ್ತಾರೆ ಎಂದು ತ್ರಿವಿಕ್ರಮಪಂಡಿತಾಚಾರ್ಯರು ಹೊಗಳುವುದು ಅರ್ಥಪೂರ್ಣವಾಗಿದೆ. ಪರಮಾತ್ಮನ ಜ್ಞಾನ ಪಡೆದು ಮಾಡುವ ಉಪಾಸನೆಯೇ ಪರ್ಯುಪಾಸನೆ - ''ಸಮ್ಯಗ್ ಗುಣಗಣಜ್ಞಾನಾದುಪಾಸನಾ ಇತಿ ಚ'' ಎಂದು ಆಚಾರ್ಯರೇ ಗೀತಾ ತಾತ್ಪರ್ಯ(೯-೨೩)ದಲ್ಲಿ ಹೇಳಿದಂತೆ, ಗ್ರಂಥದ ಉದ್ದೇಶವನ್ನು ಸರಿಯಾಗಿ ತಿಳಿದು ಅಧ್ಯಯನಮಾಡಿದರೆ ಮಾತ್ರ ಹೆಚ್ಚು ಫಲಪ್ರದ.

ಒಂದು ಗ್ರಂಥಕ್ಕೆ ಅನುಬಂಧ ಚತುಷ್ಟಯ - ವಿಷಯ, ಪ್ರಯೋಜನ, ಅಧಿಕಾರಿ, ಸಂಬಂಧ ಇವುಗಳಿದ್ದು, ಅರ್ಥವು ಸುಲಭವಾಗಿ ತಿಳಿಯದಿದ್ದರೆ, ಅಪಾರ್ಥವಾಗುವ ಸಂಭವವಿದ್ದರೆ, ವ್ಯಾಖ್ಯಾನ ಮಾಡಬೇಕೆಂಬುದು ಸಂಪ್ರದಾಯ. ಗೀತೆಯ ವಿಷಯ-ದಲ್ಲಿ ಇವು ಎರಡೂ ಅನ್ವಯಿಸುತ್ತಿದ್ದು, ಆಚಾರ್ಯರು ಗೀತೆಗೆ ವ್ಯಾಖ್ಯಾನಮಾಡಿ, ಅದರ ಸರಿಯಾದ ಅರ್ಥವನ್ನು ಶ್ರುತಿ-ಸ್ಮೃತಿ-ಪ್ರಮಾಣಸಹಿತ ಸ್ಪಷ್ಟಮಾಡಿದ್ದಾರೆ. ಇಲ್ಲಿ ಕೆಲವು ಉದಾಹರಣೆಗಳು :

## ೧. ವಿಷಯಪದಾರ್ಥಗಳ ಸಂಪರ್ಕ - ಸುಖ-ದುಃಖ

**"ಮಾತ್ರಾಸ್ಪರ್ಶಾಸ್ತು ಕೌಂತೇಯ ಶೀತೋಷ್ಣಸುಖದುಃಖದಾಃ ।**
**ಆಗಮಾಪಾಯಿನೋಽನಿತ್ಯಾಸ್ತಾಂ ತಿತಿಕ್ಷಸ್ವ ಭಾರತ ॥"**

ಇಂದ್ರಿಯಗಳಿಗೆ ವಿಷಯಪದಾರ್ಥಗಳ ಸಂಪರ್ಕದಿಂದಲೇ ಸುಖ-ದುಃಖಗಳು ಉಂಟಾಗುತ್ತವೆ ಎಂಬುದು ಈ ಶ್ಲೋಕದ ಅರ್ಥವೆಂದು ಮೇಲ್ನೋಟಕ್ಕೆ ತೋರುತ್ತದೆ. ಆದರೆ ಹಾಗಲ್ಲ. ಕೇವಲ ಸಂಪರ್ಕದಿಂದಲೇ ಸುಖ-ದುಃಖ ಉಂಟಾಗುವುದಾದರೆ, ನಿದ್ರಾವಸ್ಥೆಯಲ್ಲೂ ಆಗಬೇಕು. ಏಕೆಂದರೆ ಆಗ ವಿಷಯಪದಾರ್ಥಗಳ ಸಂಪರ್ಕ ಇದ್ದೇ ಇದೆ. ಆದರೆ ಆಗುವುದಿಲ್ಲ. ಇದಕ್ಕೆ ಕಾರಣ ದೇಹಾದಿಗಳಲ್ಲಿ ಅಭಿಮಾನ. ಇದು ಇಷ್ಟವೆಂದು ಸುಖ, ಅನಿಷ್ಟವೆಂದು ದುಃಖ, ಭ್ರಾಂತಿಯೇ ಮೂಲ. ನನ್ನದು, ನನ್ನವರು

ಎಂಬ ಅಭಿಮಾನ. ಈ ರೀತಿ ಅಭಿಮಾನ ಇಲ್ಲದಿರುವಾಗ ಸುಖ-ದುಃಖಗಳ ಪ್ರಸಕ್ತಿಯೇ ಇಲ್ಲ. ಇದನ್ನೇ ಆಚಾರ್ಯರು ಭಾಷ್ಯದಲ್ಲಿ ಸ್ಪಷ್ಟಪಡಿಸುತ್ತಾರೆ. ''ಅತಶ್ಚಾತ್ಮನೋ ದೇಹಾದ್ಯಾತ್ಮ ಭ್ರಮ ಏವ ಸುಖದುಃಖ ಕಾರಣಮ್'' ಆದ್ದರಿಂದ, ಭೀಷ್ಮಾದಿಗಳು ನನ್ನವರು ಎಂಬ ಅಭಿಮಾನವನ್ನು ವಿಫಲಗೊಳಿಸು = ತಿತಿಷಸ್ವ; ಯುದ್ಧಮಾಡು, ಎಂದು ಉಪದೇಶಿಸುತ್ತಾನೆ ಕೃಷ್ಣ ಅರ್ಜುನನಿಗೆ.

**೨. ಜಗತ್ತು ಸದಸದ್ವಿಲಕ್ಷಣವಲ್ಲ, ಸತ್ಯ**

**"ನಾಸತೋ ವಿದ್ಯತೇ ಭಾವೋ ನಾಭಾವೋ ವಿದ್ಯತೇ ಸತಃ । (೨-೧೬)**

ಈ ಶ್ಲೋಕದಲ್ಲಿ, ಜಗತ್ತು ಸದಸದ್ವಿಲಕ್ಷಣ ಎಂದು ಹೇಳಿದೆಯೆಂದು ಭಾಸ್ಕರರು ವ್ಯಾಖ್ಯಾನಿಸಿರುವುದು ಸರಿಯಲ್ಲ. ''ಅಸತಃ'' ಜಡಪ್ರಕೃತಿಗೆ ಮತ್ತು ''ಸತಃ'' ಬ್ರಹ್ಮನಿಗೆ ನಾಶವಿಲ್ಲವೆಂಬುದು ಸರಿ ಅರ್ಥ. ''ಅಸತಃ ಕಾರಣಸ್ಯ ಸತೋ ಬ್ರಹ್ಮಣಶ್ಚ ಅಭಾವೋ ನ ವಿದ್ಯತೇ। ಪ್ರಕೃತಿಃ ಪುರುಷಶ್ಚೈವ ನಿತ್ಯೌ ಕಾಲಶ್ಚ ಸತ್ತಮ ಇತಿ।'' ಎಂದು ವಿಷ್ಣುಪುರಾಣದ ಪ್ರಮಾಣವನ್ನು ಭಾಷ್ಯದಲ್ಲಿ ಆಚಾರ್ಯರು ಕೊಡುತ್ತಾರೆ. ಪರಮಾತ್ಮನು ಸೃಷ್ಟಿಸಿದ ಜಗತ್ತು ಸತ್ಯ. ''ಕವಿರ್ಮನೀಷಿ'' ಇತ್ಯಾದಿ ಈಶಾವಾಸ್ಯ ಮಂತ್ರದಲ್ಲಿ ಪರಮಾತ್ಮನು ಎಲ್ಲ ಕಾಲದಲ್ಲೂ ಸತ್ಯವಾದುವುಗಳನ್ನೇ ಮಾಡಿದ ಎಂದು ಶ್ರುತಿಗಳಲ್ಲಿ ಹೇಳಿರು- ವುದನ್ನು ಗೀತಾತಾತ್ಪರ್ಯ ವಿವರಿಸುತ್ತದೆ.

**೩. ಮುಕ್ತಿಯಲ್ಲಿ ಜೀವ-ಪರಮಾತ್ಮರ ಐಕ್ಯವಿಲ್ಲ**

**"ಯೋ ವೇದ ನಿಹಿತಂ ಗುಹಾಯಾಂ ಪರಮೇ ವ್ಯೋಮನ್ ।**
**ಸೋಽಶ್ನುತೇ ಸರ್ವಾನ್ ಕಾಮಾನ್ ಸಹ ಬ್ರಹ್ಮಣಾ ವಿಪಶ್ಚಿತಾ ॥"**

ಹೃದಯಗುಹೆಯಲ್ಲಿರುವ ಪರಮಾತ್ಮನನ್ನು ತಿಳಿದವನು, ಅವನೊಡನೆ ಇದ್ದು ಸುಖಿಸುತ್ತಾನೆ. ''ತಥಾ ವಿದ್ವಾನ್ ಪುಣ್ಯಪಾಪೇ ವಿಧೂಯ ನಿರಂಜನಃ ಪರಮಂ ಸಾಮ್ಯಮುಪೈತಿ'' **ಅಪರೋಕ್ಷಜ್ಞಾನಿಯು ಪುಣ್ಯಪಾಪಗಳನ್ನು ಕಳೆದುಕೊಂಡು ತನ್ನ ಯೋಗ್ಯತೆಗೆ ತಕ್ಕಂತೆ ಪರಮಸಾಮ್ಯ ಪಡೆಯುವನು. ಪರಮಾತ್ಮನೊಂದಿಗೆ ಐಕ್ಯ ಹೊಂದುವುದಿಲ್ಲ** ಎಂದು ಶ್ರುತಿ-ಸ್ಮೃತಿಗಳ ಆಧಾರದಿಂದ ಆಚಾರ್ಯರು ಗೀತಾತಾತ್ಪರ್ಯದಲ್ಲಿ ತಿಳಿಸುತ್ತಾರೆ. ಮುಕ್ತರು ವಿಷ್ಣುವಿನ ದೇಹವನ್ನು ಹೊಂದಿದ್ದರೂ **ಆನಂದದಲ್ಲಿ ತಾರತಮ್ಯವಿರುತ್ತದೆ** ಎಂದು ಪ್ರಮಾಣ ತೋರಿಸುತ್ತಾರೆ, ''ತಾರತಮ್ಯೇನ ತಿಷ್ಠಂತಿ''.

''ಪರಮಂ ಬ್ರಹ್ಮವೇದ ಬ್ರಹ್ಮೈವ ಭವತಿ'' ಎಂಬ ಶ್ರುತಿಗೆ ಅದ್ವೈತಿಗಳು ಹೇಳುವಂತೆ, **ಬ್ರಹ್ಮಜ್ಞಾನ ಪಡೆದವನು ಬ್ರಹ್ಮನೇ ಆಗುತ್ತಾನೆ ಎಂದು ಅರ್ಥವಲ್ಲ. ಬ್ರಹ್ಮತ್ವವನ್ನು ಪಡೆಯುವುದೆಂದರೆ, ಯೋಗ್ಯತಾನುಸಾರ ಗುಣಪೂರ್ಣತ್ವ ಪಡೆಯುವರು. ಜೀವಿ ಪರಮೇಶ್ವರನಾದರೆ ದುಃಖವೆನ್ನುವುದು ಯಾರಿಗೆ?** ''ಯದ್ಯಸ್ಯ ಪರಮೇಶತ್ವಂ ತದಾ ಸ್ಯಾತ್ ದುಃಖಿತಾ ಕುತಃ'' **ಜೀವ-ಬ್ರಹ್ಮ ಐಕ್ಯವಿಲ್ಲ. ಅವನ ಅನುಗ್ರಹದಿಂದ ಮೋಕ್ಷ ಪಡೆಯುತ್ತಾನೆ.** ''ತಸ್ಮಾನ್ನೈವೇಶ್ವರೋ ಜೀವಃ ತತ್ಪ್ರಸಾದಾತ್ತು ಮುಚ್ಯತೇ'' ಎಂದು ಪ್ರಮಾಣವಚನ.

**೪. "ಅಹಂ ಬ್ರಹ್ಮಾಸ್ಮಿ", "ತತ್ತ್ವಮಸಿ" ಇವುಗಳ ಸರಿಯಾದ ಅರ್ಥ**

ಇವು ಅತ್ಯಂತ ವಿವಾದಾಸ್ಪದ, ವಿಪರೀತ ಅರ್ಥಕೊಡುವ ವಾಕ್ಯಗಳೆನ್ನುವವರಿಗೆ ಸರಿಯಾದ ಅರ್ಥವನ್ನು ಆಚಾರ್ಯರು ಗೀತಾತಾತ್ಪರ್ಯದಲ್ಲಿ ವಿವರಿಸಿ ಅನುಮಾನ ಪರಿಹಾರಮಾಡಿದ್ದಾರೆ :

**ಅಹಂ ಬ್ರಹ್ಮಾಸ್ಮಿ** : ನಾಶರಹಿತ ಹರಿಯನ್ನು ಬಿಟ್ಟು ಇರಲು ಯಾರಿಗೂ ಸಾಧ್ಯವಿಲ್ಲ- ವಾದ್ದರಿಂದ ಹರಿಯು 'ಅಹಂ', ಅವನು ಗುಣಪೂರ್ಣನಾದ್ದರಿಂದ 'ಬ್ರಹ್ಮ', ಜ್ಞಾನರೂಪನಾದ್ದರಿಂದ 'ಅಸ್ಮಿ'. ಗೀತಾತಾತ್ಪರ್ಯದಲ್ಲಿ ಹೀಗಿದೆ :

**"ಅಹೇಯತ್ವಾದಹಂ ನಾಮಾ, ಭಗವಾನ್ ಹರಿರವ್ಯಯಃ ।**
**ಬ್ರಹ್ಮಾಸೌ ಗುಣಪೂರ್ಣತ್ವಾತ್, ಅಸ್ಮಿ ಅಸೌ ಅಸನಾನ್ಮಿತೇಃ ॥"**

**ತತ್ತ್ವಮಸಿ** : ತಾನೇ ಜ್ಞಾನಿಯೆಂದು ಅಹಂಕಾರಪಡುವ ಶ್ವೇತಕೇತುವಿಗೆ ಅವನ ತಂದೆ, ಪಕ್ಷಿ-ಸೂತ್ರ, ವಿವಿಧ ಹಣ್ಣಿನ ರಸಗಳು, ನದಿ-ಸಮುದ್ರ, ಮುಂತಾದ ಒಂಭತ್ತು ದೃಷ್ಟಾಂತಗಳಿಂದ ಜೀವ-ಪರಮಾತ್ಮರ ಭೇದವನ್ನು ಸ್ಪಷ್ಟಪಡಿಸಿ, ನೀನು ಪರಮಾತ್ಮನಲ್ಲ - ''ಅತತ್ತ್ವಮಸಿ'' ಎಂದು ಹೇಳಿದ್ದನ್ನು ಆಚಾರ್ಯರು ''ತತ್ವಮಸಿ''ಯ ಸರಿಯಾದ ಅರ್ಥವನ್ನು ಹೇಳಿದ್ದಾರೆ. **ಎಲ್ಲವೂ ಅವನ ಆಧೀನ, ಅವನು ಯಾರ ಆಧೀನನೂ ಅಲ್ಲ.** ''ತದಧೀನಮಿದಂ ಸರ್ವಂ, ನಾನ್ಯಾಧೀನಃ ಸ ಈಶ್ವರಃ'' ಎಂದು ಶ್ರುತಿಯ ಪ್ರಮಾಣ ಕೊಟ್ಟಿದ್ದಾರೆ.

**೫. ಪರಮಾತ್ಮನು "ಅಚಲ" - ಕ್ರಿಯಾಹೀನನಲ್ಲ**

**"ನಿತ್ಯಃ ಸರ್ವಗತಸ್ಥಾಣುರಚಲೋಽಯಂ ಸನಾತನಃ । (೨-೨೪)**

ಈ ಶ್ಲೋಕದಲ್ಲಿ ಪರಮಾತ್ಮನು ''ಅಚಲ'' ಕ್ರಿಯಾಶೂನ್ಯ ಎಂದು ವರ್ಣಿಸ- ಲ್ಪಟ್ಟಿದ್ದಾನೆಂದು ಶಂಕರಭಾಷ್ಯ ಹೇಳುವುದು ಸರಿಯಲ್ಲ. ಅಪ್ರಹರ್ಷ, ಅನಾನಂದ, ಅದುಃಖ ಮುಂತಾಗಿ ಉಪನಿಷತ್ತುಗಳಲ್ಲಿ ಹೇಳಿದಂತೆ ಈ ಶಬ್ದವನ್ನು ತಿಳಿಯಬೇಕೆಂದು

ಆಚಾರ್ಯರು ಗೀತಾಭಾಷ್ಯದಲ್ಲಿ ತಿಳಿಸುತ್ತಾರೆ. ಜ್ಞಾನವೇ ನನ್ನ ಹೃದಯ, ವಿದ್ಯೆಯೇ ಶರೀರ, ಸೃಷ್ಟ್ಯಾದಿ ಕ್ರಿಯೆಗಳೇ ನನ್ನ ಆಕಾರ. ''ತಪೋ ಮೇ ಹೃದಯಂ, ಸಾಕ್ಷಾತ್ ತನುರ್ವಿದ್ಯಾ ಕ್ರಿಯಾಽಽಕೃತಿಃ'' ಎಂದು ಶ್ರುತಿಯನ್ನು ಉದಾಹರಿಸುತ್ತಾರೆ. ಇಲ್ಲಿ ''ಅಚಲ'' ಎಂದರೆ ಲೌಕಿಕ ಕ್ರಿಯೆ ಇಲ್ಲ ಎಂದು ಮಾತ್ರ ತಿಳಿಯಬೇಕು. ಇಲ್ಲವಾದರೆ, ''ಅಹಂ ಸರ್ವಸ್ಯ ಪ್ರಭವೋ ಮತ್ತಃ ಸರ್ವಂ ಪ್ರವರ್ತತೇ'' (೧೦-೮) ಎಂದು ಮುಂತಾಗಿ ಹೇಳಿರುವುದರ ಅರ್ಥವೇನು!

**೬. ವೇದಗಳು ಪರಮಾತ್ಮನನ್ನೇ ಪ್ರತಿಪಾದಿಸುತ್ತವೆ – ಸ್ವರ್ಗಾದಿಗಳನ್ನಲ್ಲ**

**"ತ್ರೈಗುಣ್ಯ ವಿಷಯಾ ವೇದಾ, ನಿಸ್ತ್ರೈಗುಣ್ಯೋ ಭವಾರ್ಜುನ ।**
**ನಿರ್ದ್ವಂದ್ವೋ ನಿತ್ಯಸತ್ವಸ್ಥೋ ನಿರ್ಯೋಗಕ್ಷೇಮ ಆತ್ಮವಾನ್ ॥" (೨-೪೫)**

ವೇದಗಳು ತ್ರೈಗುಣ್ಯಗಳನ್ನು (ಸ್ವರ್ಗಾದಿಫಲಗಳನ್ನು) ಹೇಳುತ್ತವೆ. ನೀನು ನಿಸ್ತ್ರೈಗುಣ್ಯನಾಗು - ವೇದಗಳನ್ನು ಒಪ್ಪಬೇಡ ಎಂದು ಈ ಶ್ಲೋಕಕ್ಕೆ ಅಪಾರ್ಥ ಮಾಡಬಾರದು. ''ಪರೋಕ್ಷಪ್ರಿಯಾಃ ಹಿ ವೇದಾ'' - ವೇದಗಳು, ದೇವತೆಗಳು ಗೂಢಾರ್ಥಪ್ರಿಯರು ಎಂದು ಶ್ರುತಿಯ ಹೇಳಿಕೆ ಇದೆ. ಆದರೆ ವೇದಗಳು ಯಾವಾಗಲು ವಿಷ್ಣುಪ್ರತಿಪಾದಕಗಳು. ''ವೇದಾನಾಂ ಸರ್ವಾತ್ಮನಾ ವಿಷ್ಣುಪರತ್ವೋಕ್ತೇಃ'' ಎಂದು ಗೀತಾಭಾಷ್ಯದಲ್ಲಿ ಆಚಾರ್ಯರು ತಿಳಿಸುತ್ತಾರೆ. ತ್ರಿಗುಣದೋಷಗಳನ್ನು ಪರಿಹರಿಸು-ವುದರಿಂದ ವೇದಗಳು ತ್ರೈಗುಣ್ಯವಿಷಯಗಳು. ''ತ್ರೈಗುಣ್ಯಾಖ್ಯಂ ವಿಷಂ ಯಾಪಯಂತಿ ಅಪಗಮಯಂತೀತಿ ತ್ರೈಗುಣ್ಯವಿಷಯಾಃ''. ಆದ್ದರಿಂದಲೇ ತ್ರೈಗುಣ್ಯವಿಷವನ್ನು ಪರಿಹರಿಸುವ ವೇದಗಳನ್ನು ವಾಸುದೇವನನ್ನು ಆಶ್ರಯಿಸಿ ನಿಸ್ತ್ರೈಗುಣ್ಯನಾಗು - ತ್ರಿಗುಣಗಳ ದೋಷ ಪರಿಹರಿಸಿಕೋ ಎಂದು ವಚನವಿದೆ. ''ಆಶ್ರಿತ್ಯ ವೇದಾಂಸ್ತು ಪುಮಾನ್ ತ್ರೈಗುಣ್ಯವಿಷಹಾರಿಣಃ। ನಿಸ್ತ್ರೈಗುಣ್ಯೋ ಭವೇನ್ನಿತ್ಯಂ ವಾಸುದೇವೈಕ ಸಂಶ್ರಯಃ ಇತಿ ಚ ॥'' ಎಂಬ ಶ್ರುತಿವಚನ-ವನ್ನು ಗೀತಾತಾತ್ಪರ್ಯದಲ್ಲಿ ಆಚಾರ್ಯರು ವಿವರಿಸುತ್ತಾರೆ.

ಶ್ಲೋಕದಲ್ಲಿ ''ನಿರ್ಯೋಗಕ್ಷೇಮ'' ಎಂದರೆ ಎಲ್ಲ ಯೋಗಕ್ಷೇಮದ ಇಚ್ಛೆಯನ್ನು ಬಿಡಬೇಕೆಂದು ಅರ್ಥವಲ್ಲ. ಧರ್ಮವಿರುದ್ಧವಾದ ಯೋಗಕ್ಷೇಮದ ಇಚ್ಛೆಯನ್ನು ಬಿಡಬೇಕು, ಎಂಬುದು ಸರಿಯಾದ ಅರ್ಥವೆಂದು ತಾತ್ಪರ್ಯದಲ್ಲಿ ಆಚಾರ್ಯರು ಸ್ಪಷ್ಟೀಕರಿಸುತ್ತಾರೆ. ಇಲ್ಲವಾದರೆ, ಮುಂದೆ ಹೇಳಿದ ''ಉತ್ತಿಷ್ಠ'', ''ಯೋಗಮಾತ್ತಿಷ್ಠ'' ಎಂಬ ಉಪದೇಶಕ್ಕೆ ಉದ್ದೇಶವೇನು ?

❑❑





# ಪವಮಾನ ಜಗದಾ ಪ್ರಾಣ

■ ಎನ್.ಆರ್. ದ್ವಾರಕನಾಥಾಚಾರ್ಯ
ಎಸ್.ಜಿ.ಎಸ್. ವಿದ್ಯಾಪೀಠ, ಮಂತ್ರಾಲಯ

ದಾಸಚತುಷ್ಟಯರಲ್ಲಿ ಒಬ್ಬರಾದ ಶ್ರೀವಿಜಯದಾಸರು ವಾಯುದೇವರನ್ನು ಕೊಂಡಾಡುವಾಗ **"ಹೇ ಪವಮಾನ ನಮಗೆ ಶ್ರವಣವೇ ಮೊದಲಾದ ನವವಿಧ ಭಕುತಿಯ ತವಕದಿಂದಲಿ ಕೊಡೋ ಕವಿಗಳ ಪ್ರೀಯ"** ಎಂದು ಕೊಂಡಾಡಿದ್ದಾರೆ. ಇಂತಹ ಜೀವೋತ್ತಮರಾದ ವಾಯುದೇವರ ಮಹಿಮೆಯು ಅಗಮ್ಯವಾದುದು. ವಿಶ್ವದಲ್ಲಿ ಎರಡು ತತ್ತ್ವಗಳಿವೆ. ಒಂದು ಸ್ವತಂತ್ರವಾದ ತತ್ತ್ವವು. ಇನ್ನುಳಿದವುಗಳೆಲ್ಲ ಅಸ್ವತಂತ್ರ ತತ್ತ್ವಗಳು. ಆ ಸ್ವತಂತ್ರ ತತ್ತ್ವವೇ ವಿಷ್ಣುತತ್ತ್ವ. ಎಲ್ಲೆಡೆಗೂ ಜಗತ್ತಿನಲ್ಲಿ ವ್ಯಾಪಿಸಿದ್ದರಿಂದ (ವಿಷಲ್ ವ್ಯಾಪ್ತೌ) ವಿಷ್ಣು ಎನ್ನುವರು. ಎಲ್ಲ ಪ್ರಕೃತಿಗೆ ಪ್ರೇರಕವಾದ ಅಭಿಮಾನಿಯಾದ 'ಅವ್ಯಕ್ತ' ತತ್ವ ಒಂದಿದೆ. ಅದು ಸ್ತ್ರೀತತ್ತ್ವ. ಮಹಾಲಕ್ಷ್ಮೀ ಎಂದು ಕರೆದರು. ಇದು ಒಂದೇ ಆಗಿದೆ. ಪರಿಪೂರ್ಣತತ್ವ ಪರಮಾತ್ಮನಂತೆ ಮುಕ್ತವಾದದ್ದು. ಆದರೂ ಸ್ವತಂತ್ರ ತತ್ತ್ವದ ಅಧೀನವಾಗಿದೆ. ಮೂರನೇ ತತ್ತ್ವ ಒಂದಿದೆ. ಇದೇ ಮಹತ್ತತ್ತ್ವ. ಇದನ್ನು ವಾಯುತತ್ತ್ವ ಇಲ್ಲವೆ ಮುಖ್ಯಪ್ರಾಣತತ್ತ್ವ ಎಂದು ಕರೆಯುತ್ತಾರೆ. ಈ ಮುಖ್ಯಪ್ರಾಣನಿಗೆ ಎಂತಹ ಪ್ರಳಯಕಾಲದಲ್ಲಿಯೂ ಜ್ಞಾನ ಲೋಪವಾಗುವುದಿಲ್ಲ. ಅದನ್ನೇ ಅನುವ್ಯಾಖ್ಯಾನದಲ್ಲಿ **"ಏವಂ ಪ್ರಳಯಕಾಲೇಪಿ ಪ್ರತಿಭಾತ ಪರಾವರಃ"** ಎಂದಿದ್ದಾರೆ. ಈ ವಾಯುತತ್ತ್ವದ ಶಕ್ತಿ ಅಪಾರವಾದದ್ದು. ವಿಶ್ವದ ಯಾವ ದುಷ್ಟಶಕ್ತಿಯು ಅದನ್ನು ಎದುರಿಸಲು ಸಾಧ್ಯವಿಲ್ಲ. ಈ ಮುಖ್ಯಪ್ರಾಣನಲ್ಲಿ ಅಜ್ಞಾನಕ್ಕೆ ಸುಳಿವಿಲ್ಲ. ಶುದ್ಧಜ್ಞಾನಕ್ಕೆ ಕೊರತೆಯಿಲ್ಲ. ಆದ್ದರಿಂದಲೇ ಈ ತತ್ತ್ವವನ್ನು ಅಮೃತವೆನ್ನುವರು. ಈಶಾವಾಸ್ಯ ಭಾಷ್ಯದಲ್ಲಿ **"ಅತಿರೋಹಿತ ವಿಜ್ಞಾನಾಥ ವಾಯುರಪ್ಯಮೃತಃ ಸ್ಮೃತಃ"** ಎಂದಿದೆ.

ಈ ವಾಯುದೇವರ ಜ್ಞಾನ ಪರಿಪೂರ್ಣವಾದದ್ದು. ಪರಮಾತ್ಮ ಹಾಗೂ ಲಕ್ಷ್ಮೀದೇವಿಯರ ಬಗ್ಗೆ ಪೂರ್ಣವಾಗಿ ತಿಳಿಯದಿದ್ದರೂ ತಿಳಿದದ್ದು ಮಾತ್ರ ಪೂರ್ಣ ಹಾಗೂ ಪರಿಶುದ್ಧವಾಗಿದೆ. ಋಜುಗಣಗಳು ಎಂಬುದಾಗಿ ವಿಶಿಷ್ಟ ಯೋಗ್ಯತೆಯುಳ್ಳ ಜೀವರಾಶಿಗಳ ಸಮುದಾಯವಿದೆ. ಅಂತಹ ಋಜು ಜೀವ, ೯೮ ಜನ್ಮಗಳ ಪರ್ಯಂತ ಸಾಧನಮಾಡಿ ೯೯ ನೆಯ ಜನ್ಮದಲ್ಲಿ ವಾಯುದೇವರು ಎಂಬ ಪದವಿ ಪಡೆಯುವರು. ೨೦೦ ನೆಯದ್ದೇ ಬ್ರಹ್ಮಪದವಿ. ವಾಯುದೇವರೇ ಹನುಮ, ಭೀಮ,

ಮಧ್ವರಾಗಿ ಅವತರಿಸಿದ್ದಾರೆ. **"ವಾಯುರ್ಹಿ ಬ್ರಹ್ಮತಾಮೇತಿ ತಸ್ಮಾತ್ ಬ್ರಹ್ಮೈವ ಸ ಸ್ಮೃತಃ"** ವಾಯುದೇವರನ್ನು ಬಿಟ್ಟು ಇನ್ನಾರಿಗೂ ಬ್ರಹ್ಮಪದ ದೊರೆಯುವುದಿಲ್ಲ. **"ವಾಯೋರನ್ಯಸ್ಯ ನ ಬ್ರಹ್ಮಪದಂ ತಸ್ಮಾತ್ಸ ಏವ ಸಃ" "ವಾಯುದೇವರಿಗೆ ಸಮರಿಲ್ಲ ಜಗದೊಳು ವಾಯುದೇವರೇ ಬ್ರಹ್ಮರು"** ಎಂದು ಪ್ರಮಾಣಸೂಕ್ತಿಗಳು. ಈ ವಾಯುದೇವರು ಕೂರ್ಮರೂಪದಿಂದ ಅಂಡೋದಕದಲ್ಲಿ ಇರುವರು. ಇವರನ್ನು ವಿಷ್ಣುಕೂರ್ಮ ಧರಿಸಿದ್ದಾನೆ. ಗರುಡ, ಶೇಷ, ರುದ್ರಾದಿ ಎಲ್ಲ ದೇವತೆಗಳಿಗೆ ಗುರುಗಳು ಈ ವಾಯುದೇವರು. **ಈ ವಾಯುದೇವರೇ ಸಮುದ್ರಮಥನಕಾಲದಲ್ಲಿ ಹುಟ್ಟಿದ ಹಾಲಾಹಲ ವಿಷವನ್ನು ಪಾನಮಾಡಿದವರು. "ಕೇಶೀ ವಿಷಸ್ಯಪಾತ್ರೇಣ"** ಎಂದು ಋಗ್ವೇದ ಇದನ್ನು ವರ್ಣಿಸುವುದು. ಈ ವಾಯುದೇವರೇ ದಶಪ್ರಾಣರು. ಜೀವರ ದೇಹದಲ್ಲಿ ಅನೇಕ ಕಾರ್ಯ ನಡೆಸುವರು.

ಪ್ರಾಣ, ಅಪಾನ, ವ್ಯಾನ, ಉದಾನ, ಸಮಾನ, ನಾಗ, ಕೃಕಲ, ಕೂರ್ಮ, ದೇವದತ್ತ, ಧನಂಜಯ ಎಂಬುವು ವಾಯುರೂಪಗಳು. ಅಲ್ಲದೇ, ಪ್ರಾಣಾಪಾನಾದಿ ಐದು ರೂಪಗಳಿಂದಲೂ ಆಧ್ಯಾತ್ಮ, ಆಧಿಭೂತ, ಆಧಿದೈವಗಳಲ್ಲಿ ವಾಯುದೇವರು ಸ್ಥಿತರಾಗಿರುವರು. ಇವರಿಗೆ ಅವತಾರರೂಪಗಳಲ್ಲಿ ಕೆಲವೊಮ್ಮೆ ಕೆಲವು ಭಗವದ್ರೂಪಗಳ ವಿಷಯದಲ್ಲಿ ಅಪರೋಕ್ಷಜ್ಞಾನವು ತಿರೋಹಿತವಾಗುತ್ತದೆ. ಶ್ರೀಹರಿ ಪ್ರೀತಿಗೆ ಹೀಗಿರುವುದು. ಇಚ್ಛೆಮಾಡಿದರೆ ಅಭಿವ್ಯಕ್ತವನ್ನಾಗಿ ಮಾಡಿಕೊಳ್ಳಬಹುದು. ಮುಖ್ಯಪ್ರಾಣರ ಯಾವ ರೂಪದಲ್ಲಿಯೂ ಅಹಂ ಮಮಾಭಿಮಾನವು ಇರುವುದಿಲ್ಲ. ಈ ಕಾರಣದಿಂದಲೇ ಮಹಾಪ್ರಳಯ ಕಾಲದಲ್ಲಿ ಸೂಕ್ಷ್ಮಸತ್ವಾತ್ಮಕ ಶರೀರವು ನಾಶವಾದರೂ ಅಶರೀರಿಯೇ ಸರಿ. ಇವರನ್ನು ''ಅಮೃತ'' ಎಂದು ಉಪನಿಷತ್ತುಗಳು ಕರೆಯುತ್ತವೆ. **"ಅತಿರೋಹಿತ ವಿಜ್ಞಾನಾದ್ ವಾಯುರಪ್ಯಮೃತಃ ಸ್ಮೃತಃ"** ಅತಿರೋಹಿತವಾದ ಜ್ಞಾನ ಉಳ್ಳವರಾದ್ದರಿಂದ ಇವರು ಮುಕ್ತಪ್ರಾಯರು. ಅದಕ್ಕಾಗಿ ಇವರಲ್ಲಿ ಸರ್ವಜೀವಸ್ವರೂಪಾಂತರ್ವಾಸಿತ್ವ ಶಕ್ತಿಯುಂಟು. ಇದೇ ವಾಯುದೇವರ ವಿಶಿಷ್ಟ ಮಹಿಮಾ. ಗರುಡ, ಶೇಷ, ರುದ್ರಾದಿಗಳಿಗೆ ಈ ಶಕ್ತಿ ಇಲ್ಲ. ಮುಖ್ಯಪ್ರಾಣರಿಗೆ ಪ್ರಳಯಕಾಲದಲ್ಲಿಯೂ ನಿದ್ರಾದಿಗಳಿಲ್ಲ. ರುದ್ರಾದಿಗಳಿಂದ ತಿಳಿಯಲಾಗದ ಅನಂತಗುಣ ಮಹಿಮೋಪೇತರು ಇವರು. ಇವರಿಗೆ ಯಾರು ಸಮರು ? ಈ ವಾಯುದೇವರೇ ಜೀವೋತ್ತಮರು, ಜೀವಘನರು. ಉದ್ಗೀಥಾಖ್ಯ ಶ್ರೀಹರಿಗೆ ವಿಶಿಷ್ಟ ಪ್ರತಿಮರು. ಸಂಶಯಾದಿ ದೋಷಗಳಿಂದ ರಹಿತರಾಗಿದ್ದಾರೆ. ಆದ್ದರಿಂದಲೇ ಸರ್ವಜಗತ್ತುಗಳಿಗೆ ಗುರುಗಳು ಎಂದು ಕರೆಸಿಕೊಳ್ಳುತ್ತಾರೆ. ಶ್ರೀಹರಿಯಲ್ಲಿ ಎಲ್ಲರಿಗಿಂತ ಅತಿಹೆಚ್ಚಿನ ಭಕ್ತಿ ಇವರದು. ಹರಿಯ ಸಂಕಲ್ಪದ ವಿರುದ್ಧ ಎಂದಿಗೂ ವಾಯುದೇವರು ವರ್ತಿಸುವುದಿಲ್ಲ.



ವಾಯುದೇವರ ವಿರುದ್ಧವೂ ಹರಿ ಎಂದಿಗೂ ಏನೂ ಮಾಡುವುದಿಲ್ಲ. **"ಹನುಮನ ಮತವೇ ಹರಿಯ ಮತವು. ಹರಿಯ ಮತವೇ ಹನುಮನ ಮತವು".**

ವಿಶ್ವದ ಪ್ರತಿಯೊಂದು ಚೇತನದ ಬದುಕಿಗೆ ಆಧಾರರು. ಆದ್ದರಿಂದಲೇ ಮುಖ್ಯಪ್ರಾಣರು ಎನ್ನಿಸುವರು. ಇವರು ಇರುವವರೆಗೆ ಬದುಕಿರುವರು. ಇವರ ಕಾರ್ಯ ನಿಂತರೆ ಪ್ರಾಣ ಹೋಯಿತೆನ್ನುವರು. ಅಂತಲೇ ಇವರು ಪ್ರಾಣರು. ಈ ವಾಯುದೇವರು ಹನುಮ, ಭೀಮ, ಮಧ್ವರೆಂಬ ಮೂರು ಅವತಾರ ತಾಳಿ ಸೇವೆಗೈದು ಶ್ರೀಹರಿಯ ಪರಮಾನುಗ್ರಹದಿಂದ ಬ್ರಹ್ಮಪದವಿ ಪಡೆಯುವರು. ಇಂತಹ ಮುಖ್ಯಪ್ರಾಣರನ್ನು ಹನುಮಂತದೇವರ ರೂಪದಲ್ಲಿ ಉಪಾಸನೆ ಮಾಡುವ ಕ್ರಮ, ಜಾತಿ, ಮತ, ಭೇದವಿಲ್ಲದೇ ಭಾರತೀಯರಲ್ಲಿ ಬೆಳೆದುಬಂದಿದೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಸಮಗ್ರ ದೇಶದಲ್ಲಿ ಜಾವಾ, ಸುಮಾತ್ರಾ, ಬರ್ಮಾ ಮೊದಲಾದವುಗಳಲ್ಲಿಯೂ ಹನುಮಂತದೇವರ ಉಪಾಸನೆ, ಮಂದಿರ ಕಾಣಸಿಗುವುವು. ಹನುಮಪ್ಪ ಊರದೇವರು. ಎಲ್ಲ ಜಾತಿಯ ಜನರಿಗೂ ಉಪಾಸ್ಯದೈವ. ಆದ್ದರಿಂದಲೇ ಧರ್ಮಶಾಸ್ತ್ರದಲ್ಲಿ ''ಹನುಮಂತನ ವಿಗ್ರಹದ ಸ್ಥಾಪನೆ, ಅರ್ಚನೆ ಯಾರೇ ಮಾಡಿದ್ದರೂ ನಾವು ವಂದಿಸಬೇಕು'' ಎಂದು ಹೇಳಿದೆ. ಇನ್ನುಳಿದ ವಿಗ್ರಹ ಆರಾಧನೆಗೆ ಪ್ರತಿಷ್ಠಾಪಕರ ಯೋಗ್ಯತೆ, ವರ್ಣ ತಿಳಿಯುವ ವಿಧಾನವಿದ್ದರೆ ವಾಯುದೇವರ (ಹನುಮಂತ) ವಿಗ್ರಹಕ್ಕೆ ಮಾತ್ರ ಅಂತಹ ನಿರ್ಬಂಧವಿಲ್ಲ. ಆದ್ದರಿಂದಲೇ ಕರ್ನಾಟಕದಲ್ಲಿ ಶ್ರೀವ್ಯಾಸರಾಯರಿಂದ ಪ್ರತಿಷ್ಠಿತವಾದ ೭೩೨ ಪ್ರಾಣದೇವರಲ್ಲಿ ಹೆಚ್ಚಾಗಿ ಬ್ರಾಹ್ಮಣರೊಡನೆ ಶೂದ್ರರೂ ಅರ್ಚಕರಾಗಿದ್ದಾರೆ. ಹೀಗೆ ಪ್ರತಿ ಊರಿಗೊಂದು ಹನುಮಂತನ ಗುಡಿ ಇದ್ದೇ ಇರುವುದು. ಹನುಮಂತದೇವರ ಗುಡಿ ಇಲ್ಲದ ಯಾವ ಹಳ್ಳ-ಕೊಳ್ಳಗಳನ್ನು ನಾವು ಕಾಣಲಾರೆವು.

ಕರ್ನಾಟಕದ ಕೊಪ್ಪಳ ಜಿಲ್ಲೆಯ ಗಂಗಾವತಿ ಪಟ್ಟಣ ಸಮೀಪದಲ್ಲಿರುವ ಸುಮಾರು ೪ ಅಥವಾ ೫ ಸಾವಿರ ಜನಸಂಖ್ಯೆಯುಳ್ಳ ಪುಟ್ಟ ಗ್ರಾಮ ಡಾಣಾಪೂರ. ಈ ಗ್ರಾಮದಲ್ಲಿ ಶ್ರೀಮುಖ್ಯಪ್ರಾಣೇವರ ದೇವಸ್ಥಾನವಿದೆ. ಈ ಮೂರ್ತಿಯು ಜನಮೇಜಯ ಮಹಾರಾಜನಿಂದ ಪ್ರತಿಷ್ಠಾಪಿಸಲ್ಪಟ್ಟಿತ್ತು ಎಂದು ಕೆಲವರು ಹೇಳಿದರೆ ಒಂದೇ ಕಲ್ಲಿನಲ್ಲಿ ಉದ್ಭವವಾದ ಮುಖ್ಯಪ್ರಾಣದೇವರು ಎಂದು ಹಿರಿಯರು ತಿಳಿಸುತ್ತಾರೆ. ಆದರೆ ಹಾವೇರಿ ಜಿಲ್ಲೆಯ ಹತ್ತಿರದಲ್ಲಿರುವ ಹಾನಗಲ್ (ವಿರಾಟನಗರ) ಅಲ್ಲಿ ಕೂಡಾ ಜನಮೇಜಯ ಪ್ರತಿಷ್ಠೆಮಾಡಿದ ಮುಖ್ಯಪ್ರಾಣನ ಪ್ರತಿಮೆ ಇದ್ದಂತೆ ಈ ಡಾಣಾಪೂರದಲ್ಲಿರುವಂತಹ ಮುಖ್ಯಪ್ರಾಣ ದೇವರ ಪ್ರತಿಮೆಯಾಗಿದೆ. ಈ ದೇವರ ಸೇವೆಯನ್ನು ಕನಕಗಿರಿಯ ಸಂಸ್ಥಾನದ ಉಡಚಪ್ಪನಾಯಕನು ಮಾಡಿದ ವಿಚಾರವು ಕನಕಗಿರಿಯ ದೇವಸ್ಥಾನದ ಮುಂಭಾಗದಲ್ಲಿರುವ

ಶಿಲಾಶಾಸನದಲ್ಲಿ ಕಾಣಬಹುದಾಗಿದೆ. ಈ ಡಾಣಾಪೂರದ ಆಂಜನೇಯನ ಉತ್ಸವವು ಮಾರ್ಗಶಿರಮಾಸ ಶುಕ್ಲಪಕ್ಷ ಪೂರ್ಣಿಮಾ ದಿವಸ ನಡೆಯುತ್ತದೆ. ಅಂದು ನಡುರಾತ್ರಿ ಸುಮಾರು ೧೨ ಘಂಟೆಗೆ ದೇವಸ್ಥಾನದ ಪೂಜಾರಿ ೨ ಮೈಲಿ ದೂರವಿರುವ ತುಂಗಭದ್ರಾನದಿಗೆ ಹೋಗಿ ಸ್ನಾನವನ್ನು ಮಾಡಿಕೊಂಡು ಶುದ್ಧನಾಗಿ ದೇವರ ಅಪ್ಪಣೆಯನ್ನು ಪಡೆದು ಅಗ್ನಿಕುಂಡವನ್ನು ಪ್ರಾರಂಭಿಸುತ್ತಾನೆ. ಇಲ್ಲಿ ಜಾತಿ-ಮತಗಳ ಭೇದವಿಲ್ಲದೆ ಪ್ರತಿಯೊಬ್ಬರೂ ಸಾಲು ಪ್ರದಕ್ಷಿಣೆಯನ್ನು ಹಾಕುವುದನ್ನು ಕಾಣಬಹುದು. ಆ ದಿನ ಎತ್ತರದಲ್ಲಿ ಉತ್ಸವವನ್ನು ಕಟ್ಟಿ ಎದುರು ಹನುಮಪ್ಪನ ಕಟ್ಟೆಯ ತನಕ ಉತ್ಸವವನ್ನು ಮಾಡುತ್ತಾ ಹೋಗಿ ಸೂರ್ಯೋದಯಕ್ಕೆ ನಿಲ್ಲಿಸುತ್ತಾರೆ.

ಈ ಗ್ರಾಮದಲ್ಲಿ ಮುಖ್ಯಪ್ರಾಣನ ಜಾತ್ರೆಯು ನಡೆಯುವಾಗ ಪ್ರಾತಃಕಾಲದಲ್ಲಿ ಉತ್ಸವವು ಮುಗಿದ ಮೇಲೆ ಓಕಳಿಕುಂಡ, ಕ್ಷೀರಕುಂಡ, ದಧಿಕುಂಡ ಹಾಗೂ ಅಗ್ನಿಕುಂಡಗಳು ನಡೆಯುತ್ತವೆ. ಈ ಅಗ್ನಿಕುಂಡದಲ್ಲಿ ಅಲ್ಲಿನ ಮಾಲೀ ಗೌಡರು ಹಾಲು ಹಾಗೂ ಮೊಸರನ್ನು ಅಗ್ನಿಕುಂಡಕ್ಕೆ ಹಾಕಿದ ಮೇಲೆ ಹನುಮಂತನ ಪೂಜಾರರು ಅಗ್ನಿಯ ಮೇಲೆ ಓಡಾಡುತ್ತಾರೆ. ಭಕ್ತಿಯಿಂದ ಓಡಾಡುವ ಪೂಜಾರರ ಕಾಲಿಗೆ ಅಗ್ನಿಯು ಸ್ವಲ್ಪವೂ ಸುಡುವುದಿಲ್ಲ. ಇಲ್ಲಿಯ ಸಂಪ್ರದಾಯದ ಪ್ರಕಾರ ಅಗ್ನಿಯಲ್ಲಿ ಹೊಗೆ ಬಹಳ ಬಂದರೆ ಆ ವರ್ಷ ಗ್ರಾಮಕ್ಕೆ ಅನಿಷ್ಟ ಎಂಬುದಾಗಿಯೂ, ಅಗ್ನಿಕುಂಡದಲ್ಲಿ ಹೊಗೆ ಕಾಣದಿದ್ದರೆ ಆ ವರ್ಷ ಗ್ರಾಮಕ್ಕೆ ಶುಭ ಎಂಬುದಾಗಿ ತಿಳಿಯುತ್ತಾರೆ.

''ಇಂತಹ ಮುಖ್ಯಪ್ರಾಣನ ಸನ್ನಿಧಾನವುಳ್ಳ ಡಾಣಾಪುರಕ್ಕೆ ಶ್ರೀರಾಘವೇಂದ್ರ ಸ್ವಾಮಿ ಮಠದ ಪರಂಪರೆಯಲ್ಲಿ ಬಂದ ಮಹಾಜ್ಞಾನಿಗಳಾದ ಶ್ರೀವರದೇಂದ್ರ ತೀರ್ಥರು ಒಮ್ಮೆ ಇಲ್ಲಿಗೆ ಸಂಚಾರತ್ವೇನ ಬಂದಿದ್ದರು'' ಎಂಬ ಮಾಹಿತಿಯು ತಿಳಿದುಬರುತ್ತದೆ. ವರದೇಂದ್ರರ ಕಾಲದಲ್ಲಿ ಈ ಗ್ರಾಮವು ಜಾಹಾಗಿರ ಬಂದದ್ದು ಎಂಬ ಶಾಸನವು ಇಂದಿಗೂ ಶ್ರೀಮಠದಲ್ಲಿ ಕಾಣಬಹುದಾಗಿದೆ. ಆದರೆ ಇಂತಹ ಮಾಹಿತಿಯು ಈಗ ವಿಚಾರಿಸಿದಾಗ ಸ್ಪಷ್ಟ ದಾಖಲೆಗಳು ಸಿಗುತ್ತಾ ಇಲ್ಲ. ಡಾಣಾಪೂರದ ಮುಖ್ಯಪ್ರಾಣದೇವರ ಅರ್ಚಕರಾದ ಕಲ್ಲಪ್ಪ ಎಂಬುವವರಿಗೆ ಕಾರಣಾಂತರದಿಂದ ಬಂದ ಅಶುದ್ಧಿಯನ್ನು ವ್ಯಯನಾಮ ಸಂವತ್ಸರದ ಮಾರ್ಗಶೀರ್ಷ ಶುದ್ಧ ಪೂರ್ಣಿಮಾದ ದಿನ ಶ್ರೀಮಠದ ಪಂಡಿತರೊಬ್ಬರಿಂದ ಪಾದೋದಕ ಪ್ರೋಕ್ಷಣೆಯಿಂದ ಶುದ್ಧೀಕರಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಇಂತಹ ಪವಮಾನನು ಜಗತ್ತನ್ನು ಪ್ರಾಣರೂಪನಾಗಿ ಕಾಪಾಡುತ್ತಿದ್ದಾನೆ.

❑❑



ಲೇಖನಾಂಕ

# ಶ್ರೀರಾಯರ ಗೀತಾವಿವೃತಿಯ ವೈಶಿಷ್ಟ್ಯ

■ ಶ್ರೀ ಶ್ರೀನಿವಾಸ ಸು. ಮಠದ

ಗೀತಾ ಪ್ರಕಾಶನ, ಅಜರೇಕರ ಚಾಳ, ಮೀನಾಕ್ಷಿ ಚೌಕ, ಬಿಜಾಪುರ - ೫೮೬ ೧೦೧

ಭಗವದ್ಗೀತೆ ಪ್ರಸ್ಥಾನತ್ರಯಗಳಲ್ಲೊಂದು. ಶ್ರೀಮನ್ಮಹಾಭಾರತವೆಂಬ ಪಾರಿಜಾತದ ಮಕರಂದದಂತೆ ಇರುವ 'ಗೀತೆ' ಮಹಾಭಾರತದ ಸಾರಸರ್ವಸ್ವವೇ ಆಗಿದೆಯೆಂದರೆ ತಪ್ಪಾಗದು. ಅಂತೆಯೇ ''ಭಾರತಂ ಸರ್ವಶಾಸ್ತ್ರೇಷು ಭಾರತೇ ಗೀತಿಕಾ ವರಾ'' ಎಂಬ ಪ್ರಸಿದ್ಧಿ ಇದೆ. ಶ್ರೀಕೃಷ್ಣನು ತನ್ನ ತಾಯಿ ಯಶೋಧೆಗೆ ತನ್ನ ಪುಟ್ಟ ಬಾಯಲ್ಲಿ ಬ್ರಹ್ಮಾಂಡವನ್ನು ತೋರಿಸಿದಂತೆ, ೭೦೧ ಶ್ಲೋಕಗಳಿರುವ ಪುಟ್ಟ ಗ್ರಂಥದಲ್ಲಿ ಸಕಲ ಶಾಸ್ತ್ರಾರ್ಥಗಳನ್ನು ತುಂಬಿಸಿದ್ದಾನೆ. ಅಂತೆಯೇ ಗೀತೆಯ ಪ್ರತಿಯೊಂದು ಅಧ್ಯಾಯದ ಕೊನೆಯಲ್ಲಿ ''ಶ್ರೀಮದ್ ಭಗವದ್ಗೀತಾಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಯೋಗಶಾಸ್ತ್ರೇ'' ಎಂಬುದಾಗಿ ಹೇಳಲಾಗಿದೆ. ಇಂಥ ಭಗವದ್ಗೀತೆಗೆ ಶ್ರೀಮದಾನಂದತೀರ್ಥ ಭಗವತ್ಪಾದರು ಗೀತಾಭಾಷ್ಯ, ಗೀತಾತಾತ್ಪರ್ಯ ಎಂಬ ಎರಡು ವ್ಯಾಖ್ಯಾನಗಳನ್ನು ಬರೆದಿದ್ದಾರೆ. ಈ ಎರಡು ವ್ಯಾಖ್ಯಾನಗಳು ಸೂರ್ಯ, ಚಂದ್ರರ ಸದೃಶವಾಗಿದೆಯೆಂದು ಶ್ರೀಸುಮಧ್ವ ವಿಜಯದಲ್ಲಿ ತಿಳಿಸಿರುವುದು ಗಮನಾರ್ಹ.

**"ಗೀತಾತಾತ್ಪರ್ಯಭಾಷ್ಯಾಭ್ಯಾಮಾಭ್ಯಾಂ ವಿಶ್ವಂ ಪ್ರಕಾಶ್ಯತೇ ।**
**ಗೋಗಣೈರಪ್ರತೀಕಾರ್ಯೈರರ್ಕೇಂದುಭ್ಯಾಮಿವಾಧಿಕಮ್ ॥"** - (ಶ್ರೀಸು.ವಿ. ೧೫-೭೫)

ಶ್ರೀರಾಘವೇಂದ್ರತೀರ್ಥ ಶ್ರೀಪಾದಂಗಳವರು ಈ ಗೀತಾಭಾಷ್ಯ ಮತ್ತು ಗೀತಾತಾತ್ಪರ್ಯಗಳಲ್ಲಿ ಹೇಳಿರುವ ಅರ್ಥಸಂಗ್ರಹವನ್ನು 'ಗೀತಾವಿವೃತಿ' ಎಂಬ ಸ್ವತಂತ್ರಕೃತಿಯಲ್ಲಿ ಮಾಡಿಕೊಟ್ಟಿದ್ದಾರೆ.

ಇದರ ವೈಶಿಷ್ಟ್ಯದ ಕುರಿತು ಇಲ್ಲಿ ವಿವೇಚಿಸಲಾಗಿದೆ-

**"ಅನಪೇಕ್ಷಃ ಶುಚಿರ್ದಕ್ಷ ಉದಾಸೀನೋ ಗತವ್ಯಥಃ ।**
**ಸರ್ವಾರಂಭಪರಿತ್ಯಾಗೀ ಯೋ ಮದ್ಭಕ್ತಃ ಸ ಮೇ ಪ್ರಿಯಃ ॥"** -(ಭಗವದ್ಗೀತೆ ೧೨-೧೬)

ಭಗವತ್ಪ್ರೀತಿಯನ್ನು ಬಿಟ್ಟು ಬೇರೆ ಏನನ್ನೂ ಅಪೇಕ್ಷಿಸದವನು, ಅಂತರ-ಬಾಹ್ಯ ಶುದ್ಧಿ ಉಳ್ಳವನು, ಭಗವಂತನ ಆರಾಧನೆಯಲ್ಲಿ ದಕ್ಷನಾದವನು, ಉಪಕಾರ - ಅಪಕಾರ ಮಾಡುವುದರಲ್ಲಿ ಉಪೇಕ್ಷೆಯಿಂದ ಇರುವವನು, ಪರರು ಅಪಕಾರ ಮಾಡಿದಾಗ ದುಃಖರಹಿತನು, ಭಗವಂತನಿಗೆ ಸಲ್ಲದ ಎಲ್ಲ ಕಾರ್ಯಗಳನ್ನು ತ್ಯಜಿಸಿದವನು, ಎಲ್ಲಕ್ಕಿಂತ ಹೆಚ್ಚಾಗಿ ನನ್ನ ಭಕ್ತನಾಗಿರುವವನು ಯಾರೋ ಅವನು ನನಗೆ ಪ್ರಿಯನು. ಇಲ್ಲಿ

‘ಸರ್ವಾರಂಭಪರಿತ್ಯಾಗೀ’ ಪದಕ್ಕೆ ಶ್ರೀರಾಯರು ನಾಲ್ಕು ಮಜಲಿನ ಅರ್ಥಗಳನ್ನು ತಿಳಿಸಿಕೊಟ್ಟಿರುವುದು ಗಮನಾರ್ಹವಾಗಿದೆ –

೧. ಸರ್ವಾರಂಭಪರಿತ್ಯಾಗೀ = **ಅವೈಷ್ಣವ ಸರ್ವಾರಂಭ ಪರಿತ್ಯಾಗೀ**
= ವಿಷ್ಣುಸಂಬಂಧಿಯಲ್ಲದ ಎಲ್ಲ ಕರ್ಮಗಳನ್ನು ಆರಂಭಿಸದಿರುವವನು.

೨. ಸರ್ವಾರಂಭಪರಿತ್ಯಾಗೀ = **ಸರ್ವಾರಂಭ ಅಭಿಮಾನತ್ಯಾಗೀ**
= ಎಲ್ಲ ಕರ್ಮಗಳನ್ನು ತಾನೇ ಮಾಡುವೆನೆಂಬ ಅಭಿಮಾನ ಬಿಟ್ಟವನು.

೩. ಸರ್ವಾರಂಭಪರಿತ್ಯಾಗೀ = **ಸರ್ವಾರಂಭ ಫಲತ್ಯಾಗೀ**
= ಎಲ್ಲ ಕರ್ಮಗಳಲ್ಲಿ ಫಲಕಾಮನೆಯನ್ನು ಬಿಟ್ಟವನು.

೪. ಸರ್ವಾರಂಭಪರಿತ್ಯಾಗೀ = **ಸರ್ವಾರಂಭ ಸಮರ್ಪಣರೂಪ ತ್ಯಾಗವಾನ್**
= ಎಲ್ಲ ಕರ್ಮಗಳನ್ನು ಭಗವಂತನಲ್ಲಿ ಸಮರ್ಪಣ ಮಾಡುವವನು.

ಇದೇ ರೀತಿಯಾಗಿ ಹದಿನೆಂಟನೆಯ ಅಧ್ಯಾಯದ ಶ್ಲೋಕವೊಂದಕ್ಕೆ ಮಾರ್ಮಿಕವಾದ ಅರ್ಥಗಳನ್ನು ಬರೆದಿರುವರು –

**“ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।**
**ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ ॥”** –(ಶ್ರೀಸು.ವಿ.೧೮-೬೬)

ಅನ್ಯರ ಪ್ರೀತಿಗಾಗಿ ಮಾಡುವ ಎಲ್ಲ ಕರ್ಮಗಳನ್ನು ತೊರೆದು ನನ್ನನ್ನೇ ಶರಣು ಹೊಂದು. ನಾನು ನಿನ್ನನ್ನು ಎಲ್ಲ ಪಾಪಗಳಿಂದ ಮುಕ್ತನನ್ನಾಗಿಸುವೆ. ಶೋಕ ಮಾಡಬೇಡ. ಇಲ್ಲಿ ‘ಸರ್ವಧರ್ಮಾನ್ ಪರಿತ್ಯಜ್ಯ’ ಪದಕ್ಕೆ ಎರಡು ಮಜಲಿನ ಅರ್ಥಗಳನ್ನು ತಿಳಿಸಿಕೊಟ್ಟರು.

೧. ಸರ್ವಧರ್ಮಾನ್ ಪರಿತ್ಯಜ್ಯ = **ಸರ್ವಧರ್ಮಫಲಾನಿ ಪರಿತ್ಯಜ್ಯ**
= ಎಲ್ಲ ಕರ್ಮಗಳ ಫಲತ್ಯಾಗ ಮಾಡಿ – (ನನ್ನನ್ನು ಶರಣುಹೊಂದು)

೨. ಸರ್ವಧರ್ಮಾನ್ ಪರಿತ್ಯಜ್ಯ = **ಅವೈಷ್ಣವ ಸರ್ವಧರ್ಮಾನ್ ಪರಿತ್ಯಜ್ಯ**
= ಎಲ್ಲ ವಿಷ್ಣುಸಂಬಂಧಿಯಲ್ಲದ ಕರ್ಮಗಳನ್ನು ಬಿಟ್ಟು (ನನ್ನನ್ನು ಶರಣುಹೊಂದು)

ಹೀಗೆ ಶ್ರೀರಾಘವೇಂದ್ರಗುರುಸಾರ್ವಭೌಮರು ‘ಗೀತಾವಿವೃತಿ’ಯಲ್ಲಿ ಅಪೂರ್ವವಾದ ಅರ್ಥಗಳನ್ನು ತಿಳಿಸಿಕೊಟ್ಟು ಉಪಕರಿಸಿದ್ದಾರೆ. ಅವರ ಈ ಉಪಕ್ರಕ್ಕೆ ‘ಭೂಯಿಷ್ಠಾಂ ತೇ ನಮ ಉಕ್ತಿಂ ವಿಧೇಮ’ ಎಂಬುದಾಗಿ ಹೇಳಬೇಕಷ್ಟೇ.

❑❑



## ಪರ್ಯಟನ

### ಹರಿಕಥಾಮೃತಸಾರ ಲಕ್ಷ ಲೇಖನ ಯಜ್ಞಕ್ಕೆ ಚಾಲನೆ

ಜಗದ್ಗುರು ಶ್ರೀಮನ್ಮಧ್ವಾಚಾರ್ಯ ಮೂಲಮಹಾಸಂಸ್ಥಾನಾಧೀಶ್ವರರಾದ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರು ಹಾಗೂ ಅವರ ಉತ್ತರಾಧಿಕಾರಿಗಳಾದ ಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರು ಮಂತ್ರಾಲಯ ಕ್ಷೇತ್ರದಲ್ಲಿ ಹರಿಕಥಾಮೃತಸಾರ ಲಕ್ಷ ಲೇಖನ ಯಜ್ಞದ ಸಲುವಾಗಿ ಮುದ್ರಿಸಿದ ಹರಿಕಥಾಮೃತಸಾರ ಗ್ರಂಥವನ್ನು ಬಿಡುಗಡೆಗೊಳಿಸಿದರು. ಶ್ರೀಕರಡಿಗುಡ್ಡ ಮುಖ್ಯಪ್ರಾಣ ಸೇವಾ ಟ್ರಸ್ಟ್‌ನ ವತಿಯಿಂದ ಕನಕಗಿರಿಯ ಕರಡಿಗುಡ್ಡದಲ್ಲಿ ನಿರ್ಮಿಸಲು ಉದ್ದೇಶಿಸಿರುವ ‘ಹರಿಕಥಾಮೃತಸಾರ ಭವನ’ದ ರೂವಾರಿಗಳಾದ ಶ್ರೀಬಾಲಗೋಪಾಲದಾಸರು ಹಾಗೂ ಪ್ರಾಣೇಶ್ ಜೀವಾಜಿಯವರು ಉಪಸ್ಥಿತರಿದ್ದರು. ಮಂತ್ರಾಲಯ ಮಠದ ಉಭಯ ಶ್ರೀಪಾದರ ಅಧ್ಯಕ್ಷತೆಯಲ್ಲಿ ಬೆಂಗಳೂರಿನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಸುಶಮೀಂದ್ರತೀರ್ಥ ಶ್ರೀಪಾದಂಗಳವರು ಜ್ಯೋತಿ ಬೆಳಗುವುದರ ಮೂಲಕ ಲಕ್ಷ ಲೇಖನ ಯಜ್ಞಕ್ಕೆ ಚಾಲನೆ ನೀಡಿದರೆ ಉತ್ತರಾಧಿಕಾರಿಗಳಾದ ಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರು ಹರಿಕಥಾಮೃತಸಾರದ ಪ್ರಥಮ ಶ್ಲೋಕವನ್ನು ಪುಸ್ತಕದಲ್ಲಿ ರಚಿಸುವುದರ ಮೂಲಕ ಈ ಲೇಖನ ಯಜ್ಞಕ್ಕೆ ನಾಂದಿ ಹಾಡಿದರು. ಕರಡಿಗುಡ್ಡದಲ್ಲಿ ಸುಮಾರು ೬೦ ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಹರಿಕಥಾಮೃತಸಾರ ಭವನವನ್ನು ನಿರ್ಮಿಸುವುದಾಗಿಯೂ, ಒಂದು ಲಕ್ಷ ಜನರಿಗೆ ಉಚಿತವಾಗಿ ಹರಿಕಥಾಮೃತಸಾರ ಪುಸ್ತಕವನ್ನಿತ್ತು, ಅದನ್ನು ಅವರುಗಳಿಂದ ಮತ್ತೊಂದು ಪುಸ್ತಕದಲ್ಲಿ ಬರೆಯಿಸಿ, ಅವುಗಳನ್ನು ಹಿಂಪಡೆದು ಹರಿಕಥಾಮೃತಸಾರ ಭವನದಲ್ಲಿ ಶಾಶ್ವತ ಪ್ರದರ್ಶನಗೊಳಿಸಲಾಗುವುದು ಎಂದು ಮುಖ್ಯಸ್ಥರಾದ ಶ್ರೀಬಾಲಗೋಪಾಲದಾಸರು ತಿಳಿಸಿದರು. ಇದೇ ಸಂದರ್ಭದಲ್ಲಿ ಶ್ರೀಪಾದಂಗಳವರ ಆಪ್ತಕಾರ್ಯದರ್ಶಿಗಳಾದ ರಾಜಾ. ಎಸ್. ರಾಜಗೋಪಾಲಾಚಾರ್ಯರು ಉಪಸ್ಥಿತರಿದ್ದು, ಈ ಲಕ್ಷ ಲೇಖನ ಯಜ್ಞವು ವಿಶೇಷ ಯೋಜನೆಯಾಗಿದ್ದು, ಇದು ಪೂರ್ಣಗೊಂಡಾಗ ಹರಿಕಥಾಮೃತಸಾರದ ಕರ್ತೃಗಳಾದ ಶ್ರೀಜಗನ್ನಾಥದಾಸರಿಗೆ ನಾವು ವಿಶಿಷ್ಟಸೇವೆಯೊಂದನ್ನು ಸಲ್ಲಿಸಿದಂತಾಗುತ್ತದೆ ಎಂದು ನುಡಿದರು ಹಾಗೂ ಶ್ರೀಸುಯತೀಂದ್ರತೀರ್ಥ ಶ್ರೀಪಾದಂಗಳವರ ಪೂರ್ವಾಶ್ರಮ ಪುತ್ರರಾದ ಶ್ರೀಸುಯಮೀಂದ್ರಾಚಾರ್ಯರು ಇದೇ ಸಂದರ್ಭದಲ್ಲಿ ಮಾತನಾಡಿ ಹರಿಕಥಾಮೃತಸಾರ ನಿತ್ಯಪಠಣದಿಂದ ಹಾಗೂ ರಚನೆಯಿಂದ ಮನಸ್ಸು ಉಲ್ಲಾಸಭರಿತವಾಗುವುದು. ಈ ಯೋಜನೆ ಅತ್ಯಂತ ಶ್ಲಾಘನೀಯವಾದದ್ದು. ಮನೆ-ಮನೆಗಳಿಗೆ ಈ ಯೋಜನೆ ತಲುಪಿದಲ್ಲಿ, ಇವರ ಶ್ರಮ ಸಾರ್ಥಕವಾದೀತೆಂದು ನುಡಿದರು.

**ವರದಿ : ಸೂರೀಂದ್ರ**